ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 8

ಫೆಬ್ರವರಿ 24, 2008

ರೂ. 5/-


ಕಮರುತ್ತಿರುವ ಹಾಸ್ಟೆಲ್ ವಿದ್ಯಾರ್ಥಿಗಳ ಭವಿಷ್ಯ



ಹಾಸನ : ಮಾನಭಂಗ ಆರೋಪಿಯ ಆತ್ಮಹತ್ಯೆ ದಲಿತರಿಗೆ ಬಹಿಷ್ಕಾರ !!



ರೈಲ್ವೆ ನೇಮಕಾತಿ : ಇದೆಂಥಾ ಪ್ರತಿಭಟನೆ?



ತ್ರಿಪುರಾ ಎಡರಂಗ ಮತ್ತೊಂದು ಗೆಲುವಿನತ್ತ



ದ್ವಾರಕನಾಥ್ : 'ಕೋಲಾ ಬಾಟಲಿ ನೀರು ತೀರ್ಥವೇ?'

ಇದ್ದದ್ದು ಇದ್ದಾಂಗ.....

ತರಾತುರಿ

"ಅಂದು ಕೊಂಡಂತೆಯೇ ಆಗಿದ್ದರೆ ಫೆಬ್ರವರಿ ಹದಿನೆಂಟಕ್ಕೆ ಮದುವೆ ಆಗಬೇಕಿತ್ತು. ಆದರೆ ಒಂದು ಸಲ ಮಾಧ್ಯಮದಲ್ಲಿ ಮದುವೆ ಸುದ್ದಿ ಬರುತ್ತಲೇ ಎಲ್ಲವೂ ಲೆಕ್ಕಚಾರ ತಪ್ಪಿತು. ಅಭಿಮಾನಿಗಳ ಒತ್ತಡ ತಾಳಲಾರದೇ ನಾನು ಮೊಬೈಲ್ ಸ್ವಿಚ್ ಆಫ್ ಮಾಡಬೇಕಾಯಿತು. ಅಡಕಮಾರನಹಳ್ಳಿಯ ನಮ್ಮ ಮನೆಯ ತನಕ ಹೋಗಿ ಅಭಿಮಾನಿಗಳು ಒತ್ತಾಯ ಹೇರ ತೊಡಗಿದರು. ಇದರಿಂದಾಗಿ ತರಾತುರಿಯಲ್ಲಿ ಮದುವೆ ಆಗಬೇಕಾಯಿತು."

ಗಣೇಶ್, ಚಿತ್ರನಟ

★

ಸಹಕರಿಸುವುದಿಲ್ಲ

'ಅಮೇರಿಕಾದೊಂದಿಗೆ ವ್ಯೂಹಾತ್ಮಕ (ಸಮರ) ಮೈತ್ರಿ ಬಾಂಧವ್ಯದ ವೃದ್ಧಿಗೆ ಬಯಸಿರುವ ಯುಪಿಎ ಸರ್ಕಾರಕ್ಕೆ ಎಡಪಕ್ಷಗಳು ಸಹಕರಿಸುವುದಿಲ್ಲ, ಒಂದು ವೇಳೆ ಕಾಂಗ್ರೆಸ್ ಮೈತ್ರಿ ಮಾಡಿಕೊಳ್ಳಲು ಬಯಸಿದರೆ ಚುನಾವಣೆಗೆ ಸಿದ್ದವಾಗಿ ಹೊಸದಾಗಿ ಜನಾದೇಶ ಪಡೆದು ಕಾರ್ಯಪ್ರವೃತ್ತವಾಗಲಿ"

ಪ್ರಕಾಶ್ ಕಾರಟ್, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ

★

ವಸೂಲಿ ಮಾತ್ರ

"ರಸ್ತೆಯಲ್ಲಿ ಸಂಚರಿಸಲು ಹಣ, ಕುಡಿಯುವ ನೀರಿಗೆ ಹಣ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ವಿಪರ್ಯಾಸ. ಜನರಿಂದ ನಾನಾ ಬಗೆಯ ತೆರಿಗೆ ವಸೂಲಿ ಮಾಡುವ ಸರ್ಕಾರ ಮೂಲ ಸೌಕರ್ಯವನ್ನು ಮಾತ್ರ ನೀಡುತ್ತಿಲ್ಲ. ತೆರಿಗೆ ಹಣ ಸೋರಿಕೆಯಾಗುತ್ತಿದೆ, ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗವಾಗುತ್ತಿಲ್ಲ'

ವಿಜೆಕೆ ನಾಯರ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

ಈ ಸಂಗತಿ

ಕರ್ನಾಟಕದಲ್ಲಿ ಐಟಿ ಬೆಳವಣಿಗೆ

2005-06 ಮತ್ತು 2006-07ನೆ ಹಣಕಾಸು ವರ್ಷದಲ್ಲಿ ಕರ್ನಾಟಕ ಕ್ರಮವಾಗಿ ಶೇಕಡ 7.5 ಮತ್ತು ಶೇಕಡ 7.9ರಷ್ಟು ಪ್ರಗತಿ ಸಾಧಿಸಿದೆ. 2007-08ರಲ್ಲಿ ಈ ಪ್ರಮಾಣ ಸ್ವಲ್ಪ ಏರಿಕೆ ಕಂಡಿದ್ದು ಶೇಕಡ 9.2ಕ್ಕೆ ತಲುಪಿದೆ. ಭಾರತದಲ್ಲಿ ಅತಿ ಹೆಚ್ಚು ಕೈಗಾರಿಕೆಗಳನ್ನು ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದ್ದರೂ ದೇಶದ ಒಟ್ಟಾರೆ ಆರ್ಥಿಕ ಪ್ರಗತಿ ಪ್ರಮಾಣಕ್ಕೆ ಹೋಲಿಸಿದರೆ ಕಡಿಮೆ ಇದೆ. ಐಟಿ, ಬಿಟಿ ಕ್ಷೇತ್ರದಲ್ಲಿ ರಾಜ್ಯ ಉಳಿದೆಲ್ಲ ರಾಜ್ಯಗಳನ್ನು ಹಿಂದಿಕ್ಕಿದೆ.

ಮಾಹಿತಿ ತಂತ್ರಜ್ಞಾನ ಮತ್ತು ಸಂಬಂಧಿತ ಸೇವಾ ವಲಯದ ರಫ್ತು ಮೂರು ವರ್ಷಗಳಲ್ಲಿ ಭಾರಿ ಅಭಿವೃದ್ಧಿ ಸಾಧಿಸಿದೆ. 2004ರಲ್ಲಿ 18,000 ಕೋಟಿ ರೂ. ನಷ್ಟಿದ್ದ ರಫ್ತು ಪ್ರಮಾಣ 2007ರ ವೇಳೆಗೆ ಮೂರು ಪಟ್ಟು ಹೆಚ್ಚಾಗಿದ್ದು 55,000 ಕೋಟಿ ರೂ. ಮೀರಿದೆ. ದೇಶದ ಒಟ್ಟು ಐಟಿ ರಫ್ತಿನಲ್ಲಿ ಕರ್ನಾಟದ್ದು ಸಿಂಹ ಪಾಲಾಗಿದ್ದು ಶೇಕಡ 40ರಷ್ಟಿದೆ. ಬೆಂಗಳೂರು ಮಾತ್ರವಲ್ಲದೆ ಎರಡನೇ ಮತ್ತು ಮೂರನೆ ದರ್ಜೆ ನಗರಗಳಾದ ಮೈಸೂರು(392 ಕೋಟಿ ರೂ.), ಹುಬ್ಬಳ್ಳಿ(92), ಮಂಗಳೂರು/ಮಣಿಪಾಲ(570 ಕೋಟಿ ರೂ.) ನಗರಗಳ ಪಾಲು ಗಣನೀಯ ಪ್ರಮಾಣದಲ್ಲಿದೆ.

ಪಟ್ಟಿ-1

ಐಟಿ ರಫ್ತು ಪ್ರಮಾಣ (ಕೋಟಿ ರೂ.ಗಳಲ್ಲಿ)

ವರ್ಷ	ಕರ್ನಾಟಕ	ಭಾರತ	ಕರ್ನಾಟಕ ಶೇಕಡಾವಾರು
2004	18,000	50,000	31.16
2005	27,000	77,000	34.46
2006	37,600	1,04,000	36.22
2007	55,000	1,35,000	40.10

ಕರ್ನಾಟಕದ ನೆರೆ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದ ಪಾಲು ಕೆಳಗಿನಂತಿದೆ.

ಕರ್ನಾಟಕ 37,000 ಕೋಟಿ ರೂ.

ತಮಿಳುನಾಡು 14,155 ಕೋಟಿ ರೂ.

ಆಂಧ್ರ ಪ್ರದೇಶ 12,521 ಕೋಟಿ ರೂ.

ಕೇರಳ 296 ಕೋಟಿ ರೂ.

ಮಾಹಿತಿ ತಂತ್ರಜ್ಞಾನ ವಲಯ ಇಷ್ಟೊಂದು ವೇಗವಾಗಿ ಅಭಿವೃದ್ದಿಯಾಗುತ್ತಿದ್ದರೂ ಈ ವಲಯದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯ ಪರಿಸ್ಥಿತಿ ಅಧೋಗತಿಯಾಗಿದೆ. ದಿನಕ್ಕೆ 12ರಿಂದ 15ಗಂಟೆ ಕಾಲ ಕೆಲಸ ಮಾಡಬೇಕಾಗಿದೆ. ಇದರಿಂದ ಅವರ ಆರೋಗ್ಯದಲ್ಲಿ ಹಲವಾರು ಏರುಪೇರುಗಳು ಕಂಡು ಬರುತ್ತಿವೆ ಎಂದು ಹಲವಾರು ಅಧ್ಯಯನಗಳಿಂದ ಈಗಾಗಲೇ ಬೆಳಕಿಗೆ ಬಂದಿದೆ. ಈ ವಲಯದಲ್ಲಿ ಮಾಹಿತಿ ತಂತ್ರಜ್ಞಾನ ಕಂಪನಿಗಳಲ್ಲಿ ಉತ್ತಮ ವೇತನ ಪಾವತಿಸಲಾಗುವುದಾದರೂ ಕಾಲ್‌ಸೆಂಟರ್, ಮುದ್ರಣ ಮತ್ತಿತರ ವಿಭಾಗಗಳಲ್ಲಿ ಅತಿ ಕಡಿಮೆ ವೇತನ ನೀಡಲಾಗುತ್ತಿದೆ. ಇದರೊಂದಿಗೆ ಉತ್ತಮವಾದ ಕೆಲಸದ ವಾತಾವರಣವೂ ಇರುವುದಿಲ್ಲ. ಮಹಿಳಾ ಸಿಬ್ಬಂದಿಗೆ ಅಗತ್ಯವಾದ ಭದ್ರತೆಯನ್ನೂ ಒದಗಿಸಿಲ್ಲ.

ಮುಂಚೂಣಿಯಲ್ಲಿರುವ ಕೆಲವು ಕಂಪನಿಗಳು ಉತ್ತಮ ವೇತನ ನೀಡುತ್ತವೆಯಾದರೂ ಉಳಿದ ಕಂಪನಿಗಳಲ್ಲಿ ದುಡಿಮೆಗೆ ತಕ್ಕಂತೆ ವೇತನ ನೀಡುತ್ತಿಲ್ಲ. ಸಿಬ್ಬಂದಿಯ ತೀವ್ರ ದುಡಿಮೆಯಿಂದ ಗಳಿಸುವ ಹೆಚ್ಚಿನ ಲಾಭದಲ್ಲಿ ಸಿಂಹ ಪಾಲನ್ನು ಮಾಲಿಕರೇ ಕಬಳಿಸುತ್ತಾರೆ.

ರಾಜ್ಯದಲ್ಲಿ ದೇಶೀಯ ಕಂಪನಿಗಳಿಗಿಂತಲೂ ಹೆಚ್ಚಾಗಿ ವಿದೇಶಿ ಕಂಪನಿಗಳೇ ಕಾರ್ಯನಿರ್ವಹಿಸುತ್ತಿವೆ. 10 ಸಾವಿರ ಸಿಬ್ಬಂದಿಗಿಂತಲೂ ಹೆಚ್ಚು ನೌಕರರನ್ನು ಹೊಂದಿರುವ 13 ಕಂಪನಿಗಳಲ್ಲಿ 7 ವಿದೇಶಿ ಕಂಪನಿಗಳಾಗಿವೆ. ಅಮೆರಿಕ ಮತ್ತು ಯೂರೋಪ್‌ನ 682 ಕಂಪನಿಗಳು, 1685 ಮಾಹಿತಿ ತಂತ್ರಜ್ಞಾನ ಕಂಪನಿಗಳು ಹಾಗೂ 131 ಜೈವಿಕ ತಂತ್ರಜ್ಞಾನ ಕಂಪನಿಗಳಲ್ಲಿ ಹೆಚ್ಚಿನ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಉದ್ಯೋಗಿಗಳು ದುಡಿಮೆಯಿಂದ ಗಳಿಸುವ ಹೆಚ್ಚಿನ ಆದಾಯ ಬಹುರಾಷ್ಟ್ರೀಯ ಮತ್ತು ಗುತ್ತಿಗೆಗಳನ್ನು ನೀಡುವ ಹಣಕಾಸು ಸಂಸ್ಥೆಗಳ ಪಾಲಾಗುತ್ತಿದೆ.

ಜಾಗತಿಕ ಸ್ಪರ್ಧೆ, ರೂಪಾಯಿ ಮೌಲ್ಯ ಕುಸಿತದಿಂದ ಆದಾಯ ಕಡಿಮೆಯಾಗಿದೆ ಎಂಬ ನೆಪವೊಡ್ಡಿ ಆ ನಷ್ಟವನ್ನು ನೌಕರರ ಮೇಲೆ ಹೇರುವ ಮೂಲಕ ನೌಕರರನ್ನು ಇನ್ನಷ್ಟು ಸಂಕಷ್ಟಕ್ಕೆ ಸಿಲುಕಿಸುತ್ತಿವೆ. ಇದು ಎಲ್ಲ ಕೈಗಾರಿಕೆಗಳಲ್ಲಿನ ಕಾರ್ಮಿಕರ ಪರಿಸ್ಥಿತಿಯೇ ಆದರೂ ಮಾಹಿತಿ ತಂತ್ರಜ್ಞಾನ ವಲಯಕ್ಕೆ ಸಂಬಂಧಿಸಿ ಹೇಳುವುದಾದರೆ ಅತ್ಯಂತ ಸೂಕ್ಷ್ಮ ವಿಷಯವಾಗಿದೆ.

ಕಾರ್ಮಿಕರು ಎದುರಿಸುತ್ತಿರುವ ಇಂತಹ ಪರಿಸ್ಥಿತಿ ಸುಧಾರಣೆಗೆ ಹೋರಾಟಗಳನ್ನು ರೂಪಿಸಲು ಕಾರ್ಮಿಕ ಸಂಘಟನೆಗಳು ಇಲ್ಲದ ಕಾರಣ ಸಿಬ್ಬಂದಿ ಒಂದು ಕಂಪನಿಯಿಂದ ಮತ್ತೊಂದು ಕಂಪನಿಗೆ ಅಲೆದಾಡುತ್ತಿದ್ದಾರೆ. ಮಧ್ಯದಲ್ಲೇ ಕೆಲಸ ಬಿಡುವ ಈ ಪ್ರಮಾಣ ಬೆಂಗಳೂರಿನಲ್ಲಿ ಅತಿ ಹೆಚ್ಚು ಶೇಕಡ 35ರಿಂದ 40ರಷ್ಟಿದೆ. ಚೆನ್ನೈ, ಹೈದರಾಬಾದ್‌ಗಳಲ್ಲಿ ಈ ಪ್ರಮಾಣ ಶೇಕಡ 10ರಷ್ಟಿದೆ. ಕಾರ್ಮಿಕರು ಎದುರಿಸುತ್ತಿರುವ ಈ ಸಮಸ್ಯೆಗಳು ಕಾರ್ಮಿಕ ಸಂಘಟನೆಗಳನ್ನು ಕಟ್ಟುವ ಅಗತ್ಯತೆಯನ್ನು ತೋರಿಸುತ್ತದೆ.

ಚುಚ್ಚುಮದ್ದು

■ ಬಿಜೆಪಿ ತೆಕ್ಕೆಗೆ ಬಸವರಾಜ ಬೊಮ್ಮಾಯಿ - ಸುದ್ದಿ

→ ಅರೇ! ಹಾವಿನ ಬಾಯಿಗೆ ಬಿತ್ತಲ್ಲ ಮತ್ತೊಂದು ಕಪ್ಪೆ.

★

■ ಹಂಪಿಯ ಮೇಲೆ ಈಗಲೂ ಆಕ್ರಮಣ ನಡೆಯುತ್ತಿದೆ. ಹಿಂದೆ ಅನ್ಯಧರ್ಮಿಯರು, ಈಗ ಉಗ್ರರು ದಾಳಿ ಮಾಡುತ್ತಿದ್ದಾರೆ.

ಡಾ: ಎಂ.ಚಿದಾನಂದಮೂರ್ತಿ, ಖ್ಯಾತ ಸಂಶೋಧಕರು

→ ಹಂಪಿಯಲ್ಲಿ ಬರೀ ವೈಷ್ಣವ ದೇವಾಲಯಗಳು ಮಾತ್ರ ಹಾನಿಗೊಳಗಾಗಿವೆಯಲ್ಲ! ಯಾಕೆ ಅಂತ ಸ್ವಲ್ಪ ಸಂಶೋಧಿಸಬಾರದೇ?

★

ಗೊತ್ತಿರಲಿಲ್ಲವ ?

■ "ಜ್ಯಾತ್ಯಾತೀತ, ಕಮ್ಯುನಿಸ್ಟ್ ಎಂಬ ಭಾವನೆ ಬಡ ಹಾಗೂ ಮಾಧ್ಯಮವರ್ಗದವರಲಿಲ್ಲ. ಅದು ಏನಿದ್ದರೂ ಕೆಲ ರಾಜಕೀಯ ಪಕ್ಷಗಳ ಮನದಲ್ಲಿದೆ. ಜನರಿಗೆ ಬೇಕಾಗಿರುವುದು ದೇಶದ ಸುರಕ್ಷತೆ ಕಾಯುವ ದಕ್ಷ ಹಾಗೂ ಅಭಿವೃದ್ಧಿಪರ ಆಡಳಿತ"

– ಬಸವರಾಜ ಬೊಮ್ಮಾಯಿ

ಜೆಡಿ(ಯು) ಬಿಟ್ಟು ಬಿಜೆಪಿ ಸೇರುವಾಗ

→ ನಾವು ಜಾತ್ಯಾತೀತರು, ಕೋಮುವಾದಿಗಳಲ್ಲ ಅಂತ ಆಗಾಗ ಕಿರುಚುತ್ತಿದ್ದಿರಲ್ಲ, ಆಗ ಇದೆಲ್ಲಾ ಗೊತ್ತಿರಲಿಲ್ಲವೇ?

★

ಏನು ಉಳಿದಿದೆ?

■ "ವಿಶ್ವದಲ್ಲಿ ಒಂದೊಂದು ದೇಶಗಳಲ್ಲಿ ಒಂದೊಂದು ಬಲಗಳು ದೊಡ್ಡವಾಗುತ್ತವೆ. ಮುಂದುವರಿದ ದೇಶಗಳಿಗೆ ಹಣ ಮತ್ತು ಬುದ್ಧಿ ಬಲಗಳು ದೊಡ್ಡದಾದರೆ ಭಾರತದಲ್ಲಿ ಅಧ್ಯಾತ್ಮಿಕ ಬಲವೇ ದೊಡ್ಡದು. ಇಲ್ಲಿ ಪ್ರಜಾತಂತ್ರ ವ್ಯವಸ್ಥೆ ಜೀವಂತವಾಗಿದೆಯೆಂದರೆ ಅದಕ್ಕೆ ಜನರ ಶಾಂತಿ, ಸಹನೆ, ಸಹಿಷ್ಣುತೆ ಕಾರಣ. ಗೆಲಿಲಿಯೋ ಸೂರ್ಯನ ಸುತ್ತ ಭೂಮಿ ಸುತ್ತುತ್ತದೆ ಎಂಬ ಸತ್ಯವನ್ನು ಹೇಳಿದಾಗ ಅದನ್ನು ಜನ ನಂಬದೇ ವಿಷ ಕುಡಿಸಿದರು. ನಮ್ಮ ದೇಶದಲ್ಲಿ ಯಾವ ದಾರಿಯಲ್ಲಿ ಹೋದರೂ ಶಾಂತಿಯ ಸಂಕೇತವಾದ ಮಠ, ಮಂದಿರಗಳು ದೇವಾಲಯಗಳು ಸಿಗುತ್ತವೆ"

– ಎಲ್.ಕೆ.ಅಡ್ವಾಣಿ

ಹೊಳಲ್ಕೆರೆ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ

→ ವೈಚಾರಿಕತೆ, ಭೌತವಾದ ಸಾರಿದ ಚಾರ್ವಾಕರ ಬಗ್ಗೆ ಬೈಗುಳ ನಿಂದನೆ ಬಿಟ್ಟು ಬೇರೆ ಏನು ಉಳಿದಿದೆ ವೈದಿಕ ಶಾಸ್ತ್ರಗ್ರಂಥಗಳ ಸಾಹಿತ್ಯದಲ್ಲಿ?

★

■ ರಾಜಕೀಯ ಲಾಭಕ್ಕಾಗಿ ಉಗ್ರರ ಬಗ್ಗೆ ಮೃದು ಧೋರಣೆ

ಎಲ್.ಕೆ.ಅಡ್ವಾಣಿ

→ ಬಂಧಿತ ಭಯೋತ್ಪಾದಕರನ್ನು ಅಫಘಾನಿಸ್ತಾನದ ಕಂದಹಾರ್‌ಗೆ ವಿಶೇಷ ವಿಮಾನದಲ್ಲಿ ಕರೆದುಕೊಂಡು ಹೋಗಿ ಬಿಡುಗಡೆ ಮಾಡಿ ಬಂದದ್ದು ಎನ್.ಡಿ.ಎ. ಸರ್ಕಾರವೋ, ಯುಪಿಎ ಸರ್ಕಾರವೋ?

★

ಮೂರು ಸವಾಲು

■ "ಎಲ್ಲಾ ಶೋಷಿತ ವರ್ಗಗಳಿಗೆ ಸಾಮಾಜಿಕ ನ್ಯಾಯ ಕಲ್ಪಿಸಿಕೊಡುವ ವಿಚಾರಕ್ಕೆ ಪೇಜಾವರ ಮಠ ಬದ್ಧವಾಗಿದ್ದು ದಲಿತರಿಗೆ ಮಂತ್ರ ದೀಕ್ಷೆ ನೀಡಲು ಸಹ ಸಿದ್ಧವಾಗಿದೆ. ವೈದಿಕ ಧರ್ಮಗಳಲ್ಲಿ ಅಸ್ಪಶ್ಯತೆಗೆ ಸ್ಥಾನವಿಲ್ಲ. ವೈದಿಕತೆಯಲ್ಲಿ ವಿಶಾಲತೆಯಿದ್ದು, ಅಪಾರ್ಥಗಳಿಂದ ಕೆಲವಾರು ಹಾನಿಯಾಗಿರಬಹುದಷ್ಟೆ. ವೈಚಾರಿಕತೆಯ ಹೆಸರಿನಲ್ಲಿ ವೈದಿಕತೆಯಿಂದ ದೂರ ಸರಿಯುವುದು ಸರಿಯಲ್ಲ"

ಪೇಜಾವರ ಶ್ರೀ

→ 'ಕೆಲವಾರು ಹಾನಿ' ಅಂದರೆ ಏನು ಮೊದಲು ತಿಳಿಸಿ, ಈ ಕೆಳಗಿನ ಸುದ್ದಿ ಓದಿ (ರಾಜ್ಯದಲ್ಲಿ ಮಲ ಹೊರುವ ಪದ್ಧತಿ ಇನ್ನೂ ಜೀವಂತ -ಸುದ್ದಿ) ಆಮೇಲೆ ನೀವು ಹೇಳಿದ್ದನ್ನು ಜಾರಿಗೆ ತರೋದಕ್ಕೆ ಕಾಲ ಮಿತಿ ಘೋಷಿಸಿ.

★

ಬಾರಿ ಸಿದ್ಧತೆ

■ "ನಾಡಿನ ಸರ್ವತೋಮುಖ ಅಭಿವೃದ್ಧಿಗಾಗಿ ರಾಜಕೀಯರಹಿತ ಹಾಗೂ ಲಾಭರಹಿತವಾದ 'ಸಾಯಿಕುಮಾರ್ ಯುವ ಸೇನೆ' ಎಂಬ ಸಂಘಟನೆ ಆರಂಭಿಸಲಾಗುತ್ತಿದೆ. ನಾನು ಚಿತ್ರನಟನಾಗಿರುವುದರಿಂದ ಹಲವಾರು ಮಂದಿ ಪ್ರಮುಖ ದಾನಿಗಳ ಸಂಪರ್ಕ ಸಾಧ್ಯವಾಗಿದ್ದು, ಅವರುಗಳ ನೆರವಿನಿಂದ ಹಲವು ಸಾಮಾಜಿಕ ಚಟುವಟಿಕೆ ಹಮ್ಮಿಕೊಳ್ಳಲಾಗುವುದು. ಶುಕ್ರವಾರ ಬಾಗೇಪಲ್ಲಿಯಲ್ಲಿ ಅಧಿಕೃತವಾಗಿ ಜಾರಿಗೆ ಬರಲಿರುವ ಸಂಘಟನೆಯು ಬಸ್ ನಿಲ್ದಾಣ, ಶೌಚಾಲಯ, ಕೊಳವೆ ಬಾವಿ, ಇತ್ಯಾದಿ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಲಿದೆ'

– ಸಾಯಿಕುಮಾರ್

ಚಲನಚಿತ್ರ ನಟ

→ ಅಂದ್ರೆ ಚುನಾವಣೆಗೆ ತಯಾರಿ ಜೋರಾಗಿದೆ ಅಂದ ಹಾಗಾಯ್ತು.

ಜನಶಕ್ತಿ ಕನ್ನಡ ವಾರಪತ್ರಿಕೆ

ಸಂಪಾದಕೀಯ

ಗ್ರಾಮೀಣ ಉದ್ಯೋಗ ಖಾತ್ರಿ ಎಲ್ಲಿ?

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು (NREGA) ರಾಜ್ಯದಲ್ಲಿ ಸರಿಯಾಗಿ ಜಾರಿಯಾಗುತ್ತಿಲ್ಲ ಎಂದು ಕರ್ನಾಟಕ ಸರ್ಕಾರ ತಡವಾಗಿಯಾದರೂ ಗಮನಿಸಿರುವುದು ಒಳ್ಳೆಯ ಸಂಗತಿಯಾಗಿದೆ. ಇಷ್ಟಕ್ಕೇ ಚುರುಕು ಮುಟ್ಟಿತೆಂದು ತೃಪ್ತಿ ಪಡದೇ ಲಕ್ಷಾಂತರ ಜನರಿಗೆ ಜೀವನದಾಸರೆ ಸೃಷ್ಟಿಸುವ ಇಂತಹ ಯೋಜನೆ ಜಾರಿಯಲ್ಲಿನ ಸಮಸ್ಯೆಯನ್ನು ನೀಗಿಸಲು ಆದ್ಯತೆಯ ಗಮನ ನೀಡುವುದು ಅತ್ಯಗತ್ಯವಾಗಿದೆ. ಜಿಲ್ಲಾಧಿಕಾರಿಗಳ ಸಭೆಯಲ್ಲಿ ರಾಜ್ಯಪಾಲರೇ ಒಪ್ಪಿಕೊಂಡಂತೆ ಇಡೀ ಯೋಜನೆ ಜಾರಿಯ ಪ್ರಕ್ರಿಯೆಯು ತೀರಾ ಕೆಳಹಂತದಲ್ಲಿದೆ. ಇಂತಹ ದು:ಸ್ಥಿತಿಯು ಯಾಕೆ ಒದಗಿಬಂದಿದೆ ಎಂಬುದನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸದೇ ಹೋದಲ್ಲಿ ಅದು ಸಭೆಯ ನಡವಳಿಕೆಯ ಕಡತದಲ್ಲಿಯೇ ಆಶಯಗಳು ಉಳಿದುಹೋಗುತ್ತವೆ.

'ರೇಗಾ'ದಂತಹ ಕಾನೂನನ್ನು ಅಂಗೀಕರಿಸಿ ಅದನ್ನು ಜಾರಿಗೊಳಿಸುವಂತೆ ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡಿರುವ ಎಡಪಕ್ಷಗಳು ಸತತ ಒತ್ತಡ ಹೇರಿದ್ದವು. ಈ ಯೋಜನೆಯು 'ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿಯೂ ಮುಖ್ಯವಾದ ಅಂಶವಾಗಿತ್ತು. ಆದರೆ ಯೋಜನೆ ಅಂಗೀಕರಿಸಿ ಜಾರಿಗೆ ಹೊರಟಾಗ ನಂತರ ಸರ್ಕಾರವೇ ಅದರತ್ತ ಅಷ್ಟು ಮುತುವರ್ಜಿ ವಹಿಸಲಿಲ್ಲ.

ಕರ್ನಾಟಕದ ಮಟ್ಟಿಗೆ ಕಳೆದ ವರ್ಷದಲ್ಲಿ ಏಪ್ರಿಲ್‌ನಲ್ಲಿ ಅಂಗೀಕರಿಸಿದಂತೆ 11 ಜಿಲ್ಲೆಗಳಲ್ಲಿ ಈ ಯೋಜನೆಯ ಜಾರಿಗೆ ಸರ್ಕಾರ ಮುಂದಾಗಿತ್ತು. ಈಗ ಈ ವರುಷದಲ್ಲಿ ಬೆಂಗಳೂರು ನಗರ ಹೊರತುಪಡಿಸಿ ಎಲ್ಲಾ 28 ಜಿಲ್ಲೆಗಳನ್ನು ಯೋಜನೆ ವ್ಯಾಪ್ತಿಗೆ ತರಲಾಗಿದೆ. ಯೋಜನೆಯ ಜಾರಿಯ ಅನುಭವವೂ ಅತ್ಯಂತ ದಾರುಣವಾದ ಸತ್ಯಗಳನ್ನು ಒಳಗೊಂಡಿದೆ.


ಮುಖ್ಯವಾಗಿ ಇದು ಜಾರಿಯಾದಲ್ಲಿ ಸಹಜವಾಗಿ ಕೂಲಿಕಾರರಿಗೆ ಕೂಲಿಕಾರರ ಕೂಲಿ ಹೆಚ್ಚಳವಾಗುವುದು ಮತ್ತು ಬದುಕಿಗೆ ಒಂದು ಆಸರೆಯೂ ಸಿಗುವುದು. ಕೂಲಿಯ ಹೆಚ್ಚಳವನ್ನು ಒಳಗೊಂಡು ಇಂತಹದ್ದೊಂದು ಬದಲಾವಣೆಯನ್ನು ಗ್ರಾಮೀಣ ಭೂಮಾಲಿಕ ಶಕ್ತಿಗಳೂ, ಬಂಡವಾಳಗಾರರೂ ಒಪ್ಪುತ್ತಿಲ್ಲ. ಈ ವರ್ಗಗಳ ಅಧಿಕಾರ ಸ್ವರೂಪಿ ಅಧಿಕಾರಿಗಳು ರಾಜಕೀಯ ಮುಖಂಡರು ಯೋಜನೆಯು ಜಾರಿಗೆ ಅಡ್ಡಗಲ್ಲಾಗಿ ನಿಂತವರು. ಇಷ್ಟುಮಾತ್ರವಲ್ಲದೆ ಬ್ಯಾಂಕ್ ಖಾತೆ ಆರಂಭ, ಅರ್ಜಿ ಹಾಕಿಸುವುದು, ಪಡೆಯುವುದು, ಅಂಗೀಕರಿಸುವುದು, ಕೆಲಸದ ಕಾರ್ಡ್ ಹಾಗೂ ಕೆಲಸ ನೀಡಿಕೆ, ಕೆಲಸದ ಪ್ರಮಾಣ ಕೂಲಿ ಪ್ರಮಾಣ ನಿಗದಿ ಇತ್ಯಾದಿಯಂತಹ ಕೆಲಸಗಳನ್ನು, ಈ ಯೋಜನೆಯ ಜಾರಿಯು ಅತ್ಯಂತ ಹೆಚ್ಚಿನ ಕಠಿಣ ಪರಿಶ್ರಮವನ್ನು ಅದಕ್ಕಾಗಿ ಕಾಳಜಿಯನ್ನು ಬಯಸುತ್ತದೆ.

ಅಧಿಕಾರಶಾಹಿ ಇಂತಹ ಹೊಣೆಯನ್ನು ನಿರ್ವಹಿಸಬೇಕೆಂದು ಬರೆಯಲು ನಿರಾಕರಿಸುತ್ತಿದೆ.

ಈಗಲೂ ಕೆಲಸ ಮಾಡಿದ ಕೂಲಿಕಾರರಿಗೆ ಅನೇಕ ತಿಂಗಳು, ಕೆಲವೆಡೆ ವರ್ಷವಾದರೂ ಕೂಲಿ ನೀಡದೇ ಸತಾಯಿಸಲಾಗುತ್ತಿದೆ. ಈ ವಾಸ್ತವ ಅಂಶಗಳತ್ತ ಗಮನ ನೀಡುವುದು ಅಗತ್ಯ. ವಿಶೇಷವಾಗಿ ಕೂಲಿಕಾರರಿಗೆ ಕೆಲಸ ನೀಡದೇ ಯಂತ್ರ ಬಳಸಿ ಕೆಲಸ ಮಾಡಿಸುವ ಪ್ರವೃತ್ತಿ ಹಾಗೂ ವ್ಯಾಪಕ ಹಣದ ಭ್ರಷ್ಟಾಚಾರದ ಪ್ರಕರಣಗಳು ನಡೆದಿವೆ. ಕೂಲಿಕಾರರು ಕೂಲಿಗೆ ಬರುತ್ತಿಲ್ಲವೆಂದೂ ಹೇಳಲಾಗುತ್ತಿದೆ. ಬರುವಂತಾಗಲು ಕ್ರಮವಹಿಸಬೇಕೆಂದಿರುವುದು, ಒಂದು ನಿರ್ದೇಶನಾಲಯ ರಚಿಸುವುದು ಮತ್ತು ಪ್ರಾದೇಶಿಕ ಅಸಮಾನತೆ ಸ್ಥಿತಿ ಪರಿಗಣಿಸಿ ಪ್ರಾದೇಶಿಕ ಕೂಲಿಯಲ್ಲಿ ಹೆಚ್ಚಳ ಆಗಬೇಕು ಎಂಬ ರಾಜ್ಯಪಾಲರ ಪ್ರಸ್ತಾಪಗಳು ಜಾರಿಯಾಗಬೇಕು. ಪ್ರಸಕ್ತವಾಗಿ ಈ ಯೋಜನೆಯ ಸಮಗ್ರ ಜಾರಿಯನ್ನು ನಿರ್ವಹಿಸಲು ತಾಲ್ಲೂಕು 'ನಿರ್ವಹಣಾಧಿಕಾರಿ'ಗೆ ಆಗುತ್ತಿಲ್ಲದಿರುವ ಹಿನ್ನೆಲೆಯಲ್ಲಿ ಪ್ರತಿ ತಾಲ್ಲೂಕಿಗೆ ಇದಕ್ಕಾಗಿ ಒಬ್ಬ ಸಹಾಯಕ ನಿರ್ದೇಶಕನನ್ನು ನೇಮಿಸಬೇಕು. ಇಂತಹ ಅಂಶಗಳನ್ನು ಗಂಭೀರವಾಗಿ ತೆಗೆದುಕೊಳ್ಳದೇ ಹೋಗಿರುವುದರಿಂದ ರೇಗಾ ಯೋಜನೆ ಬಡಜನರ ಪಾಲಿಗೆ ಸಿಕ್ಕಲಿಲ್ಲ. ಈ ಯೋಜನೆ ಜಾರಿಯಲ್ಲಿ ಮುಂಚೂಣಿಯಲ್ಲಿದ್ದ ಜಿಲ್ಲೆಯಲ್ಲಿಯೂ ಈ ವರ್ಷ ಅಂತಹ ಮುನ್ನಡೆ ಕಾಣದೇ ಹೋದದ್ದು ಆಡಳಿತದ ನಿರ್ಲಕ್ಷ್ಯತನದ ಪರಿಣಾಮವಾಗಿದೆ. ಈ ಯೋಜನೆಯ ಜಾರಿಗೆ ಎಡಪಕ್ಷಗಳು, ಕರ್ನಾಟಕ ಪ್ರಾಂತ ರೈತ ಸಂಘ, ಕೂಲಿಕಾರರ ಸಂಘ, ಜನವಾದಿ ಮಹಿಳಾ ಸಂಘಗಳು ಬಿಟ್ಟರೆ ಉಳಿದ ಸಂಸ್ಥೆಗಳೂ ನಿರ್ಲಕ್ಷ್ಯ ವಹಿಸಿವೆ.

ಈಗಲಾದರೂ ಸರ್ಕಾರ ಆದರ ಆಡಳಿತ ಮಾತಿನ ಶಾಸ್ತ್ರ ಬಿಟ್ಟು ತೀವ್ರ ಕಾರ್ಯಾಚರಣೆಗೆ ಇಳಿಯಬೇಕು. ಪ್ರಜಾಸತ್ತಾತ್ಮಕ ಶಕ್ತಿಗಳು ಅಂತಹ ಒತ್ತಡ ಹೇರುತ್ತಾ ಹಾಗೂ ಭಾಗಿತ್ವ ವಹಿಸಬೇಕು.

ಬೇಕಿದ್ದದ್ದು ಒಂದು ಹೊಣೆಗಾರಿಕೆಯ ಉತ್ತರ



ಕೇಂದ್ರ ರೈಲ್ವೆ ಸಚಿವ ಲಾಲೂ ಪ್ರಸಾದ್ ಯಾದವ್‌ರವರು ಕರ್ನಾಟಕಕ್ಕೆ ಭೇಟಿ ನೀಡಿದಾಗ ಇಲಾಖೆಯಲ್ಲಿ ಡಿ ಗ್ರೂಪ್ ನೌಕರರ ನೇಮಕಾತಿಗೆ ಸಂಬಂಧಿಸಿ ಎದ್ದಿರುವ ವಿವಾದ, ಉದ್ವಿಗ್ನತೆಗೆ ಏನಾದರೂ ಸಮಾಧಾನಕರ ಉತ್ತರ ಸಿಕ್ಕೀತು ಎಂದು ನಿರೀಕ್ಷಿಸಿದವರಿಗೆ ನಿರಾಶೆಯಾಗಿದೆ. ಮಾತ್ರವಲ್ಲ ಅವರು ಅರ್ಹತೆಯ ಮೇಲೆ ಸ್ಪರ್ಧಿಸಿ, 'ಡರ್ಟಿ ಪೀಪಲ್' ಎಂದೆಲ್ಲಾ ಮಾತನಾಡಿದರೆಂದು ಟಿ.ವಿ. ಪತ್ರಿಕೆ ಮಾಧ್ಯಮಗಳು ವರ್ಣರಂಜಿತ ವರದಿಗಳನ್ನು ಪ್ರಕಟಿಸಿ ಈಗಾಗಲೇ ಇದ್ದ ಅತೃಪ್ತಿಗೆ ಪೆಟ್ರೋಲ್ ಸುರಿದು ದಾಂಧಲೆ ನಡೆಸಲು ಕಾರಣವಾಗಿವೆ. ಒಂದು ರೀತಿಯಲ್ಲಿ ಅತ್ತ ಮುಂಬಯಿಯಲ್ಲಿ ಉತ್ತರ ಭಾರತದ ಜನರ ವಿರುದ್ಧ (ಶ್ರಮಿಕರ ವಿರುದ್ಧ) ರಾಜ್ ಠಾಕ್ರೆ ಮಹಾರಾಷ್ಟ್ರೀಯರನ್ನು ಎತ್ತಿಕಟ್ಟಿ ಹಿಂಸಾಚಾರಕ್ಕೆ ಇಳಿಸಿದ್ದಾರೆ. ಇಲ್ಲಿ ಇದಕ್ಕಾಗಿ ಕಾದಿದ್ದರೋ ಏನೋ ಎಂಬಂತೆ 'ಕರ್ನಾಟಕ ರಕ್ಷಣಾ ವೇದಿಕೆ' ಎಂಬ ಠಾಕ್ರೆ ಮಾದರಿಯ ಸಂಘಟನೆ ರೈಲ್ವೆ ಕಛೇರಿಗೆ ನುಗ್ಗಿ ಆಸ್ತಿ ಸಲಕರಣೆಗಳನ್ನು ಧ್ವಂಸಗೊಳಿಸಿ ದಾಂಧಲೆ ನಡೆಸಿದ್ದು ಆಗಿದೆ.

ಕೆರಳಿಸುವ ಪ್ರಚಾರ

'ಲಲ್ಲೂ' ಹಾಗೆ ಹೇಳಿದರೋ ಇಲ್ಲವೋ ಗೊತ್ತಿಲ್ಲ, ಹೀಗೆ ಎಂದು ಮಾಧ್ಯಮಗಳು ರೆಕ್ಕೆಪುಕ್ಕ ಹಚ್ಚಿ ಹೇಳಿದರು. ಪರಿಸ್ಥಿತಿಯನ್ನು ಇನ್ನಷ್ಟು ಉದ್ರಿಕ್ತಗೊಳ್ಳುವಂತೆ, ಭಾಷಾಂಧತೆ ಕೆರಳುವಂತೆ ನೋಡಿಕೊಳ್ಳುವಲ್ಲಿ ವಹಿಸಿದ ಕುಖ್ಯಾತ ಪಾತ್ರವನ್ನು ಅವು ಹೊರಲೇಬೇಕಿದೆ. ಈ ಪ್ರಕರಣವನ್ನು ಒಳಗೊಂಡು, ಹುಬ್ಬಳ್ಳಿ 'ಉಗ್ರ'ರ ಪ್ರಕರಣದಲ್ಲಿಯೂ ವಾಸ್ತವವನ್ನು ಬಿಚ್ಚಿಡುವ, ಆಳ ತನಿಖೆ ಶೋಧನೆಗೆ, ಸಹಕರಿಸುವ ಜೊತೆಗೆ ಭಯೋತ್ಪಾದನೆ ಮತ್ತು ಮತಧರ್ಮಕ್ಕೆ ತಳುಕು ಹಾಕದೇ ಸೌಹಾರ್ದತೆ ಕಾಯುವ ಭಾರೀ ಹೊಣೆಗಾರಿಕೆ ನಿರ್ವಹಿಸದೇ ಹೋದದ್ದನ್ನೂ ರಾಜ್ಯದ ಜನ ಕಂಡಿದ್ದಾರೆ. ಉದ್ಯೋಗದಂತಹ ಪ್ರಶ್ನೆಯ ಸುತ್ತ ಹುತ್ತ ಹೆಣೆಯುವಾಗ ಅದು ಸಿಡಿಮದ್ದಿನ ಕೋಟೆ ಕಟ್ಟುತ್ತಿದ್ದೇವೆಂಬ ಎಚ್ಚರ ವಹಿಸದಿದ್ದರೆ ಪತ್ರಿಕೆಗಳ ಸ್ಥಾನ, ಪಾತ್ರವೇ ಪ್ರಶ್ನಾರ್ಹ, ಸಂಶಯಾರ್ಹವಾಗಿ ಬಿಡುತ್ತದೆ. ಎಲ್ಲವನ್ನೂ ರೋಮಾಂಚನಗೊಳಿಸಬೇಕು ಎಂಬ ಜಾಗತೀಕರಣದ ಲಾಭಗಾರಿಕೆಯ ಲೆಕ್ಕಾಚಾರ ಅನಾಹುತಕಾರಿಯೂ ಆಗಿದೆ ಎಂದರಿಯಬೇಕು.



ಇರಲಿ, ಕೇಂದ್ರ ಸರ್ಕಾರದ ಕ್ರಮ ಅಥವಾ ಈಗ ಚಾಲ್ತಿಯಲ್ಲಿರುವ ಉದ್ಯೋಗ ನೇಮಕಾತಿಯ ವಿಷಯದಲ್ಲಿ ಒಂದು ಭಿನ್ನ ಬೇಡಿಕೆಯ ಧ್ವನಿ ಎದ್ದಿದೆ. ಉದ್ಯೋಗವೇ ಇಲ್ಲದ, ಇರುವುದೂ ಕೈ ತಪ್ಪುವ ಆತಂಕದಲ್ಲಿ ನಿರುದ್ಯೋಗಿಗಳು ಇರುವಾಗ, 'ಡಿ' ಗ್ರೂಪ್‌ನಂತಹ ಉದ್ಯೋಗಗಳಿಗೆ ಆಯಾ ರಾಜ್ಯಕ್ಕೆ ಆದ್ಯತೆ ನೀಡಬೇಕು ಎಂದು ಬಯಸುವುದು ಸಹಜವಾಗಿ ಬರಬಹುದು. ರೈಲ್ವೆಯಂತಹ ಇಲಾಖೆಯಲ್ಲಿನ ನೇಮಕ ಅಖಿಲ ಭಾರತ ಮಟ್ಟದ ಪ್ರಕ್ರಿಯೆ ಎಂಬುದು ನಿಜವಾದರೂ ಇಂತಹ ಹೇಳಿಕೆ ಎದ್ದುಬಂದಾಗ ಅದಕ್ಕೆ ಸೂಕ್ತ ಉತ್ತರ ಅಥವಾ ಒಂದು ಪರಿಹಾರವನ್ನು ಕೇಂದ್ರ ಸರ್ಕಾರದ ಸಂಬಂಧಿಸಿದ ಇಲಾಖೆ ಸೂಚಿಸಬೇಕು. 'ಡಿ' ಗ್ರೂಪ್‌ನ ನೌಕರರ ನೇಮಕದಲ್ಲಿ ಆದ್ಯತೆ ಪರಿಗಣಿಸಬೇಕೆಂಬ ಬಗ್ಗೆ ಇತರೆ ಕೆಲವು ರಾಜ್ಯಗಳು ಬೇಡಿಕೆ ಮುಂದಿರಿಸಿವೆ. ಹೀಗಿರುವಾಗ ಕೇವಲ ಇಲಾಖೆ ಅಧಿಕಾರಿಗಳೇ ಇದನ್ನೆಲ್ಲಾ ನಿರ್ಧರಿಸಲು ಆಗಲಾರದು. ಅಂತಹದ್ದೊಂದು ಪ್ರಶ್ನೆಯನ್ನು ಇತ್ಯರ್ಥಪಡಿಸಬೇಕಾದ ಹೊಣೆಗಾರಿಕೆ ಕೇಂದ್ರ ಸರ್ಕಾರಕ್ಕೆ ಇದೆ. ಅದನ್ನು ಪೂರ್ವಾಪರವಾಗಿ ಚಿಂತಿಸಿ ಒಂದು ನಿಲುಮೆ ಪ್ರಕಟಿಸಬೇಕು. ಅಂದರೆ ಮುಖ್ಯವಾಗಿ ಇಂತಹ ಸಮಸ್ಯೆಗಳು ಇತ್ಯರ್ಥಗೊಳ್ಳಲು ಒಂದು ಸ್ಪಷ್ಟವಾದ ರಾಷ್ಟ್ರೀಯ ಉದ್ಯೋಗ ನೀತಿಯನ್ನು ರೂಪಿಸಬೇಕಾಗುತ್ತದೆ.

ದುರ್ಲಾಭದ ದಾಳಿಗಳು

ಉದ್ಯೋಗನಾಶ, ಅವಕಾಶಗಳ ನಿರ್ಬಂಧನೆಗಳಿಂದಾಗಿ ಇರುವ ಅವಕಾಶಗಳಿಗೆ ಸ್ಪರ್ಧೆಯೂ ಹೆಚ್ಚಾಗಿದೆ. ಉದ್ಯೋಗಸೃಷ್ಟಿಯ ಸಾಧ್ಯತೆಗಳ ಮೂಲ ನೀತಿಗಳತ್ತ ಗಮನ ಹರಿಸದೇ ಈ ಸ್ಥಿತಿಯನ್ನು ಕೆಲವು ಭಾಷಾಂಧ, ಪ್ರಾದೇಶಿಕ ಛಿದ್ರಕಾರಿ ಮನೋಭಾವ ಬೆಳೆಸಿ, ಹಾದಿ ತಪ್ಪಿಸಲು ಪ್ರಯತ್ನಿಸಲಾಗುತ್ತಿದೆ.

ಆಸ್ಸಾಂನಂತಹ ಕಡೆ ನಿರುದ್ಯೋಗಿಗಳ ಮೇಲೆ ಹಲ್ಲೆ ನಡೆದ ವಿದ್ಯಮಾನಗಳು ಇನ್ನೂ ಹಸಿಯಾಗಿವೆ. ಇಂತಹ ಸನ್ನಿವೇಶದಲ್ಲಿ ಯಾದವ್‌ರವರು ಅತ್ಯಂತ ಸಂಯಮದಿಂದ ವರ್ತಿಸಬೇಕಿತ್ತು. ಈಗಿನ ಅವರ ಪ್ರತಿಕ್ರಿಯೆ ಜವಾಬ್ದಾರಿಯುತವಾಗಿಲ್ಲ.

ಈ ಸನ್ನಿವೇಶದ ದುರ್ಲಾಭ ಪಡೆಯುತ್ತಿರುವ, ಕರ್ನಾಟಕ ರಕ್ಷಣಾ ವೇದಿಕೆ ಧ್ವಂಸಕಾರಿ ಕೃತ್ಯಗಳು ಖಂಡನೀಯ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಭಿನ್ನಾಭಿಪ್ರಾಯ ಅಥವಾ ಪ್ರತಿಭಟನೆ ವ್ಯಕ್ತಪಡಿಸುವುದಕ್ಕೆ ಅವಕಾಶವಿದೆ. ಆದರೆ ಇಂತಹ ಕೃತ್ಯಗಳು ವಿಧ್ವಂಸಕಾರಿಯಾಗಿವೆ. ಕಾನೂನನ್ನು ತಾವೇ ಕೈಗೆತ್ತಿಕೊಂಡು, ನ್ಯಾಯ ತೀರ್ಪನ್ನು ತಾವೇ ನೀಡಿ, 'ಕ್ರಮ ವಹಿಸುವಂತಹ' ಕ್ರಮಗಳು ಬಜರಂಗದಳದಂತಹ ಸಂಘಪರಿವಾರಿಗಳು ರೂಢಿಸಿಕೊಂಡಿವೆ. ಇವು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ, ಹಕ್ಕುಗಳಿಗೆ ಮಾರಕವಾಗಿವೆ.

ಅಷ್ಟೆಲ್ಲಾ ದಾಂಧಲೆಯನ್ನು 'ಕರ್ನಾಟಕ ರಕ್ಷಣಾ ವೇದಿಕೆ' ಎಂಬ ಕನ್ನಡಿಗರ ಸ್ವಯಂ ಗುತ್ತಿಗೆದಾರರು ನಡೆಸುತ್ತಿದ್ದರೆ ಕರ್ನಾಟಕ ಸರ್ಕಾರದ 'ಘನ' ಪೊಲೀಸರು ದಾಂಧಲೆ ತಡೆಯಲು ಏನೊಂದೂ ಕ್ರಮ ವಹಿಸದೇ ಪ್ರೋತ್ಸಾಹಕರವಾಗಿ ನಿಷ್ಕ್ರಿಯವಾಗಿದ್ದುದು ಖಂಡನೀಯ. ಆದರೆ ಇದೇ ಪೊಲೀಸರು ಶಾಂತಿಯುತವಾಗಿ ದುಡಿವ ಜನಸಾಮಾನ್ಯರು, ಪ್ರಗತಿಪರರು ಪ್ರತಿಭಟಿಸಿದರೆ ಅವೆಷ್ಟು ನಿರ್ಬಂಧಗಳನ್ನು ಹೇರುತ್ತಾರೆ. ಸ್ವಪ್ರೇರಿತರಾಗಿ ಮೊಕದ್ದಮೆ ಹೂಡಿ ಕಿರುಕುಳ, ದಮನ ಮಾಡುತ್ತಾರೆಂಬುದು ಬೇರೆ ಹೇಳಬೇಕಿಲ್ಲ. ವಿಶೇಷವಾಗಿ ಕರ್ನಾಟಕ ರಕ್ಷಣಾ ವೇದಿಕೆಯಂತಹ ಶಕ್ತಿಗಳನ್ನು ಜೆಡಿ(ಎಸ್) ಮತ್ತು ಬಿಜೆಪಿ ಸರ್ಕಾರವು ಹಿಂದಿನಿಂದಲೂ ಪ್ರಜ್ಞಾಪೂರ್ವಕವಾಗಿ ಬೆಳೆಸಿತು. ಸಂವಿಧಾನೇತರ ಶಕ್ತಿಗಳಿಗೆ ನೀಡುವ ಈ ಪುರಸ್ಕಾರವನ್ನು ರಾಜ್ಯದಲ್ಲಿ ಫ್ಯಾಸಿಸ್ಟ್ ಮನೋಭಾವದ ವಿಶ್ವ ಹಿಂದೂ ಪರಿಷತ್ ಬಜರಂಗಗಳಂತಹವರು ಬಳಸುತ್ತಿದ್ದಾರೆ. ಇವಕ್ಕೆ ಕಡಿವಾಣ ಹಾಕಲೇಬೇಕಾದ್ದು ಅಷ್ಟೇ ಗಂಭೀರ ವಿಚಾರ.

ಹಾನಿಕರ 'ಇನ್‌ಸ್ಟಂಟ್ ಕಾಫಿ' ಬ್ರಾಂಡ್

'ಇನ್‌ಸ್ಟಂಟ್ ಕಾಫಿ ಬ್ರಾಂಡ್' ಒಂದು ಮಾಯಾಲೋಕವನ್ನೇ ಸೃಷ್ಟಿಸಿದೆ...!

ಜಗತ್ತಿನ ಕಾಫಿ ವ್ಯಾಪಾರದ ಮೇಲೆ ನಾಲ್ಕು ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಏಕಾಧಿಕಾರವಿದೆ. ಈ ಕಂಪನಿಗಳು ತಮ್ಮ ಹಿತಾಸಕ್ತಿಗನುಸಾರವಾಗಿ ಕಾಫಿ ಬೆಲೆಯನ್ನು ನಿಗದಿಗೊಳಿಸುತ್ತವೆ. 1990ರ ದಶಕದಲ್ಲಿ ಜಗತ್ತಿನ ಪ್ರಮುಖ ಕಾಫಿ ಉತ್ಪಾದನಾ ರಾಷ್ಟ್ರವಾದ ಬ್ರೆಜಿಲ್‌ನಲ್ಲಿ ಆಲಿಕಲ್ಲು ಮಳೆಯಲ್ಲಿ ಕಾಫಿ ಬೆಲೆ ಹಾಳಾಯಿತು. ಇನ್ನೊಂದೆಡೆ ಕಾರ್ಮಿಕರ ಹೋರಾಟ ಆರಂಭವಾಗುತ್ತಲೇ ಬಹುರಾಷ್ಟ್ರೀಯ ಕಂಪನಿಗಳು ಕೇರಳದ ಕಾಫಿ ಬೆಳೆಗಾರರಿಗೆ ಹೆಚ್ಚಿನ ಬೆಲೆಯನ್ನು ಕೊಟ್ಟು ಮತ್ತು ಹೆಚ್ಚು ಕಾಫಿ ಬೆಳೆಯಲು ಪ್ರೋತ್ಸಾಹ ಕೊಟ್ಟರು. ಇತ್ತ ಬ್ರೆಜಿಲ್‌ನಲ್ಲಿ ಕಾರ್ಮಿಕ ಹೋರಾಟವನ್ನು ದಮನ ಮಾಡಲಾಯಿತು. ಅನಂತರ ಅಲ್ಲಿಂದ ಮತ್ತೆ ಕಾಫಿ ಖರೀದಿ ಆರಂಭವಾಯಿತು. ಇತ್ತ ಕೇರಳದಿಂದ ಕಾಫಿ ಕೊಳ್ಳುವುದನ್ನು ನಿಲ್ಲಿಸಲಾಯಿತು. ಕೇರಳದಲ್ಲಿ ಈ ಮೊದಲು ಕಾಫಿ ಪ್ರತಿ ಕಿಲೋಗೆ 70-80 ರೂ.ಸಿಗುತ್ತಿದ್ದರೆ, ಈ ಎಲ್ಲ ಸ್ಥಿತ್ಯಂತರಗಳ ಪರಿಣಾಮವಾಗಿ 2004 ರ ಮಧ್ಯದಲ್ಲಿ ಅದರ ಬೆಲೆ ಕಿಲೋಗೆ 15-16 ರೂಪಾಯಿಗೆ ಇಳಿಯಿತು. ಇದು ಬಹು ರಾಷ್ಟ್ರೀಯ ಕಂಪನಿಗಳ ವ್ಯಾಪಾರ ವಹಿವಾಟಿನ ರೀತಿ, ಇದರ ಪರಿಣಾಮವಾಗಿ ಕೇವಲ 2004ರಲ್ಲಿ ಭಾರತದ ಕಾಫಿ ಬೆಳೆಗಾರರಲ್ಲಿ 120 ಜನ ಆತ್ಮಹತ್ಯೆ ಮಾಡಿಕೊಂಡರು.

ಅಗಾಧ ನಷ್ಟ

ಒಂದು ಕಡೆ ಕಾಫಿ ಅಂತರಾಷ್ಟ್ರೀಯ ಸ್ತರವನ್ನೇರಿದರೆ ಇತ್ತ ಸ್ಥಾನೀಯವಾಗಿ ಹೇಗೆ ರಸಾತಳವನ್ನು ಸೇರುತ್ತಿದೆ ಎಂಬುದನ್ನು ಹಿಂದೂ ಪತ್ರಿಕೆಯಲ್ಲಿ ಫೆಬ್ರುವರಿ 6 ರಂದು ಸಾಯಿನಾಥ್ ಬರೆದಿರುವುದು ಅಕ್ಷರಶಃ ನಿಜ. ಕೇರಳದಲ್ಲಿ ಶೇ.80 ರಷ್ಟು ಕಾಫಿ ವೈನಾಡಿನಲ್ಲಿ ಬೆಳೆಯಲಾಗುತ್ತದೆ. ಅಲ್ಲಿ 70 ಸಾವಿರ ಹೆಕ್ಟೇರ್ ಪ್ರದೇಶ ಕಾಫಿ ಬೆಳೆಯದ್ದೇ. ಆ ಬೆಳೆಗಾರರಲ್ಲಿ 60,000 ಸಣ್ಣ ಬೆಳೆಗಾರರು. ಸಾಯಿನಾಥ್ ಅವರ ಪ್ರಕಾರ ಒಟ್ಟು ವೈನಾಡ ರೈತರು 2001ರಲ್ಲಿ ಕಾಫಿ ಬೆಳೆಯಲ್ಲಿ ಅನುಭವಿಸಿದ ನಷ್ಟ 8000 ಕೋಟಿ.

'ಥರ್ಡ್ ವರ್ಲ್ಡ್ ನೆಟ್‌ವರ್ಕ್' ನ ಮಾರ್ಟಿನ್ ಖೋರ್ ಅವರ ಪ್ರಕಾರ 1992ರಲ್ಲಿ ಕಾಫಿ ಉತ್ಪಾದಕ ದೇಶಗಳು ಜಗತ್ತಿನಾದ್ಯಂತದ ಮಾರುಕಟ್ಟೆಗಳಲ್ಲಿ 30 ಬಿಲಿಯನ್ ಡಾಲರ್



ಸಂಪಾದಿಸಿದ್ದವು. ಅದೇ 2002ರಲ್ಲಿ ಮಾರುಕಟ್ಟೆಯಲ್ಲಿ ಕಾಫಿ ಮಾರಾಟ ಎರಡು ಪಟ್ಟು ಹೆಚ್ಚಾಯಿತು. ಆದರೆ ಅವರು ಸಂಪಾದಿಸಿದ್ದು ಕೇವಲ 5 ಬಿಲಿಯನ್ ಡಾಲರುಗಳು!

ತಿರುಪತಿ ಕ್ಷೌರ

ಈಗ ಇನ್‌ಸ್ಟಂಟ್ ಕಾಫಿ ಮಧ್ಯಮವರ್ಗದ ಜನತೆಯಲ್ಲಿ ಅತ್ಯಂತ ಜನಪ್ರಿಯವಾಗುತ್ತಿದೆ. ಆದರೆ ವಸ್ತುಸ್ಥಿತಿಯಲ್ಲಿ ಅದು ಪೆಪ್ಸಿ, ಕೋಲಾಗಳಿಗಿಂತಲೂ ಹಾನಿಕರ. ಮನುಷ್ಯನ ಆರೋಗ್ಯದ ಮೇಲೆ ಮಾರಕ ಪರಿಣಾಮ ಬೀರುತ್ತದೆ. ಇನ್ನೊಂದೆಡೆಯಲ್ಲಿ ನಾವು ಅದಕ್ಕೆ ತೆರುವ ಬೆಲೆಯ ಶೇ.90 ರಷ್ಟು ಬಹುರಾಷ್ಟ್ರೀಯ ಕಂಪನಿಗಳ ಜೇಬಿಗೆ ಹೋಗುತ್ತದೆ.

ಕಾಫಿ ಉತ್ಪನ್ನವನ್ನು ಕಂಪನಿಗಳು ಬೇರೆಡೆಗೆ ಕೊಂಡೊಯ್ಯುತ್ತವೆ. ಅಲ್ಲಿ ಅದನ್ನು ಸಂಸ್ಕರಿಸಿ ಇನ್‌ಸ್ಟಂಟ್ ಮಾಡಲಾಗುತ್ತದೆ. ಕಾಫಿ ಬೆಳೆಗಾರರಿಂದ ಕಾಫಿಯನ್ನು ಕಂಪನಿಗಳು ಕೆ.ಜಿ.ಗೆ 90 ರೂಪಾಯಿಯಲ್ಲಿ ಖರೀದಿಸಿದರೆ, ಅದೇ ಕಾಫಿಯನ್ನು ಇನ್‌ಸ್ಟಂಟ್ ಮಾಡಿ ಅದೇ ಅದೇ ದೇಶಗಳ ಮಾರುಕಟ್ಟೆಗೆ ಕೆ.ಜಿ.ಗೆ 900 ರಿಂದ 1400 ರೂಪಾಯಿಗಳ ತನಕ ಮಾರಾಟ ಮಾಡುತ್ತವೆ. ಅವುಗಳೊಂದಿಗೆ ಕಳಪೆ ಕಾಫಿ ಬೀಜಗಳಿಂದ ತಯಾರಿಸಿದ ವಿದೇಶಿ ಇನ್‌ಸ್ಟಂಟ್ ಬ್ರಾಂಡ್‌ಗಳನ್ನು ಮಾರಲಾಗುತ್ತದೆ. ಒಟ್ಟಿನಲ್ಲಿ ಕಾಫಿ ಬೆಳೆಗಾರರಿಗೆ ಹಾಗೂ ಗ್ರಾಹಕರಿಗೆ ಎಲ್ಲಾ ಕಡೆಗಳಿಂದಲೂ 'ತಿರುಪತಿ ಕ್ಷೌರ' ವಾಗುವುದು ಮಾತ್ರ ಕಟು ವಾಸ್ತವ.

ಮಾಯಾಲೋಕ

'ಇನ್‌ಸ್ಟಂಟ್ ಕಾಫಿ ಬ್ರಾಂಡ್' ಇಂದು ಒಂದು ಮಾಯಾ ಲೋಕವನ್ನೇ ಸೃಷ್ಟಿಸಿದೆ. ಇತ್ತೀಚೆಗೆ ಒಂದು ಚಾನೆಲ್‌ನಲ್ಲಿ ಡಾ: ಯು.ಆರ್.ಅನಂತಮೂರ್ತಿ ಹಾಗೂ ಇನ್ನಿಬ್ಬರು ಬುದ್ಧಿಜೀವಿಗಳು ಮತ್ತು ಮಾಧ್ಯಮದಾತ ಗಂಭೀರ ಚರ್ಚೆಯಲ್ಲಿ ಮುಳುಗಿದ್ದರು. ಅವರ ಹಿನ್ನೆಲೆ ಪರದೆಯಲ್ಲಿ ದೊಡ್ಡ ಅಕ್ಷರಗಳಲ್ಲಿ 'ಬ್ರೂ' ರಾರಾಜಿಸುತ್ತಿತ್ತು. ಬುದ್ಧಿ ಜೀವಿಗಳೆದುರು ಬ್ರೂ ಹೆಸರುಳ್ಳ 4 ಕಾಫಿ ಕಪ್‌ಗಳಿದ್ದವು. ಬ್ರೂ ಹೀರುತ್ತಾ ಚರ್ಚೆ! 'ಬ್ರೇಕ್' ಬರುತ್ತಲೇ ಮನಸೂರೆಗೊಳ್ಳದ ಬ್ರೂಧಾರೆ ಕಪ್ಪಿಗೆ ಇಳಿಯುತ್ತದೆ. ಬ್ರೂ ಎಂದರೆ ಚಿಂತಕರು ಕುಡಿಯುವ ಕಾಫಿ! ಈ ದೃಶ್ಯವನ್ನು ಕಂಡೊಡನೆಯೇ ನನಗನ್ನಿದ್ದು ಇಷ್ಟು, "ಬುದ್ಧಿಜೀವಿಗಳ ಬೌದ್ಧಿಕತೆಯು ಈ ಬಗೆಯಲ್ಲಿ ಖುಷಿಪಡುತ್ತಿದ್ದರೆ, ಇನ್ನು ಸಾಮಾನ್ಯ ಜನರ ಪಾಡೇನು"?

■ ಡಾ: ಜಿ. ಭಾಸ್ಕರಮಯ್ಯ

ತೈಲ ಬೆಲೆ ಏರಿಕೆ - ಪ್ರತಿಭಟನೆಗೆ ಕರೆ

ಪೆಟ್ರೋಲ್ 2 ರೂ., ಡೀಸೆಲ್ ಬೆಲೆ 1ರೂ. ಕೇಂದ್ರ ಹೆಚ್ಚಿಸಿದೆ. ತೆರಿಗೆ ಪದ್ಧತಿಯನ್ನು ಬದಲಿಸಿ, ಜನರಿಗೆ ಹೊರೆಯಾಗದಂತೆ ಪರಿಸ್ಥಿತಿ ನಿಭಾಯಿಸಬೇಕೆಂಬ ಎಡಪಕ್ಷಗಳ ಒತ್ತಾಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ. ಹೆಚ್ಚಳವನ್ನು ವಿರೋಧಿಸಿರುವ ಸಿಪಿಐ(ಎಂ) ಅದನ್ನುಕೂಡಲೇ ಹಿಂತೆಗೆದುಕೊಳ್ಳಲು ಆಗ್ರಹಿಸಿದೆ. ದೇಶವ್ಯಾಪಿ ಪ್ರತಿಭಟನೆಗೆ ಕರೆ ನೀಡಿದೆ.

ಸಂಘಟನೆ

ಅಂದಿನಿಂದಲೂ ಬಂದಿದೆ
ಅಸಮಾನತೆ ಶೋಷಣೆಯ ಆಳಿಕೆ
ದಿನವೂ ಕೊಲೆ ಸುಲಿಗೆ
ದಬ್ಬಾಳಿಕೆ
ಮಂತ್ರಿ ಮಹೋದಯರ
ಹಗರಣದ ಹೆಗ್ಗಳಿಕೆ
ಬಡವನಿಗೆ ಗತಿಯಿಲ್ಲ
ತುತ್ತು ಕೂಳಿಗೆ
ಇಂತು ಘಟಿಸಿವೆ ಘಟನೆ
ಅದಕ್ಕೆ ಬೇಕೀಗ ಸಂಘಟನೆ


-ಯಮುನಾ ಗಾಂವ್ಕರ

ಶಿಷ್ಟ ರಕ್ಷಕರು

ದುಷ್ಟರನು ಶಿಕ್ಷಿಸಲು ನಮ್ಮ ಅವತಾರ
ಅನ್ನುತಿದೆ ಬಲ್ಲಿರಾ ಸಂಘ ಪರಿವಾರ
ಈ ಜನರ ಕಲ್ಪನೆಯ ದುಷ್ಟ ಜನ ಯಾರು
ಪರಕೋಮು ಮತ್ತಿನ್ನು ಕೆಳವರ್ಗದವರು

- ವಿಡಂಬಾರಿ

ಎಲ್ಲಿಗೆ ಬಂತು ನೋಡು



"ಗಣೇಸನಿಗೆ ಮದ್ವೆ ಆಯ್ತಂತೆ"

"ಗಣೇಸ ಬ್ರಮ್ಮಚಾರಿ ಅಲ್ವೇನ್ಲಾ?"

"ಇಲ್ಲ ಇಲ್ಲ. ರಾತ್ರೋರಾತ್ರಿ ಮದ್ವೆ ಆಗೋಯ್ತಂತೆ"

"ಏನೋ ಕೆಲವ್ರು ಅಂಗೂ ಅಂತರೆ, ಅವ್ನಿಗೆ ಇಬ್ರುಹೆಣ್ತೇರು ಅಂತ",

"ಏ, ಅಲ್ಲಲ್ಲ, ಇಬ್ರೆಣ್ತೆ ಅಲ್ಲ, ಅವ್ನ ಹೆಣ್ತಗೆ ಎರಡು ಮದ್ವೆ ಅಂತೆ"

"ಥೂ ನಿನ್ನ ಏನ್ಲಾ ನೀನು ಏಳ್ತಿರದು?"

'ಯಾಕ್ಲಾ ಥೂ ಅಂತಿಯಾ, ಗಂಡಸಾದರೆ ಮಾತ್ರ ಹೆಂಡತೀನ ಬುಟ್ಟು ಇನ್ನೊಂದು ಮದ್ವೆ ಆಗ್ ಬೌದಾ?, ... ಅದಿರ್ಲಿ ಅವಾಗ್ಲಿಂದ ಬಡ್ಕತಿವ್ನಿ, ಗಣೇಸಂಗೆ ಮದ್ವೆ ಆಯ್ತಂತೆ"

"ಸಿನ್ಮಾ ಎಸ್ರು ಅಲ್ಲ ಕಣ್ಲಾ, ನಮ್ಮ ಗೋಲ್ಡನ್ ಸ್ಟಾರು, ಕಾಮಿಡಿ ಗಣೇಸ, ಅವ್ನಿಗೆ ಮದ್ವೆ ಆಯ್ತಂತೆ.

'ಔದಾ? ನಾನೇನೋ ಅನ್ಕಂಡೆ',

'ಏನನ್ಕಂಡೇ?'

"ಅದೇ ಗಣೇಸ, ನಮ್ಮ ಸಿವ ಪಾರ್ವತಿ ಇರೇ ಮಗ. ಅವ್ನ ತಮ್ಮ ಸುಬ್ರಮಣ್ಯ ಇಲ್ವೇ ಅವ್ನೂ ಅನ್ಕಂಡೆ. ಆ ಗಣಪತಿ ಬ್ರಮ್ಮಚಾರಿ ಅಂತನೂ ಅಂತರೆ, ಕೆಲವ್ರು ಅವ್ನಿಗೆ ಸಿದ್ದಿ ಬುದ್ದಿ ಅಂತ ಎರಡು ಹೆಣ್ತೇರು ಅಂತನೂ ಹೇಳ್ತಾರೆ"

'ಅಯ್ಯೋ ಸಿವನೇ ನೀನೇನು ಪೇಪರ್ ಓದದೂ, ಟೀವಿ ನೋಡದು ಏನೂ ಇಲ್ವ?"

"ಥೂ ನಿನ್ನ ಪೇಪರ್‍ರು, ಟೀವಿಗಿಸ್ಟು...

"ಯಾಕ್ಲ ಅಂಗಂತಿ?"

"ಮತ್ತಿನ್ನೇನು? ನಿಮ್ಮ ಕೆಲವ್ರು ಪೇಪರ್‌ನೋರಿಗೂ, ಟೀವಿಯೋರಿಗೂ ಮಾಡಕ್ಕೆ ಬ್ಯಾರೆ ಕೆಲ್ಸ ಇಲ್ವಾ?"

"ಯಾಕ್ಲ ಏನಾಯ್ತೀಗ?"

"ಊ ಮತೆ, ಯಾರೋ ಮದ್ವೆಯಾದ್ರೆ ಇವರ್‍ಯಾಕೆ ಇಂಗೆ ಕುಣಿದಾಡ್ತರೆ? ಅವ್ರವ್ರ ಕುಸಿ, ಆಯ್ತರಪ್ಪ. ಸುಖವಾಗಿ ಬಾಳ್ರಿ ಅಂತ ಆರೈಸಬೇಕು. ಸುಮ್ಮಾಗಬೇಕು. ಅದು ಬುಟ್ಟು ಅದೇ ದೊಡ್ಡ ಇಸ್ಯ ಅನ್ನಂಗೆ ರಾಮಣ್ಯ ಮಾಡ್ತರೆ ಮದ್ವೆ ಆಗದಿದ್ರೆ ಅದ್ನೂ ಒಂದು ರಾಮಣ್ಯ ಮಾಡ್ತರೆ".

"ಮದ್ವೆ ಆಗದಿದ್ರೂ ರಾಮಣ್ಯನಾ?'

"ಊ ಕಣ್ಲಾ, ಅದ್ಯಾರೋ ಪ್ರಾನ್ಸ್ ಅದ್ಯಕ್ಸ ಅಂತೆ, ಅವ್ನು ಮದ್ವೆ ಆಗಿರ್ನಿಲ್ಲ. ಒಂದು ಎಂಗ್ಸಿನ ಜತೆಗಿದ್ದ. ಆ ದೇಶದಲ್ಲಿ ಅವೆಲ್ಲ ಮಾಮೂಲು ಇಸ್ಯ. ಇಲ್ಲಿ ಅದ್ನೇ ದೊಡ್ಡ ಇಸ್ಯ ಮಾಡಿ, ಕಡಿಕೆ ಆ ಎಂಗ್ಸು ನಮ್ಮ ದೇಸಕ್ಕೆ ಬರ್ಲೆ ಇಲ್ಲ. ನೋಡು ಅಂಗಾಡ್ತರೆ ಈ ಪೇಪರ್‌ನೋರು ಟೀವಿಯೋರು. ಕಡಿಕೆ ಪಾಪ ಈ ಪ್ರಾನ್ಸ್ ಅದ್ಯಕ್ಸ ಜತೆಗಿಲ್ದೆ ಒಬ್ನೇ ತಾಜ್ ಮಹಲ್ ನೋಡಂಗಾಯ್ತು ಅಂತ ವಗ್ಗರಣೆ ಬೇರೆ ಆಕ್ತವೆ' 'ಅದ್ರಾಗ್ ತಪ್ಪೇನೀಗ? ಇರಾ ಇಸ್ಯ ತಾನೆ'?

'ಇರಾ ಇಸ್ಯನೇ ಇರ್‍ಬೋದು ಕಣ್ಲಾ. ಯಾರೋ ಮದ್ವೆ ಆಗದು, ಆಗದೇ ಇರೋದೇ ದೊಡ್ಡ ಇಸ್ಯನಾ?' ಮದ್ವೆ, ಮಕ್ಳುಮರಿ ಅವ್ರವ್ರ ಸಂಸಾರದ ಇಸ್ಯನಪ್ಪ'

'ಅದ್ರೂ ದೊಡ್ ಮನಸ್ರು ಇಚಾರ ಎಲ್ಲ ದೊಡ್ ಇಸ್ಯನೇ ಅಲ್ವ?'

'ಏನ್ ಸುಡುಗಾಡೋ, ಅಲ್ಲ ಈ ಕೆಲವು ಪೇಪರ್‌ನೋರಿಗೆ ಮಾನ ಮರ್‍ಯಾದೆ ಇಲ್ವಾ?'

'ಯಾಕ್ಲ ಅಂಗಂತೀ?'

'ಅಲ್ಲ ಕಣಲಾ, ವಾರಕ್ಕೆ ಮೂರು ಸಿನ್ಮ ಬರ್ತವೆ, ಓಯ್ತವೆ, ಅದ್ಯಾವ್ರುದೋ ಪುಟಗೋಸಿ ಒಂದು ಸಿನ್ಮಾ ಅಂಗೈತೆ ಇಂಗೈತೆ ಲೊಟ್ಟೆ ಲೊಸ್ಕು ಅಂತ ಆಕಾಸ ತಲೆ ಮೇಲೆ ಬಿದ್ದಂಗೆ ಮುಕ ಪುಟದಲ್ಲೇ ದೊಡ್ಡದಾಗಿ ಅಕ್ತರಲ್ಲ ಇವುಕ್ಕೆ ಬುದ್ದಿಗಿದ್ದಿ ಮಾನ ಮರ್ವಾದೆ ಇದೆ ಅನ್ಬೇಕೋ? ಏನನ್ನಬೇಕು?

'ಎಲ್ಲ ಇರ್ತವೆ ನಂಗೆ ನಿಂಗೆ ಅವೆಲ್ಲ ಅರ್ತ ಆಗಕಿಲ್ಲ ಬುಡು'

'ಏನ್ಲ ಅಂಗಂದ್ರೆ?'

'ಒಳಗೊಳಗೆ ಏನಿದ್ದವೋ ನಾವು ಕಂಡಿದಿವೇನ್ಲಾ? ದುಡ್ಡು ಕಾಸಿಂದು ಏನೇನು ಯವಾರ ಇರ್ತವೋ ಏನೇನು ರಾಜಕೀಯ ಇರ್ತವೋ ನಮ್ಗೆ ಗೊತ್ತಾಯ್ತದಾ?'

'ನೀನೇಳದೂ ಸರೀನೆ ಬುಡು ಕೆಲವು ಪೇಪರ್‌ನವ್ರೂ, ಟೀವಿಯವ್ರೂ ಎಂಜಲು ಕಾಸಿಗೆ ನಾಲ್ಗೆ ಚಾಚ್‌ತವೆ, ರಾಜಕೀಯ ಮಾಡ್ತವೆ ಅಂದ್ರೆ ಎಲ್ಲಿಗೆ ಬಂತು ನೋಡು...

"ಏನಾರ ಆಗ್ಲಿ ನಡಿ.... ಆ ಕಡೆ ಮನೆ ಸಿದ್ದಣ್ಣನ ಕಿರಿಮಗ ಗಣೇಸನ ಮದ್ವೆ ಅಂತೆ, ಊಟಕ್ಕೆ ಒಗನ"



ಸಂಸ್ಕಾರ ಒಂದು 'ಅಶ್ಲೀಲ' ಕಾದಂಬರಿಯೇ ಅಥವಾ ಬ್ರಾಹ್ಮಣ್ಯದ ಕರಾಳ, ಕರ್ಮಟ ಮುಖವನ್ನು ಬಯಲಿಗೆಳೆಯುವ ಕೃತಿಯೇ?

ಶೀಲ - ಅಶ್ಲೀಲತೆಯ ನೆಪದಲ್ಲಿ ಜಾತಿವಾದ


ಮಂಗಳೂರು ವಿ.ವಿ.ಯ ಒಂದು ವೃತ್ತಾಂತ

ಸಿವಿಬಿಸಿ

ಮಂಗಳೂರು ವಿಶ್ವವಿದ್ಯಾನಿಲಯ ಸಾಹಿತ್ಯಿಕ ವಲಯದಲ್ಲಿ ಹೊಸ ಚರ್ಚೆಗೆ ನಾಂದಿ ಹಾಡಿದೆ. ಕನ್ನಡ ಸಾರಸ್ವತ ಲೋಕದಲ್ಲೇ ವಿಶಿಷ್ಟ ಕೃತಿ ಎನಿಸಿದ 'ಸಂಸ್ಕಾರ' ಮಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಬಿಎಸ್‌ಸಿ ನಾಲ್ಕನೇ ಸೆಮಿಸ್ಟರ್‌ಗೆ ಹಿಂದಿ ಪಠ್ಯ. ಈ ಪಠ್ಯದಲ್ಲಿ ಅಶ್ಲೀಲ ಪದ ಬಳಕೆಯಾಗಿದೆ. ಇದನ್ನು ಪಾಠ ಮಾಡಲು ಮುಜುಗರ ಆಗುತ್ತಿದೆ ಎಂದು ಕೆಲ ಹಿಂದಿ ಶಿಕ್ಷಕರು, ಹಿಂದಿ ಶಿಕ್ಷಕರ ಸಂಘಟನೆ ನೇತೃತ್ವದಲ್ಲಿ ಕುಲಪತಿ ಕೆ.ಎಂ.ಕಾವೇರಿಯಪ್ಪ ಅವರಿಗೆ ಮನವಿ ಮಾಡಿದರು. ಇದಕ್ಕೆ 'ಸಕಾರಾತ್ಮಕ' ಪ್ರತಿಕ್ರಿಯೆ ನೀಡಿದ ಕಾವೇರಿಯಪ್ಪ ಪಠ್ಯ ಹಿಂತೆಗೆದುಕೊಳ್ಳಲು ಮುಂದಾದರು. ಈ ಬಗ್ಗೆ ಹಿಂದು ಶೈಕ್ಷಣಿಕ ಸಮಿತಿ (ಬಿಡಿಎಸ್)ನ ವಿಶೇಷ ಸಭೆಯನ್ನು ಕರೆದರು.

ವಿವಾದದ ಹಿಂದಿರುವ ಕುಳಗಳು:

ಅಸಲಿಗೆ ಇದು ಕೇವಲ ಶೀಲ, ಅಶ್ಲೀಲತೆಯ ಪ್ರಶ್ನೆ ಅಲ್ಲ. ಇದು ವಿಕೃತ ಮನಸ್ಸಿನ ಕೆಲ ಹಿಂದಿ ಶಿಕ್ಷಕರ ಹುನ್ನಾರ. ಹೇಳಿಕೇಳಿ, ಸಂಸ್ಕಾರ ಕೃತಿ ಬ್ರಾಹ್ಮಣ ಸಮುದಾಯದಲ್ಲಿ ಹುದುಗಿರುವ ಕರ್ಮಠ ಕ್ರೂರ ಸಂಸ್ಕೃತಿಯ ಪ್ರತಿಬಿಂಬ. ಕೆಳಜಾತಿಗಳ ಮೇಲೆ ಮೇಲ್ಜಾತಿಯ ದಮನವನ್ನು ವಿಶಿಷ್ಟವಾಗಿ ಚಿತ್ರಿಸಿರುವ ಈ ಕೃತಿ, ಕೋಮು ವಿಷ ಬಿತ್ತುವ ಮನಸ್ಸಿಗೆ ಆಘಾತ ನೀಡಿದ್ದಂತೂ ನಿಜ. ಸಮಾಜದ ಜಾತೀಯತೆ ವಿರುದ್ಧ ದನಿಯಾಗಿರುವ 'ಸಂಸ್ಕಾರ' ವನ್ನು ವಿರೋಧಿಸುವ 'ಚೆಡ್ಡಿ' ಶಿಕ್ಷಕರಿಗೆ ನಿಜವಾಗಿ ಪ್ರಚೋದನೆ ನೀಡಿದ್ದು ಕುಲಪತಿ ಕೆ.ಎಂ.ಕಾವೇರಿಯಪ್ಪ ಹಾಗೂ ರಿಜಿಸ್ಟಾರ್ ಸುಂದರ್ ನಾಯಕ್.


ಯು. ಆರ್. ಅನಂತಮೂರ್ತಿ

ಕಪ್ಪುಚುಕ್ಕೆ ಆದ ಕಾವೇರಿಯಪ್ಪ

ನಾಲ್ಕೇ ನಾಲ್ಕು ಶಿಕ್ಷಕರು ನೀಡಿದ ಮನವಿಯನ್ನು ಪುರಸ್ಕರಿಸಿದ್ದಲ್ಲದೆ, "ನಾವು ಈ ಪಠ್ಯವನ್ನು ಹಿಂತೆಗೆಯುತ್ತೇವೆ, ನೆಪಮಾತ್ರಕ್ಕೆ ಹಿಂದಿ ಶೈಕ್ಷಣಿಕ ಸಮಿತಿಯ ಸಭೆಯನ್ನು ಕರೆಯುತ್ತೇವೆ. ಈ ಪಠ್ಯವನ್ನು ಬೋಧಿಸುವ ಅಗತ್ಯವಿಲ್ಲ ಎಂದು ನೀವು ಸಾರಬಹುದು" ಎಂದು ಆ ತಕ್ಷಣ ರಿಜಿಸ್ಟರ್ ಸುಂದರ ನಾಯಕ್ ಭರವಸೆ ನೀಡಿದ್ದರು. ಈ ಚೆಡ್ಡಿ ಸಂಘದ ಇನ್ನೊಬ್ಬ ಪ್ರಮುಖನಂತೆ ವರ್ತಿಸುವ ಕುಲಪತಿ ಕಾವೇರಿಯಪ್ಪ, ಸಿಂಡಿಕೇಟ್ ಸದಸ್ಯರನ್ನು ಸಂಪರ್ಕಿಸಿ ಪಠ್ಯದ ಬಗೆಗಿನ ಅಪಪ್ರಚಾರಕ್ಕೆ ಬೆಂಬಲವಾಗಿ ನಿಂತರು.

ಸಂಸ್ಕಾರ ಕೃತಿಯನ್ನು 2 ವರ್ಷಗಳ ಹಿಂದೆಯೇ ಬಿಎಸ್ಸಿ ನಾಲ್ಕನೇ ಸೆಮಿಸ್ಟರ್‌ಗೆ ಪಠ್ಯವಾಗಿ ಶಿಫಾರಸು ಮಾಡಲಾಗಿತ್ತು. ನಾಲ್ಕನೇ ಸೆಮಿಸ್ಟರ್ ಆರಂಭವಾಗುವತನಕ ಈ ಚೆಡ್ಡಿ ಶಿಕ್ಷಕರು ಎಲ್ಲಿದ್ದರು? 2 ವರ್ಷದಲ್ಲಿ ಇವರಲ್ಲಿ ಒಬ್ಬರಾದರೂ ಕನಿಷ್ಠ ಈ ಪುಸ್ತಕ ಓದಿಲ್ಲವೇ? ಸೆಮಿಸ್ಟರ್ ಮುಗಿಯಲು ಇನ್ನು ಕೆಲವೇ ವಾರಗಳಿರುವಾಗ ಏಕಾಏಕಿ ವಿರೋಧಕ್ಕೆ ಮುಂದಾಗಿದ್ದು ಏಕೆ? ಎಂಬ ಪ್ರಶ್ನೆಗಳು ಸಹಜವಾಗಿಯೇ ಬರುತ್ತದೆ.

ಚೆಡ್ಡಿಗಳ ಕುಟಿಲ ತಂತ್ರ

'ಸಂಸ್ಕಾರ' ದ ಕರ್ತೃ ಜ್ಞಾನಪೀಠ ಸಾಹಿತಿ ಡಾ.ಯು.ಆರ್.ಅನಂತಮೂರ್ತಿ ಸಂಘ ಪರಿವಾರದ ಪ್ರಬಲ ವಿರೋಧಿ. ಅದಕ್ಕೂ ಹೆಚ್ಚಾಗಿ ಈ ಕೃತಿ ಮನು ಸಿದ್ಧಾಂತದ ಹೇಸಿಗೆಯನ್ನು ಬಯಲುಮಾಡುವ ಅದ್ಭುತ ಕೃತಿ. ಇದು ಅವರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತು. ಇವರು ತಮ್ಮ ವಿರೋಧಕ್ಕೆ ಕುಲಪತಿ ಹಾಗೂ ರಿಜಿಸ್ಟರ್ ಮಾತ್ರವಲ್ಲ, ವೀರೇಂದ್ರ ಹೆಗ್ಗಡೆ ಅವರನ್ನು ಬಳಸಿಕೊಂಡರು.

ಹೆಗ್ಗಡೆಯೂ ಈ ಕೃತಿಗೂ ಸಂಬಂಧ ಇಲ್ಲದಿದ್ದರೂ, ಅವರು ಯಾವುದೇ ಪ್ರತಿಕ್ರಿಯೆ ನೀಡದಿದ್ದರೂ, ಈ ಕೃತಿಯನ್ನು ಪಠ್ಯವಾಗಿ ಬೋಧಿಸಲು ಅವರೂ ವಿರೋಧವಾಗಿದ್ದಾರೆ ಎಂಬ ಪ್ರಚಾರವೂ ನಡೆಯಿತು. ಆದರೆ, ನಿಜವಾಗಿ ಧೈರ್ಯ ತೋರಿದ್ದು ಮಂಗಳೂರು ವಿಶ್ವವಿದ್ಯಾಲಯದ ಹಿಂದಿ ಶೈಕ್ಷಣಿಕ ಮಂಡಳಿ.

ವಿವಾದದ ಆರಂಭದಿಂದಲೂ ಸಂಸ್ಕಾರವನ್ನು ಸಮರ್ಥಿಸುತ್ತಾ ಬಂದ ಮಂಡಳಿ, ಕುಲಪತಿಯವರ ರಿಜಿಸ್ಟರ್ ಅವರ ಒತ್ತಡಕ್ಕೂ ಮಣಿಯಲಿಲ್ಲ. ಮಂಡಳಿಯ ಅಧ್ಯಕ್ಷ ಸುಳ್ಯದ ಡಾ.ಎಚ್.ಎಂ.ಕುಮಾರಸ್ವಾಮಿ ಅವರ ಸಹಿತ ಎಲ್ಲ 6 ಸದಸ್ಯರು ಒಗ್ಗಟ್ಟಾಗಿ ಚೆಡ್ಡಿ ಶಿಕ್ಷಕರ ತಂತ್ರವನ್ನು ಹಿಮ್ಮೆಟ್ಟಿಸಿದರು.

ವಿಶೇಷ ಸಭೆಯಲ್ಲೂ ಕುತಂತ್ರ

ವಿ.ವಿ. ಕಾನೂನಿನ ಪ್ರಕಾರ ವಿಶೇಷ ಸಭೆಗೂ ಅವಕಾಶವಿಲ್ಲ. ಆದರೆ ಚೆಡ್ಡಿಗಳ ಅಜೆಂಡಾ ಜಾರಿ ಮಾಡಲು ಕಟಿಬದ್ಧರಾಗಿದ್ದ ಕುಲಪತಿ ಹಾಗೂ ರಿಜಿಸ್ಟರ್ ಅದಕ್ಕೂ ಮುಂದಾದರು. ಮಾತ್ರವಲ್ಲ, ಕಾನೂನಿಗೆ ವಿರುದ್ಧವಾಗಿ ಹಿಂದಿ ಶಿಕ್ಷಕರ (ಚೆಡ್ಡಿ) ಪ್ರತಿನಿಧಿಗಳಿಗೆ ಸಭೆಯಲ್ಲಿ ಅವಕಾಶ ಮಾಡಿಕೊಟ್ಟರು. ಆದರೂ ಪಠ್ಯವನ್ನು ಹಿಂದೆ ಪಡೆಯುವಲ್ಲಿ ಮಾತ್ರ ಈ ಆಸಾಮಿಗಳು ವಿಫಲರಾದರು.

ಶೈಕ್ಷಣಿಕ ಮಂಡಳಿಯ ನಿರ್ಧಾರ

ಅಂತಿಮವಾಗಿ ಶೈಕ್ಷಣಿಕ ಮಂಡಳಿ 2 ಪುಟಗಳ ಸಂಕ್ಷಿಪ್ತ ನಿರ್ಣಯವನ್ನು ಕೈಗೊಂಡಿತು. ಅದರ ಸಾರವನ್ನು ಈ ಕೆಳಗಿನಂತೆ ನೀಡಲಾಗಿದೆ.


ಸಂಸ್ಕಾರ ಸಿನಿಮಾದ ಒಂದು ದೃಶ್ಯ

'ಸಂಸ್ಕಾರ' ಜ್ಞಾನಪೀಠ ಪ್ರಶಸ್ತಿ ಗಳಿಸಿರುವ ಡಾ.ಯು.ಆರ್.ಅನಂತಮೂರ್ತಿ ಅವರ ಶ್ರೇಷ್ಠ

ಕಂಬಾಲಪಲ್ಲಿ ಮಾತ್ರವಲ್ಲ ಹೆಬ್ಬಾಣಿ, ನಾಗಲಪಲ್ಲಿ

ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ ಎಂಬ ಚರ್ಚೆ ನಡೆಯುತ್ತಿರುವಾಗಲೇ ಕಳೆದ ತಿಂಗಳು ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಹೆಬ್ಬಾಣಿ ಗ್ರಾಮದಲ್ಲಿ ಲಕ್ಷ್ಮಮ್ಮ ಎಂಬ ದಲಿತ ಹೆಣ್ಣುಮಗಳ ಕೊಲೆಯಾಗಿದೆ. ಊರಿನ ಸವರ್ಣೀಯ ಯುವಕನೊಬ್ಬ ಪ್ರೀತಿಯ ನಾಟಕವಾಡಿ ಆಕೆಯನ್ನು ಗರ್ಭಿಣಿ ಮಾಡಿ, ವಿಷಯ ತಿಳಿದ ಕೂಡಲೇ ಆಕೆಯನ್ನು ಕೊಲೆ ಮಾಡಿ ಬಾವಿಗೆ ಹಾಕಿದ್ದಾನೆ. ಪ್ರಕರಣ ಊರ ಜನರ ಬಾಯಲ್ಲಿ ಬಯಲಾದಾಗ ಊರಿನ ಸವರ್ಣೀಯ 'ನ್ಯಾಯಾಧೀಶರು' (ಯಜಮಾನರು) ಪಂಚಾಯಿತಿ ನಾಟಕವಾಡಿ ಪೋಲೀಸ್ ಠಾಣೆ ಮೆಟ್ಟಲೇರದಂತೆ 'ಪೋಲೀಸು ಕೇಸು ಗೀಸು ಅಂದ್ರೆ ಏನ್ ಬರ್‍ತದೋ ಏನೋ ಅಷ್ಟೋ ಇಷ್ಟೋ ತಗೊಂಡು ತೆಪ್ಪಗಿರು' ಎಂಬ ತೀರ್ಪನ್ನು ನೀಡಿ ಪ್ರಕರಣವನ್ನು ಮುಚ್ಚಿ ಹಾಕುವ ವ್ಯವಸ್ಥಿತ ಪ್ರಯತ್ನ ನಡೆಸಲಾಗಿದೆ.

ಇದರ ಮಧ್ಯೆ ದಲಿತರ ಮೇಲಿನ ದೌರ್ಜನ್ಯಗಳ ಕುರಿತ ನ್ಯಾಯಾಲಯಗಳ ತೀರ್ಪುಗಳು ಶೋಷಿತರಲ್ಲಿ ಭ್ರಮನಿರಸನ ಉಂಟು ಮಾಡುತ್ತಿವೆ.

ಸಾಕ್ಷಿಯ ಕೊರತೆ

2002ರಲ್ಲಿ ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕು ನಾಗಲಪಲ್ಲಿ ಎಂಬ ಗ್ರಾಮದಲ್ಲಿ ನಡೆದ ಮೂವರು ಸಾಕ್ಷ್ಯಾಧಾರದ ಕೊರತೆಯ ಸಲ್ಲದ ಕಾರಣ ನೀಡಿ ಕೋರ್ಟ್ ಕೈ ಚೆಲ್ಲಿದೆ.

ಸರ್ಕಾರ ನೀಡಿದ ಇನಾಮಿ ಜಮೀನನ್ನು ತಮಗೆ ನೀಡಲಿಲ್ಲ ಎಂಬ ಕಾರಣಕ್ಕಾಗಿ ಇಲ್ಲಿನ ಮೇಲ್ಜಾತಿಯ ಜನ ಯಶೋಧಮ್ಮ ಹಾಗೂ ಈಕೆಯ ಇಬ್ಬರು ಮಕ್ಕಳಿಂದ ದಿನೇಶ್ ಹಾಗೂ ಚಂದ್ರಶೇಖರ್ ಮೇಲೆ ಹಲ್ಲೆ ನಡೆಸಿದರು. ಈ ಸಂಬಂಧ ಯಶೋಧಮ್ಮ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ನಮ್ಮ ವಿರುದ್ಧ ದೂರು ನೀಡಿದ್ದಾರೆ ಎಂಬ ಕಾರಣಕ್ಕಾಗಿ ಕುಪಿತಗೊಂಡ ಸವರ್ಣೀಯರು ಯಶೋಧಮ್ಮ ದಿನೇಶ್ ಹಾಗೂ ಚಂದ್ರಶೇಖರ್ ಎಂಬುವವರನ್ನು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದರು.

ಈ ಪ್ರಕರಣದ ವಿಚಾರಣೆಯಲ್ಲಿ ಕೋರ್ಟ್ ಅಗತ್ಯ ಸಾಕ್ಷ್ಯಾಧಾರದ ಕೊರತೆ ಕಾರಣ ನೀಡುತ್ತಿದೆ. ವಿಚಾರಣೆಯ ವೇಳೆ ಚಂದ್ರಶೇಖರ್ ಮಡದಿ ಸಾಕ್ಷ್ಯ ನುಡಿದಿದ್ದಾರೆ ಹಾಗೂ ಮುಖ್ಯವಾಗಿ ಪೋಲೀಸ್



ಕೊಲೆಯಾಗಿ ಹೋದ ಚಂದ್ರಶೇಖರ್‌ರ ಪತ್ನಿ ಮತ್ತು ಮಗು - ಬಲಕ್ಕೆ ಪ್ರತಿಭಟನಾ ರ್‍ಯಾಲಿಯ ಚಿತ್ರ

ತನಿಖೆಯಲ್ಲಿ "ಮೂವರ ಶವಗಳನ್ನು ಹುಲ್ಲುಮೆದೆಯಲ್ಲಿ ಹುದುಗಿಸಿಡಲಾಗಿತ್ತು. ಕೊಲೆಯಾಗುವ ವೇಳೆ ಕೊಲೆಗಾರರ ಕೂದಲನ್ನು ಹಿಡಿಯಲಾಗಿ, ಕೂದಲು ಪತ್ತೆಯಾಗಿ ಅದನ್ನು ಡಿಎನ್ಎ ಪರೀಕ್ಷೆಗೊಳಪಡಿಸಿ ಕೊಲೆಗಡುಕರ ಪತ್ತೆಯಾಗಿದೆ', ಹೀಗಿದ್ದೂ ಕೂಡ ಕೋರ್ಟ್ ಸಾಕ್ಷ್ಯಾಧಾರಗಳ ಬರ ಎದುರಿಸುತ್ತಿದೆಯಂತೆ.

ಇನ್ನು ಕಂಬಾಲಪಲ್ಲಿ ಘಟನೆ ಕೂಡ ಇದಕ್ಕೆ ಹೊರತಾಗಿಲ್ಲ, ಮಾತ್ರವಲ್ಲ ಕಂಬಾಲಪಲ್ಲಿ ಪ್ರಕರಣದ ನ್ಯಾಯಾಲಯದ ತೀರ್ಪು ಪಾಳೇಗಾರಿಕೆಯ ಪಾತಕಿಗಳ ಪಾಲಿಗೆ ವರವಾಗಿ ಪರಿಣಮಿಸಿದೆ.

2000ನೇ ಇಸ್ವಿಯಲ್ಲಿ ಕಂಬಾಲಪಲ್ಲಿ ಗ್ರಾಮದಲ್ಲಿ ಒಂದು ದಲಿತ ಕುಟುಂಬ ಸಾಂಸ್ಕೃತಿಕವಾಗಿ/ಆರ್ಥಿಕವಾಗಿ ಬೆಳೆಯುತ್ತಿರುವುದನ್ನು ಸಹಿಸದ ಊರಿನ ಮೇಲ್ಜಾತಿಯ ಜನ ಒಂದೇ ಕುಟುಂಬದ 7 ಜನ ದಲಿತರನ್ನು ಕಗ್ಗೊಲೆ ಮಾಡಿದ್ದರು. ಈ ಪ್ರಕರಣ ದೇಶದ ಸಂವಿಧಾನವನ್ನು ಅಣಕಿಸುವಂತೆ ಮಾಡಿದ್ದಲ್ಲದೆ ಮಾನವೀಯತೆ ಬಯಸುವ ಅಸಂಖ್ಯಾತ ಜನರನ್ನೂ ತಲೆತಗ್ಗಿಸುವಂತೆ ಮಾಡಿತ್ತು. ಆದರೆ ದುರದೃಷ್ಟವಶಾತ್ ಈ ಪ್ರಕರಣ ನ್ಯಾಯಾಲಯದ ತೀರ್ಪು ನ್ಯಾಯಾಂಗವನ್ನು ಅಣಕಿಸುವಂತೆ ಮಾಡಿದೆ. ಸಾಕ್ಷ್ಯಾಧಾರದ

ಪುಟ 14ಕ್ಕೆ

ಬೆನ್ನಿಗಾನಹಳ್ಳಿ : ವಿಶಾಲ ಸೇತುವೆಗಾಗಿ ರಸ್ತೆ ತಡೆ

ಕಾಲ್‌ಸೆಂಟರ್ ಹಾಗೂ ಬಹುಮಹಡಿ ಕಟ್ಟಡಗಳ ನಿರ್ಮಾಣದಿಂದಾಗಿ ಬೆಂಗಳೂರು ನಗರ ತನ್ನ ಸಹಜವಾದ ವೇಗಕ್ಕಿಂತಲೂ ವೇಗವಾಗಿ ವಾಹನ ಸಂಚಾರ ಅಧಿಕವಾಗಿದ್ದು, ಇದಕ್ಕೆ ತಕ್ಕಂತೆ ಮೂಲಸೌಕರ್ಯಗಳ ಅನುಕೂಲದ ಕೊರತೆಯಿರುವುದರಿಂದ ಜನರು ದಿನನಿತ್ಯ ಸಂಚರಿಸಲು ಅನಾನುಕೂಲವಾಗಿ ನರಕಯಾತನೆ ಅನುಭವಿಸುವ ಪರಿಸ್ಥಿತಿ ಉಂಟಾಗಿರುತ್ತದೆ.

ನಗರಕ್ಕೆ ಹೊಂದಿಕೊಂಡಂತೆ ಇರುವ ವೈಟ್‌ಫೀಲ್ಡ್, ಕೆ.ಆರ್.ಪುರಂ ಹಾಗೂ ಮಾರತ್‌ಹಳ್ಳಿ ಪ್ರದೇಶಗಳಲ್ಲಿ ಮಾಹಿತಿ ತಂತ್ರಜ್ಞಾನ ಬಿಪಿಓ ಹಾಗೂ ಬಹುಮಹಡಿ ಕಟ್ಟಡಗಳ ನಿರ್ಮಾಣ ಮತ್ತಿತರ ಚಟುವಟಿಕೆಗಳು ಕೇಂದ್ರೀಕೃತ ವಾಗಿರುವುದರಿಂದ ಹಳೇ ಮದ್ರಾಸ್ ರಸ್ತೆ, ವೈಟ್‌ಫೀಲ್ಡ್ ರಸ್ತೆ, ಮಾರತ್‌ಹಳ್ಳಿ ರಸ್ತೆಗಳಲ್ಲಿ ಪ್ರತಿನಿತ್ಯ 1 ಲಕ್ಷಕ್ಕೂ ಅಧಿಕ ವಾಹನಗಳು ಸಂಚರಿಸುತ್ತಿವೆ. ಅಲ್ಲದೆ ಪ್ರತಿದಿನ ಸುಮಾರು 1 ಸಾವಿರಕ್ಕೂ ಹೆಚ್ಚು ಹೊಸ ವಾಹನಗಳು ರಸ್ತೆಗೆ ಇಳಿಯುತ್ತಿದ್ದು ಇದಕ್ಕೆ ತಕ್ಕಂತೆ ರಸ್ತೆ ವಿಸ್ತೀರ್ಣ, ಮೇಲ್ ಮತ್ತು ಕೆಳಸೇತುವೆಗಳ ನಿರ್ಮಾಣ ತುರ್ತಾಗಿ ಆಗಬೇಕಾಗಿದೆ.

ಹಳೇ ಮದ್ರಾಸ್ ರಸ್ತೆ ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಹಾದುಹೋಗುವ ಬೆನ್ನಿಗಾನಹಳ್ಳಿ ಬಳಿಯ ರೈಲ್ವೆ ಕೆಳಸೇತುವೆ ಬಹಳ ಕಿರಿದಾಗಿದ್ದು ಪ್ರತಿದಿನ ಸುಮಾರು 1 ಲಕ್ಷ ಗಾಡಿಗಳು ಸಂಚರಿಸುವುದರಿಂದ ವಾಹನ ದಟ್ಟಣೆ ಅಧಿಕವಾಗಿದ್ದು ಸುಗಮವಾಗಿ ಸಂಚರಿಸಲಾಗದೆ ವಾಹನಗಳು ಗಂಟೆಗಟ್ಟಲೆ ಮಂದಗತಿಯಿಂದ ಚಲಿಸುವುದರಿಂದ ಸಮಯ ಹಾಗೂ ಪೆಟ್ರೋಲ್/ಡೀಸಲ್ ವೆಚ್ಚವಾಗುತ್ತಿರುವುದಲ್ಲದೆ ವಾಯುಮಾಲಿನ್ಯ ತೀವ್ರಗೊಳ್ಳುತ್ತಿದ್ದು ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ.

ಅದೇ ರೀತಿ ಟಿ.ಟಿ.ಕೆ ಮುಂಭಾಗದ ರಸ್ತೆಯು ಸುಮಾರು 150 ಅಡಿಗಳಷ್ಟಿದ್ದು, ವಾಹನಗಳ ದಟ್ಟಣೆ ಹೆಚ್ಚಾಗುವುದರ ಪರಿಣಾಮವಾಗಿ ಪಾದಚಾರಿಗಳು ರಸ್ತೆಯನ್ನು ದಾಟಲು ತಮ್ಮ ಜೀವವನ್ನೇ ಪಣವಾಗಿಡಬೇಕಾಗುತ್ತದೆ. ಇದೆಲ್ಲವನ್ನು ಮನಗಂಡರೂ ಚುನಾಯಿತ ಜನಪ್ರತಿನಿದಿಗಳು ಮತ್ತು ಸರ್ಕಾರಗಳು ಮೌನವಾಗಿರುವುದು ಜನರ ದುರಾದೃಷ್ಟ.

ಆದ್ದರಿಂದ ಈಗಲಾದರೂ ಸರ್ಕಾರ ಬೆನ್ನಿಗಾನಹಳ್ಳಿ ರೈಲ್ವೆ ಕೆಳಸೇತುವೆಯನ್ನು ವಿಸ್ತರಿಸಬೇಕೆಂದೂ ಹಾಗೂ ಟಿ.ಟಿ.ಕೆ ಮುಂಭಾಗದಲ್ಲಿ ಪಾದಚಾರಿಗಳ ಸುರಂಗ ಮಾರ್ಗವನ್ನು ನಿರ್ಮಿಸಬೇಕೆಂದೂ ಒತ್ತಾಯಿಸಿ ಸಿಪಿಐ(ಎಂ) ಬೆಂಗಳೂರು ಪೂರ್ವ ವಲಯ ಸಮಿತಿಯಿಂದ 11.02.08ರಂದು 5 ಗಂಟೆಗೆ ರಸ್ತೆ ತಡೆ ಚಳುವಳಿಯನ್ನು ನಡೆಸಲಾಯಿತು. ಗೋಪಾಲಗೌಡ, ಗೌರಮ್ಮ, ರಾಮಚಂದ್ರ, ವಾರಿಯರ್, ರಮೇಶ್ ಮುಂತಾದವರು ನೇತೃತ್ವ ವಹಿಸಿದ್ದರು.

ಶಿವಮೊಗ್ಗ : ಐಓಸಿ ಕಾರ್ಮಿಕರ ಯಶಸ್ವಿ ಮುಷ್ಕರ

ಫೆ. 4 ರಂದು ಶಿವಮೊಗ್ಗ ತಾಲ್ಲೂಕು ಮಾಚೇನಹಳ್ಳಿಯಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೊರೇಶನ್ ನಲ್ಲಿ ಗುತ್ತಿಗೆ ಕಾರ್ಮಿಕರಾಗಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರು ಯಶಸ್ವಿ ಒಂದು ದಿನದ ಮುಷ್ಕರವನ್ನು ಆಚರಿಸಿದರು.

ಈ ಹಿಂದೆ ರಾಜ್ಯಾದ್ಯಂತ ಐ.ಓ.ಸಿ. ಗುತ್ತಿಗೆ ಕಾರ್ಮಿಕರು ಸಂಘಟಿತರಾಗಿ ಡಿಸೆಂಬರ್ 2006ರಲ್ಲಿ ಆಡಳಿತ ವರ್ಗಕ್ಕೆ ಮತ್ತು ಕಂಟ್ರಾಕ್ಟರ್‌ದಾರರಿಗೆ ಬೇಡಿಕೆ ಪಟ್ಟಿಯನ್ನು ಸಲ್ಲಿಸಿದ್ದರು. ಕಠಿಣ ಪರಿಶ್ರಮದಿಂದ ದಿನವೊಂದಕ್ಕೆ 35 ಲೋಡ್ ಮತ್ತು ಅನ್‌ಲೋಡ್ ಮಾಡಿ (ಗ್ಯಾಸ್ ಸಿಲಿಂಡರ್), ಕ್ಯಾಪಿಂಗ್, ಚಕಪ್, ಡೀಸಲ್ ಹಾಕುವುದು, ಹೌಸ್ ಕೀಪಿಂಗ್, ಲೇಬಲ್ ಹಚ್ಚುವುದು, ಇನ್ನು ಮುಂತಾದ ಕೆಲಸಗಳನ್ನು ಗುತ್ತಿಗೆ ಕಾರ್ಮಿಕರೇ ನಿರ್ವಹಿಸುತ್ತಿದ್ದಾರೆ. ಆದರೆ ಇವರಿಗೆ ದಿನವೊಂದಕ್ಕೆ 91 ರೂಪಾಯಿಗಳು ಮಾತ್ರ ನೀಡಲಾಗುತ್ತಿದೆ.

ಆಡಳಿತ ಮಂಡಳಿಯ ವಿಳಂಬ ನೀತಿಯನ್ನು ಪ್ರತಿಭಟಿಸಿ ಕಪ್ಪು ಪಟ್ಟಿ ಧರಿಸುವುದು, ಧರಣಿ ಸತ್ಯಾಗ್ರಹ, ಟೆಲಿಗ್ರಾಂ ಚಳುವಳಿ, ಘೋಷಣೆ ಕೂಗುವುದು, ಗೇಟ್ ಮೀಟಿಂಗ್ ಇತ್ಯಾದಿ ಚಳುವಳಿಗಳನ್ನು ನಡೆಸುತ್ತಿದ್ದರೂ, ಆಡಳಿತ ವರ್ಗ ಬಡ ಕಾರ್ಮಿಕರ ಕೂಗಿಗೆ ಬೆಲೆ ನೀಡಿರಲಿಲ್ಲ.

ಅಸಿಸ್ಟೆಂಟ್ ಲೇಬರ್ ಕಮಿಷನರ್ (ಸೆಂಟ್ರಲ್) ಇವರು ಸಂಧಾನ ಸಭೆ ನಡೆಸಿದರು. ಯಾವುದೇ ಪ್ರಯೋಜನವಾಗಲಿಲ್ಲ. ಆದ್ದರಿಂದ ರಾಜ್ಯ ಸಮಿತಿ ಮುಷ್ಕರ ಹಾದಿ ಹಿಡಿಯುವುದೇ ಸೂಕ್ತವೆಂದು ನಿರ್ಧರಿಸಿ ಒಂದು ದಿನದ ಮುಷ್ಕರಕ್ಕೆ ಕರೆ ನೀಡಿತು. ಅದರನ್ವಯ ಶಿವಮೊಗ್ಗದಲ್ಲಿ ಪೊಲೀಸ್ ಹಾಗೂ ಆಡಳಿತ ವರ್ಗದವರ ಚಿತಾವಣೆಯನ್ನು ಎದುರಿಸಿ ಮುಷ್ಕರ ನಡೆಸಿದರು. ಆಡಳಿತ ವರ್ಗ ಮತ್ತು ಗುತ್ತಿಗೆದಾರರು ಸೇರಿ ಕೆಲವು ಹೊರಗಿನ ಜನಗಳನ್ನು ವ್ಯಾನಿನಲ್ಲಿ ಕರೆತಂದು ಉತ್ಪಾದನೆಯಲ್ಲಿ ತೊಡಗಿಸುವುದಕ್ಕೆ ಪ್ರಯತ್ನ ನಡೆಸಿದರು. ಅವರನ್ನು ತಡೆದ ಕಾರ್ಮಿಕರು ಟ್ರಕ್‌ಗಳು ಪ್ಲಾಂಟ್ ಒಳಗೆ ಹೋಗದಂತೆ ತಡೆಹಿಡಿದು, ಗೇಟ್ ಮುಂಭಾಗದಲ್ಲಿ ಕೆಂಬಾವುಟ ಹಿಡಿದು ಧರಣಿ ಕುಳಿತರು. ಆಡಳಿತ ವರ್ಗ ಸುಳ್ಳು ವದಂತಿಗಳನ್ನು ಹರಡಿ ಮುಷ್ಕರ ಮುರಿಯಲು ಪ್ರಯತ್ನಿಸಿತು. ಖಾಯಂ ಕೆಲಸಗಾರರು ಮುಷ್ಕರ ಮುರಿಯುವ ಪ್ರಯತ್ನ ನಡೆಸಿದರು. ಆದರೆ ಅವರ ಆಟ ನಡೆಯಲಿಲ್ಲ. ಮುಷ್ಕರ ಯಶಸ್ವಿಯಾಗಿ ನಡೆಯಿತು. ನೂರಾರು ಸಂಖ್ಯೆಯಲ್ಲಿ ನಿದಿಗೆ, ಮಾಚೇನಹಳ್ಳಿಯ ಮಹಿಳೆಯರು, ರೈತರು, ವಿ.ಐ.ಎಸ್.ಎಲ್. ಗುತ್ತಿಗೆ ಕಾರ್ಮಿಕರು ಇತರ ಕಾರ್ಮಿಕ ಸಂಘಟನೆಗಳವರು ಸ್ಥಳಕ್ಕೆ ಧಾವಿಸಿ ಬೆಂಬಲ ವ್ಯಕ್ತಪಡಿಸಿದರು. ರಾಜ್ಯ ಸಂಘಟನಾ ಕಾರ್ಯದರ್ಶಿ ಎಸ್.ಬಿ.ಶಿವಶಂಕರ್, ಶಿವಮೊಗ್ಗ ಶಾಖೆಯ ಅಧ್ಯಕ್ಷ ರಾಮಯ್ಯ, ಉಪಾಧ್ಯಕ್ಷ ಗೋವಿಂದರಾಜ್, ಕಾರ್ಯದರ್ಶಿ ದುರ್ಗೇಶಪ್ಪ, ಖಜಾಂಚಿ ಚಂದ್ರಪ್ಪ ಇವರು ನೇತೃತ್ವ ವಹಿಸಿದ್ದರು. ಒಟ್ಟಾರೆ ಈ ಮುಷ್ಕರ ಕಾರ್ಮಿಕರಲ್ಲಿ ಹೋರಾಟದ ಹುಮ್ಮಸ್ಸನ್ನು ಮೂಡಿಸಿದೆ. ಬೆಂಗಳೂರು, ದೇವಗುಂದಿ, ಬೆಳಗಾಂ ಪ್ಲಾಂಟುಗಳಲ್ಲೂ ಮುಷ್ಕರ ಯಶಸ್ವಿಯಾಗಿದೆ. ಇದು ಗುತ್ತಿಗೆ ಕಾರ್ಮಿಕರ ಹೋರಾಟಕ್ಕೆ ಶಿವಮೊಗ್ಗದಲ್ಲಿ ಹೊಸ ಬಲ ತಂದಿದೆ.

– ಎಸ್.ಬಿ.ಶಿವಶಂಕರ್


ಬೆಂಗಳೂರನ್ನು 'ಕಟ್ಟುತ್ತಿರುವ' ಕಟ್ಟಡ ಕಾರ್ಮಿಕರ ಸಮಾವೇಶ

ಕಟ್ಟಡ ಕಾರ್ಮಿಕರ ದುಡಿಮೆ ಇಲ್ಲದೆ ಯಾವುದೇ ನಿರ್ಮಾಣದ ಕೆಲಸ ಸಾಧ್ಯವಿಲ್ಲ. ಕಟ್ಟಡ ಕಾರ್ಮಿಕರು ತಮ್ಮ ದುಡಿಮೆಯಿಂದ ಈ ಭೂಮಿಯನ್ನು ಅದರ ಹಿಂದಿನ ಗುರುತು ಸಿಗದಂತೆ ಬದಲಾಯಿಸಿದ್ದಾರೆ.

ಕಟ್ಟಡ ನಿರ್ಮಾಣ ಕೈಗಾರಿಕೆ ಪುರಾತನ ಕೈಗಾರಿಕೆ, ಕಟ್ಟಡ ನಿರ್ಮಿಸಲು ದುಡಿಯುತ್ತಿರುವ, ಮೇಸ್ತ್ರಿಗಳು, ಕಾರ್ಮಿಕರುಗಳು ಪುರಾತನ ಕಾರ್ಮಿಕರು, ಇಂದು ಅವರ ಜೀವನದ ಪರಿಸ್ಥಿತಿ ತುಂಬ ಅಭದ್ರತೆಯಿಂದ ಕೂಡಿದೆ, ಒಂದು ಕಡೆ ನೆಲೆ ನಿರ್ಮಿಸುವ, ಮನೆ, ರಸ್ತೆ ಮುಂತಾದವನ್ನು ನಿರ್ಮಾಣ ಮಾಡುವ ಇವರ ಬದುಕು ಬೀದಿಯಲ್ಲಿ ಅತಂತ್ರವಾಗಿದೆ. ಎಲ್ಲಿ ಮನೆ ನಿರ್ಮಿಸುತ್ತಾರೋ ಅಲ್ಲೇ ಮಾಲಿಕರು ನೀಡಿದ ಷೇಡ್‌ಗಳಲ್ಲಿ ಅಥವಾ ಕೊಳಚೆ ಪ್ರದೇಶದ ಗುಡಿಸಲುಗಳಲ್ಲಿ ಅವರ ಜೀವನ. ನಾಗರೀಕ ಸೌಲಭ್ಯಗಳನ್ನು ನಿರ್ಮಿಸುವ ಇವರಿಗೆ ಕನಿಷ್ಠ ನಾಗರೀಕ ಅವಶ್ಯಕತೆಗಳಾದ ಶೌಚಾಲಯ, ಸ್ನಾನದ. ಮನೆ, ವಿದ್ಯುತ್ ದೀಪಗಳು ಮುಂತಾದ ಯಾವುದೇ ಸೌಲಭ್ಯಗಳು ಇರುವುದಿಲ್ಲ. ಪ್ರದೇಶದಿಂದ ಪ್ರದೇಶಕ್ಕೆ ಅಲೆಯುವ ಇವರ ಬದುಕಿನ ಸ್ಥಿತಿಯ ಕಾರಣದಿಂದ ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸಲು ಆಗುತ್ತಿಲ್ಲ.

ಕಾರ್ಮಿಕರು ದುಡಿಮೆ ಮಾಡುತ್ತ ತಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಲು ಸಂಘ ಕಟ್ಟಿಕೊಳ್ಳುವುದು ಹೋರಾಟ ನಡೆಸುವುದು ಸಹಜ ಪ್ರಕ್ರಿಯೆ. ಅಲ್ಲದೆ ಕಟ್ಟಡ, ರಸ್ತೆಗಳ ನಿರ್ಮಾಣವು ಅಭಿವೃದ್ಧಿಯ ಒಂದು ಭಾಗ. ಅಭಿವೃದ್ಧಿಯ ಇನ್ನೊಂದು ಭಾಗ ಮಾನವ ಅಭಿವೃದ್ಧಿ. ಈ ಅಭಿವೃದ್ಧಿಯಲ್ಲಿ ಕಾರ್ಮಿಕರು ಗೌರವಯುಕ್ತ ಜೀವನ ನಡೆಸಲು ಬೇಕಾದಂತಹ ಸಾಮಾಜಿಕ ಸೌಲಭ್ಯಗಳು ಸಾಮಾಜಿಕ ಭದ್ರತೆಗಳು ಇರಬೇಕಾಗುತ್ತದೆ. ಈ ಹಕ್ಕುಗಳಿಗಾಗಿ ಕಾರ್ಮಿಕರು ಸಂಘಟಿತರಾಗಿ ಹೋರಾಟ ನಡೆಸುತ್ತಿದ್ದಾರೆ.

ಅದರ ಭಾಗವಾಗಿ ಕೇರಳ, ತಮಿಳುನಾಡು ರಾಜ್ಯಗಳಲ್ಲಿ ಕಟ್ಟಡ ಕಾರ್ಮಿಕರು ಸಂಘಟಿತರಾಗಿ ದೀರ್ಘ ಹೋರಾಟ ನಡೆಸಿದ ಮೇಲೆ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ರಚಿಸಿ, ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. ಈ ರಾಜ್ಯಗಳಲ್ಲಿ ಕಾರ್ಮಿಕರಿಗೆ ನೀಡಿದ ರೀತಿಯ ಸೌಲಭ್ಯಗಳನ್ನು ಭಾರತದಲ್ಲಿ ಎಲ್ಲಾ ರಾಜ್ಯಗಳಲ್ಲಿ ನೀಡಬೇಕೆಂದು ಕಾರ್ಮಿಕರು ಹೋರಾಟ ನಡೆಸಿದ ಫಲವಾಗಿ 1996ರಲ್ಲಿ ಕೇಂದ್ರ ಸರ್ಕಾರ ಕಾನೂನು ಜಾರಿಗೆ ತಂದಿತು. ರಾಜ್ಯದಲ್ಲಿಯೂ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಸಿಐಟಿಯು ಮತ್ತಿತರೆ ಕಾರ್ಮಿಕರ ಸಂಘಗಳ ನೇತೃತ್ವದಲ್ಲಿ 10 ವರ್ಷಗಳ ಕಾಲ ಹೋರಾಟ ನಡೆಸಿದ ನಂತರ 2006ರ ನವೆಂಬರ್ 1ರಂದು ಕಲ್ಯಾಣ ಮಂಡಳಿ ರಚನೆಯಾಗಿದೆ. ಕಲ್ಯಾಣ ಮಂಡಳಿಯಿಂದ ಸೌಲಭ್ಯ ಪಡೆಯುವ ಭಾಗವಾಗಿ ಸರ್ಕಾರದ ಮಂಡಳಿಯಲ್ಲಿ ನೊಂದಾಯಿತರಾದ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಐಟಿಯು) ಸಂಘದ ಬೆಂಗಳೂರು ಜಿಲ್ಲೆಯ ಶಾಂತಿನಗರ ವಾರ್ಡ್ ಪ್ರದೇಶದ ಸದಸ್ಯರ ಕಾರ್ಮಿಕರ ಸಮಾವೇಶ ಮತ್ತು ಗುರುತಿನ ಚೀಟಿ ವಿತರಣೆ ಸಮಾರಂಭ 10.02.2008ರ ಭಾನುವಾರ ಬೆಳಿಗ್ಗೆ ವಿಲ್ಸನ್ ಗಾರ್ಡನ್‌ನಲ್ಲಿರುವ ಕನ್ನಡ ಯುವಜನ ಸಂಘದಲ್ಲಿ ನಡೆಯಿತು. ಸಮಾರಂಭದಲ್ಲಿ ರಾಜ್ಯ ಫೆಡರೇಷನ್ ಪ್ರಧಾನ ಕಾರ್ಯದರ್ಶಿಯಾದ ಕಾಂ.ವೀರಸ್ವಾಮಿ, ಸಿಐಟಿಯುವಿನ ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಕಾಂ.ಕೆ.ಎನ್. ಉಮೇಶ್‌ರವರು, ಫೆಡರೇಷನ್ ಬೆಂಗಳೂರು ಜಿಲ್ಲಾ ಸಂಚಾಲಕರಾದ ಎಸ್.ಶಂಕರ್ ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಡಿವೈಎಫ್‌ಐನ ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಕಾಂ.ನಾಗರಾಜ್ ವಹಿಸಿದ್ದರು.



ದೊಡ್ಡ ದೊಡ್ಡ ಮಾಲ್‌ಗಳನ್ನು ಕಟ್ಟುವ ಬಿಲ್ಡರ್‌ಗಳು ಕಲ್ಯಾಣ ಮಂಡಳಿಗೆ ಸೆಸ್ (ತೆರಿಗೆ) ಕೊಡುವುದರಿಂದ ತಪ್ಪಿಸಿಕೊಳ್ಳಲು ಕುತಂತ್ರಗಳನ್ನು ಮಾಡುತ್ತಿದ್ದರೆ ಇದನ್ನು ಕಾರ್ಮಿಕರು ಸಂಘಟಿತರಾಗಿ ಬಯಲಿಗೆಳೆಯಬೇಕು. ಕಾರ್ಮಿಕರಿಗೆ ಇಂದು ಕೆಲಸ ಮಾಡುವಾಗ ಯಾವುದೇ ರಕ್ಷಣಾತ್ಮಕ ಕ್ರಮಗಳನ್ನು ಮಾಲೀಕರು ಮಾಡದಿರುವ ಕಾರಣ ಅಪಘಾತಗಳು ಹೆಚ್ಚುತ್ತಿವೆ. ಅಲ್ಲದೆ ಕಟ್ಟಡ ಕಾರ್ಮಿಕರು ಹೆಚ್ಚಾಗಿ ಬೇರೆ ರಾಜ್ಯ ಜಿಲ್ಲೆಗಳಿಂದ ವಲಸೆ ಬಂದಿರುವವರು. ಅವರನ್ನು ಧರ್ಮ, ಜಾತಿ, ಭಾಷೆಗಳ ಹೆಸರಿನಲ್ಲಿ ಒಡೆಯಲು ಮತ್ತು ಕಾರ್ಮಿಕರನ್ನು ಹೆದರಿಸುವ ತಂತ್ರಗಳನ್ನು ಮಾಲಿಕರು ಮಾಡುತ್ತಿದ್ದಾರೆ. ಈ ಬಗ್ಗೆ ಕಾರ್ಮಿಕರು ಎಚ್ಚರವಾಗಿ ಇರಬೇಕು. ಸಂಘ ಬಲಪಡಿಸಿ ಒಗ್ಗಟ್ಟು ಪ್ರದರ್ಶಿಸಿ ಕಲ್ಯಾಣ ಮಂಡಳಿಯ ಸೌಲಭ್ಯ ಪಡೆಯಬೇಕು ಎಂದು ಕಾಂ.ಉಮೇಶ್ ಹೇಳಿದರು.

ಕಾಂ.ಎಸ್.ಶಂಕರ್ ಸ್ವಾಗತಿಸಿದರು. ಶಾಂತಿ ನಗರ ವಾರ್ಡ್ ಡಿವೈಎಫ್‌ಐ ಮುಖಂಡರಾದ ಕಾಂ.ಈಶ್ವರ್ ವಂದಿಸಿದರು. ಸುಧಾಕರ ರಾವ್‌ರವರನ್ನು ಸಂಚಾಲಕರನ್ನಾಗುಳ್ಳ ಸಮಿತಿಯನ್ನು ಚುನಾಯಿಸಿತು.

ಬೈಂದೂರಿನಲ್ಲೂ : ಉಡುಪಿ ಜಿಲ್ಲೆಯ ವಲಯ ಮಟ್ಟದ ಕಾರ್ಮಿಕರ ಸಮಾವೇಶ ಹಾಗೂ ಗುರುತಿನ ಚೀಟಿ ವಿತರಣೆಯ ಕೆಲಸ ಇತ್ತೀಚೆಗೆ ನಡೆದಿದೆ. ಈ ಸಂದರ್ಭದಲ್ಲಿ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಂಘ ಬೈಂದೂರು ವಲಯದ ನೂತನ ಕಾರ್ಯಕಾರಿ ಸಮಿತಿಯನ್ನು ಸರ್ವಾನು ಮತದಿಂದ ಆಯ್ಕೆ ಮಾಡಲಾಯಿತು. ನೂತನ ಅದ್ಯಕ್ಷರಾಗಿ ಗಣೇಶ.ಸಿ.ತೊಂಡೆ ಮಕ್ಕಿ ಉಪಾಧ್ಯಕ್ಷರಾಗಿ ವೆಂಕಟೇಶ ಕೋಣಿ, ಗಣೇಶ ಮೋಗವೀರ ವಿದ್ಯಾನಗರ ಕಾರ್ಯದರ್ಶಿಯಾಗಿ ರೊನಾಲ್ಡ್ ಕ್ರಾಡ್ರಸ್ ಬಿಜೂರು, ರೊನಿ ನಜರತ್ ಪಡುವರಿ ಇವರನ್ನೊಳಗೊಂಡ 25 ಮಂದಿಯನ್ನು ಆಯ್ಕೆ ಮಾಡಲಾಯಿತು.

ಜನಶಕ್ತಿ ಕನ್ನಡ ವಾರಪತ್ರಿಕೆ

2008 - 09ರ ಬಜೆಟ್

ಯುಪಿಎ ಸರ್ಕಾರಕ್ಕೆ ಇರುವ ಕೊನೆಯ ಅವಕಾಶ

ಸಿಎಂಪಿ ಯಲ್ಲಿ ಭರವಸೆ ನೀಡಿದಂತೆ ಆರ್ಥಿಕ ಸುಧಾರಣೆಗಳ ಒತ್ತು ಕಾರ್ಪೊರೇಟ್‌ಗಳ ಲಾಭಗಳನ್ನು ಹೆಚ್ಚಿಸಲಷ್ಟೇ ಸೀಮಿತಗೊಳ್ಳದೆ ಜನಗಳ ಕಲ್ಯಾಣದತ್ತವೂ ಗಮನ ನೀಡುವುದು ಆಳುವ ವರ್ಗಗಳು ತಮ್ಮ ಸುತ್ತ ತಾವೇ ಹಾಕಿಕೊಂಡ ನವ-ಉದಾರವಾದಿ ಬೇಲಿಯಿಂದಾಗಿ ಸಾಧ್ಯವಾಗಲಿಲ್ಲ.ಇದೀಗ ಈ ವರ್ಷದ ಬಜೆಟ್ ಯುಪಿಎ ಸರಕಾರಕ್ಕೆ ತನ್ನ ದಿಕ್ಕು ಬದಲಿಸಲು ಕೊನೆಯ ಅವಕಾಶ.

ಫೆಬ್ರುವರಿ 25ರಂದು ಸಂಸತ್ತಿನ ಬಜೆಟ್ ಅಧಿವೇಶನವನ್ನು ಕರೆಯಲಾಗಿದೆ. ಅಂದು ರಾಷ್ಟ್ರಾಧ್ಯಕ್ಷರಾದ ಪ್ರತಿಭಾ ಪಾಟೀಲರವರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ತನ್ನ ಮೊದಲ ಭಾಷಣ ಮಾಡಲಿದ್ದಾರೆ. ಅವರು ತನ್ನ ಸರಕಾರದ ಆದ್ಯತೆಗಳ ಮೇಲೆ ಒತ್ತು ನೀಡುವುದಂತೂ ಖಂಡಿತ. ಇದಾದರೂ ಯುಪಿಎ ಸರಕಾರ ತನ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮ(ಸಿಎಂಪಿ)ದಲ್ಲಿ ನೀಡಿದ ಜನಪರ ವಚನಗಳನ್ನು ಈಡೇರಿಸುವಲ್ಲಿ ಇದುವರೆಗೆ ಪ್ರದರ್ಶಿಸಿದ ಹಿಂಜರಿಕೆಯನ್ನು ಬಿಟ್ಟು ಬಿಡುವಂತೆ ಮಾಡಬಹುದೇನೋ ಎಂಬ ನಿರೀಕ್ಷೆ ದೇಶದ ಪ್ರಜಾಪ್ರಭುತ್ವ ವಾದಿಗಳದ್ದು. ಅದೇ ರೀತಿ ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುವ ಬಗ್ಗೆ, ದೇಶದ ಸಾರ್ವಭೌಮತೆಯನ್ನು ರಕ್ಷಿಸುವ ಬಗ್ಗೆ ಎದ್ದಿರುವ ಸಂದೇಹಗಳು ದೂರವಾಗುತ್ತವೆ ಎಂಬ ನಿರೀಕ್ಷೆಯೂ ಇದೆ.

ಅದೇನೇ ಇರಲಿ, ಇದೀಗ ಯುಪಿಎ ಸರಕಾರಕ್ಕೆ ಕೊನೆಯ ಅವಕಾಶ, ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಂಡು ಸಿಎಂಪಿಯ ಜನಪರ ಭರವಸೆಗಳನ್ನು ಈಡೇರಿಸುವಲ್ಲಿ ಮುಂದಾಗುವುದು ಒಳಿತು. ಏಕೆಂದರೆ ಇದು ಯುಪಿಎ ಸರಕಾರದ ಐದನೆ ಮತ್ತು ಕೊನೆಯ ಬಜೆಟ್.

ಕೃಷಿ ಸಂಕಟ – 'ಸಾಲದ ಕ್ರಮ'

ಈ ಸರಿಪಡಿಕೆ ಕ್ರಮಗಳಲ್ಲಿ, ಮುಂದುವರಿಯುತ್ತಿರುವ ಕೃಷಿ ಸಂಕಟವನ್ನು ಎದುರಿಸಲು ತೀವ್ರಗಾಮೀ ಹೆಜ್ಜೆಗಳು ಬಹಳ ಮುಖ್ಯ. ಸಿಎಂಪಿ ಕೃಷಿ ಹೂಡಿಕೆಗಳನ್ನು ಗಮನಾರ್ಹವಾಗಿ ಹೆಚ್ಚಿಸುವುದಾಗಿ ಹೇಳಿತ್ತು. ಆದರೆ ನಿರೀಕ್ಷಿತ ಮಟ್ಟದವರೆಗೆ ಇದು ನಡೆದಿಲ್ಲ. ರೈತರು ಹತಾಶೆಯಿಂದ ಆತ್ಮಹತ್ಯೆಗಳಿಗೆ ಶರಣಾಗುವುದನ್ನು ತಪ್ಪಿಸಬೇಕಾದರೆ ಅವರನ್ನು ಲೇವಾದೇವಿಗಾರರಿಂದ ಮುಕ್ತಗೊಳಿಸಬೇಕು. ನಿಜ, ಯುಪಿಎ ಸರಕಾರ ಸಾಂಸ್ಥಿಕ ಸಾಲಗಳನ್ನು ಇಮ್ಮಡಿಗೊಳಿಸಿದೆ. ಆದರೆ ಈಗಲೂ ಮೂರನೆ ಎರಡರಷ್ಟು ರೈತರು ಕೃಷಿಸಾಲಕ್ಕೆ ಲೇವಾದೇವಿಗಾರರನ್ನೇ ಅವಲಂಬಿಸಬೇಕಾಗಿದೆ. ರೈತರ ಸಾಲಗಳ ಬಡ್ಡಿದರವನ್ನು ಇಳಿಸಬೇಕು ಎಂಬುದು ಇನ್ನೊಂದು ದೀರ್ಘ ಕಾಲದ ಬೇಡಿಕೆ. ನಿಜ, ಇಲ್ಲಿಯೂ ಯುಪಿಎ ಸರಕಾರ ಅದನ್ನು 11ಶೇ. ದಿಂದ 7ಶೇ. ಕ್ಕೆ ಇಳಿಸಿದೆ. ಆದರೆ ಅದು ಸಾಲದು ಎಂಬುದು ಸ್ಪಷ್ಟ. ರೈತರ ಆತ್ಮಹತ್ಯೆಗಳಿಗೆ ಸಾಲದ ಹೊರೆಯೇ ಮುಖ್ಯ ಕಾರಣ ಎಂಬ ಬಗ್ಗೆ ಸಂದೇಹವಿಲ್ಲ. ಆದ್ದರಿಂದ ಎಂ.ಎಸ್. ಸ್ವಾಮಿನಾಥನ್ ಆಯೋಗ ಶಿಫಾರಸು ಮಾಡಿರುವಂತೆ ರೈತರಿಗೆ ಬಡ್ಡಿದರವನ್ನು 4ಶೇ. ಕ್ಕೆ ಇಳಿಸಬೇಕು. ಒಟ್ಟಿನಲ್ಲಿ ಕನಿಷ್ಟ ಬಡ್ಡಿದರದಲ್ಲಿ ಕೃಷಿ ಸಾಲಪೂರೈಕೆ ಹೆಚ್ಚಿಸದಿದ್ದಲ್ಲಿ ಈ ಸಂಕಟ ಹೀಗೆಯೆ ಮುಂದುವರೆಯುತ್ತದೆ. ಆದ್ದರಿಂದ ಗ್ರಾಮೀಣ ಸಾಲ ವ್ಯವಸ್ಥೆಯನ್ನು ಪುನರ್ರಚಿಸಿ ತೀವ್ರವಾಗಿ ವಿಸ್ತರಿಸಬೇಕು. ದುರದೃಷ್ಟವಶಾತ್ ಯುಪಿಎ ಸರಕಾರ ವಿರುದ್ಧ ದಿಕ್ಕಿನಲ್ಲೆ ಸಾಗಿರುವಂತೆ ಕಾಣುತ್ತದೆ. ಇದನ್ನು ಸರಿಪಡಿಸಲೇ ಬೇಕು.



ಕನಿಷ್ಟ ಬೆಂಬಲ ಬೆಲೆ

ರೈತರಿಗೆ ಪರಿಹಾರ ನೀಡುವ ಇನ್ನೊಂದು ಕ್ರಮವೆಂದರೆ ಕನಿಷ್ಟ ಬೆಂಬಲ ಬೆಲೆಯನ್ನು ಹೆಚ್ಚಿಸುವುದು. ಸರಕಾರ ಆಮದಾದ ಗೋದಿಗೆ ಕ್ವಿಂಟಾಲಿಗೆ 1200 ರಿಂದ 1600 ರೂ. ತೆರುತ್ತಿರುವಾಗ ಪಂಜಾಬಿನ ರೈತನಿಗೆ ಕೇವಲ 850ರೂ. ಕೊಡುವುದರಲ್ಲಿ ಏನರ್ಥವಿದೆ ಎಂದು ಎಡಪಕ್ಷಗಳು ಪ್ರಶ್ನಿಸಿದ ಮೇಲೆ ಅದನ್ನು ಒಲ್ಲದೆ ಮನಸ್ಸಿನಿಂದ 1000ರೂ. ಗೇರಿಸಲಾಗಿದೆ. ಆದರೆ ಭತ್ತಕ್ಕೆ ಸರಿಯಾದ ಬೆಲೆಯನ್ನು ಕೊಡುವಲ್ಲಿ ಈಗಲೂ ಹಿಂಜರಿಕೆ ಕಾಣುತ್ತಿದೆ. ಕನಿಷ್ಟ ಬೆಂಬಲ ಬೆಲೆಗಳನ್ನು ಹೆಚ್ಚಿಸುವುದು ಹಾಗೂ ಇನ್ನೂ ಬಹಳಷ್ಟು ಕೃಷಿ ಉತ್ಪನ್ನಗಳಿಗೆ ಇದನ್ನು ವಿಸ್ತರಿಸುವುದು ಅತೀ ಅಗತ್ಯ.

ಕೃಷಿ ಸಂಕಟವನ್ನು ನಿವಾರಿಸುವುದು ಕೇವಲ ರೈತರನ್ನು ಕುರಿತ ಮಾನವೀಯ ಪ್ರಶ್ನೆಯಷ್ಟೇ ಅಲ್ಲ,



ಕೃಷಿ ಉತ್ಪಾದಕ ಶಕ್ತಿಗಳ ಸಾಮರ್ಥ್ಯದ ಪೂರ್ಣ ಪ್ರಯೋಜನ ಪಡೆದು ಭಾರತೀಯ ಕೃಷಿಯ ಪುನರುಜ್ಜೀವನ ಮಾಡಬೇಕಾದರೆ ಇದು ಅನಿವಾರ್ಯ. ಇದು ಸಾಧ್ಯವಾಗದಿದ್ದರೆ ಒಟ್ಟಾರೆ ಆರ್ಥಿಕದ ಬೆಳವಣಿಗೆಯೂ ಕುಂಠಿತಗೊಳ್ಳುತ್ತದೆ. ನಮ್ಮ ಆಹಾರಭದ್ರತೆಗೂ ಇದು ನಿಜವಾಗಿಯೂ ಬೆದರಿಕೆಯೊಡ್ಡುತ್ತದೆ.

ಉಪಯೋಗಿಸಿಕೊಳ್ಳಲಿಲ್ಲ

ಇಂತಹ ಉತ್ತಮ ಅವಕಾಶವನ್ನು ಕಳೆದ ವರ್ಷ ಉಪಯೋಗಿಸಿಕೊಳ್ಳಲಿಲ್ಲ. ಇದಕ್ಕೆ ಆಳುವ ವರ್ಗಗಳ ನವ-ಉದಾರವಾದಿ ಮನೋಧರ್ಮವೇ ಕಾರಣ ಎಂದು ಬೇರೆ ಹೇಳಬೇಕಾಗಿಲ್ಲ. ಹೆಚ್ಚಿದ ತೆರಿಗೆ ಆದಾಯವನ್ನು ಸಾರ್ವಜನಿಕ ಹೂಡಿಕೆಗೆ ಬಳಸುವ ಬದಲು ಕಾರ್ಪೊರೇಟ್ ವಲಯಕ್ಕೆ ಇನ್ನಷ್ಟು ತೆರಿಗೆ ರಿಯಾಯ್ತಿಗಳ ಬಹುಮಾನ ನೀಡಲಾಯಿತು. ಇದರಿಂದಾಗಿ ಕಾರ್ಪೊರೇಟ್ ವಲಯ ವಾಸ್ತವಿಕವಾಗಿ ತೆರುವ ತೆರಿಗೆ ಘೋಷಿತ ತೆರಿಗೆ ದರಗಳಿಗಿಂತ ಎಷ್ಟೋ ಕಡಿಮೆಯಾಗಿದೆ. ಇದರ ಫಲಿತಾಂಶಗಳು ಎರಡು: ಒಂದು, ಹೆಚ್ಚಿದ ಆದಾಯವನ್ನು ಬಡವರ ಕಲ್ಯಾಣಕ್ಕೆ ಬಳಸುವ ಬದಲು ಶ್ರೀಮಂತರಿಗೆ ಹಿಂದಿರುಗಿಸಲಾಯಿತು, ಹಾಗೂ, ಎರಡನೆಯದಾಗಿ, ಈ ರಿಯಾಯ್ತಿಗಳಿಂದಾಗಿ ಮುಂದೆ ಬರುವ ತೆರಿಗೆ ಆದಾಯವನ್ನೂ ಬಿಟ್ಟುಕೊಟ್ಟಂತಾಯಿತು. ಎರಡೂ ರೀತಿಯಲ್ಲಿ 'ಹೊಳೆಯುವ' ಭಾರತ ಮತ್ತು 'ನರಳುವ' ಭಾರತದ ನಡುವಿನ ಅಂತರ ಇನ್ನಷ್ಟು ಹೆಚ್ಚುವ ಭಯವಿದೆ.



ಮಾನಸಿಕ ಚೌಕಟ್ಟು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಕಾನೂನು ಮೂರು ವರ್ಷ ವಿಳಂಬಗೊಳ್ಳಲು, ಅರಣ್ಯ ಹಕ್ಕುಗಳ ಕಾನೂನಿನ ನಿಯಮಗಳ ಪ್ರಕಟಣೆಯಲ್ಲಿ ನಾಲ್ಕು ವರ್ಷಗಳ ವಿಳಂಬವಾಗಲು ಕೂಡಾ ಇದೇ ಮಾನಸಿಕ ಚೌಕಟ್ಟು ಕಾರಣ. ಸಿಎಂಪಿ ಯಲ್ಲಿ ಭರವಸೆ ನೀಡಿದಂತೆ ಆರ್ಥಿಕ ಸುಧಾರಣೆಗಳ ಒತ್ತು ಕಾರ್ಪೊರೇಟ್‌ಗಳ ಲಾಭಗಳನ್ನು ಹೆಚ್ಚಿಸಲಷ್ಟೇ ಸೀಮಿತಗೊಳ್ಳದೆ ಜನಗಳ ಕಲ್ಯಾಣದತ್ತವೂ ಗಮನ ನೀಡುವುದು ಆಳುವ ವರ್ಗಗಳು ತಮ್ಮ ಸುತ್ತ ತಾವೇ ಹಾಕಿಕೊಂಡ ಈ ಬೇಲಿಯಿಂದಾಗಿ ಸಾಧ್ಯವಾಗಲಿಲ್ಲ.

ಇದೀಗ ಈ ವರ್ಷದ ಬಜೆಟ್ ಯುಪಿಎ ಸರಕಾರಕ್ಕೆ ತನ್ನ ದಿಕ್ಕು ಬದಲಿಸಲು ಕೊನೆಯ ಅವಕಾಶ. ಎಡ ಪಕ್ಷಗಳು ಇದನ್ನು ಹೇಗೆ ಮಾಡಬಹುದು ಎಂಬ ಬಗ್ಗೆ ಈಗಾಗಲೇ ತಮ್ಮ ಪ್ರಸ್ತಾವಗಳನ್ನು ಸರಕಾರದ ಮುಂದಿಟ್ಟಿವೆ.

ಈ ಬಜೆಟಿನಿಂದ ಇನ್ನೊಂದು ಮುಖ್ಯ ನಿರೀಕ್ಷೆಯೆಂದರೆ ಅದು ಈಗ ನಿರಂತರವಾಗಿ ಕಾಡುತ್ತಿರುವ ಬೆಲೆಯೇರಿಕೆಯಿಂದ ಪರಿಹಾರ ನೀಡುತ್ತದೆ ಎಂಬುದು. ಇದಕ್ಕೆ ಅದು ಎಡಪಕ್ಷಗಳು ಸೂಚಿಸಿರುವಂತೆ ಎರಡು ಕ್ರಮಗಳನ್ನು ಕೈಗೊಳ್ಳಬೇಕು-ಒಂದು, ಎಲ್ಲಾ ಜೀವನಾವಶ್ಯಕ ಸರಕುಗಳಲ್ಲಿ ಜೂಜುಕೋರ ಮುಂಗಡ/ಭವಿಷ್ಯದ ಮಾರುಕಟ್ಟೆ ವ್ಯವಹಾರಗಳನ್ನು ನಿಷೇಧಿಸುವುದು ಹಾಗೂ ಎರಡು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಅಂದರೆ ಪಡಿತರ ವ್ಯವಸ್ಥೆಯನ್ನು ಬಲಪಡಿಸಿ ಜೀವನಾವಶ್ಯಕ ಸರಕುಗಳನ್ನು ಇದರ ಮೂಲಕ ಒದಗಿಸುವುದು.

ಸರಕಾರ ಈ ಎರಡೂ ಕ್ರಮಗಳನ್ನು ಕೈಗೊಳ್ಳಲು ನಿರಾಕರಿಸುತ್ತಿದೆ. ಸತತ ಒತ್ತಡಗಳಿಂದಾಗಿ ಅಕ್ಕಿ, ಗೋಧಿ ಮತ್ತು ಬೇಳೆಕಾಳುಗಳನ್ನು ಜೂಜುಕೋರ ಮಾರುಕಟ್ಟೆಗಳಿಂದ ಹೊರಗಿಡಲಾಗಿದೆ. ಇದು ಸಾಲದು. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿಯಂತೂ ವಿರುದ್ಧ ದಿಕ್ಕಿನಲ್ಲಿ ಅದನ್ನು ಕಡಿತ ಮಾಡುವ ದಿಕಿನಲ್ಲಿ ಸಾಗಿದೆ, ಇದು ಈ ವ್ಯವಸ್ಥೆಯನ್ನೇ ಕಳಚಿ ಹಾಕುವ ಹುನ್ನಾರ. ಇದು ಆಹಾರ ಭದ್ರತೆಗೆ ಸಂಚಕಾರ ತಂದು ಮತ್ತಷ್ಟು ಬೆಲೆಯೇರಿಕೆಗೆ ಕಾರಣವಾಗುತ್ತದೆ.

ಈ ಪ್ರವೃತ್ತಿಯನ್ನು ಬದಲಿಸಲೇಬೇಕು. ಇಲ್ಲವಾದರೆ ಯುಪಿಎ ಸರಕಾರ ಜನಗಳ ಹೆಚ್ಚು ವಿಶಾಲವಾದ, ಬಲಿಷ್ಟವಾದ ಹೋರಾಟಗಳನ್ನು ಎದುರಿಸಲು ಸಿದ್ಧವಾಗಬೇಕಾಗುತ್ತದೆ. ○

ಸಂಪನ್ಮೂಲಗಳಿಲ್ಲ ಎಂಬ ಸಬೂಬು ಸಾಧ್ಯವಿಲ್ಲ

ಸಿಎಂಪಿ ವಿವಿಧ ಸಾಮಾಜಿಕ ವಲಯಗಳಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸುವ ಭರವಸೆ ನೀಡಿತ್ತು. ಶಿಕ್ಷಣಕ್ಕೆ ಖರ್ಚು ಜಿಡಿಪಿಯ 6ಶೇ. ಕ್ಕೆ ಹೆಚ್ಚಿಸಬೇಕು, ಸಾರ್ವಜನಿಕ ಆರೋಗ್ಯದ ಖರ್ಚನ್ನು ಕನಿಷ್ಟ 3ಶೇ. ಕ್ಕೆ ಹೆಚ್ಚಿಸಬೇಕು ಎಂದು ಅದು ಹೇಳಿತ್ತು. ಇವೆರಡೂ ಆಗಿಲ್ಲ.

ಇದು ನಿಜಕ್ಕೂ ದುರದೃಷ್ಟಕರ. ಏಕೆಂದರೆ ಈಗ ಸಂಪನ್ಮೂಲಗಳಿಲ್ಲ ಎಂಬ ಸಬೂಬು ಕೊಡುವಂತಿಲ್ಲ. ಕಳೆದ ನಾಲ್ಕು ಬಜೆಟುಗಳಲ್ಲಿ ಸರಾಸರಿಯಾಗಿ ಸರಕಾರದ ರೆವಿನ್ಯೂ ಆದಾಯ ಗುರಿಗಿಂತ 20ಶೇ. ಹೆಚ್ಚು ಸಂಗ್ರಹವಾಗುತ್ತಿದೆ. ಈ ವರ್ಷವಂತೂ 40ಶೇ. ದಾಟುವ ನಿರೀಕ್ಷೆಯಿದೆ. ಯುಪಿಎ ಸರಕಾರದ ಬಳಿ ಸಾರ್ವಜನಿಕ ಹೂಡಿಕೆಯನ್ನು ಬೃಹತ್ತಾಗಿ ವಿಸ್ತರಿಸಲು ಸಂಪನ್ಮೂಲಗಳು ಇದ್ದವು. ಇದರಿಂದ ನಮ್ಮ ಬಹುಪಾಲು ಜನಗಳಿಗೆ ಉದ್ಯೋಗ ನೀಡಿ ಪರಿಹಾರ ಒದಗಿಸಬಹುದಾಗಿತ್ತು, ಸಾರ್ವಜನಿಕ ಸೇವೆಗಳನ್ನು ವಿಸ್ತರಿಸಬಹುದಿತ್ತು. ಇದು ಹಲವು ವಿಧಗಳಲ್ಲಿ ಆರ್ಥಿಕವನ್ನು ವಿಸ್ತರಿಸಿ ಉನ್ನತ ಬೆಳವಣಿಗೆ ತರಬಹುದಿತ್ತು. ಹೀಗಾಗಿದ್ದರೆ ಒಂದೆಡೆ ನಮ್ಮ ಆರ್ಥಿಕ ಮತ್ತು ಸಾಮಾಜಿಕ ಮೂಲರಚನೆ ವಿಸ್ತರಿಸುತ್ತಿತ್ತು, ಮತ್ತೊಂದೆಡೆ ಒಟ್ಟು ಆಂತರಿಕ ಬೇಡಿಕೆಯೂ ವಿಸ್ತಾರಗೊಂಡು ಉತ್ಪಾದನಾ ವಲಯಕ್ಕೆ ಬಹಳ ಅಗತ್ಯವಾಗಿರುವ ಒತ್ತು ಸಿಗುತ್ತಿತ್ತು. ಈ ವಲಯದಲ್ಲಿ ಬೆಳವಣಿಗೆ ಕುಂಠಿತಗೊಳ್ಳುತ್ತಿದೆ ಎಂಬುದನ್ನು ಗಮನಿಸಬೇಕು.

ಕಾವಿ ಸಂವಿಧಾನ

ಹಲವರಿಗೆ ಸಹಜವೇ ಭೂಮಿಯಲಿ ನೋವು
ಬಹುಬೇಗ ಸ್ವರ್ಗಕ್ಕೆ ಕಳಿಸುವೆಂದು ನಾವು
ಕೆಲವರಿಗೆ ಇಲ್ಲಿಯೇ ಸ್ವರ್ಗ ಸೋಪಾನ
ಕಾವಿ ಪರಿವಾರದ್ದು ಈ ಸಂವಿಧಾನ

– ಏಡಂಬಾರಿ

ಕಮರುತ್ತಿರುವ ಹಾಸ್ಟೆಲ್ ವಿದ್ಯಾರ್ಥಿಗಳ ಭವಿಷ್ಯ

ಮನೆ, ತಂದೆ ತಾಯಿಗಳ ಪ್ರೀತಿಯಿಂದ 'ದೂರವಾಗಿ' ಹಾಸ್ಟೆಲ್‌ಗಳಲ್ಲಿ ಕಲಿಯಬೇಕಾದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಹೇಗಿರಬೇಕು? ಈಗಿನ ಹಾಸ್ಟೆಲ್‌ಗಳು ಆದರಲ್ಲೂ ಪರಿಶಿಷ್ಟ ಜಾತಿ, ಪಂಗಡಗಳ ವಿದ್ಯಾರ್ಥಿಗಳ ಹಾಸ್ಟೆಲ್‌ಗಳು ಹೇಗಿವೆ?

ಬಿ.ರಾಜಶೇಖರಮೂರ್ತಿ

ಹಸಿವಿನಿಂದ ಸಾಯೋರೋ, ಮಲ-ಮೂತ್ರ ಹೊರ್ರೋರೂ, ದೇಹವನ್ನೇ ಯಂತ್ರಗಳ ಮಾಡಿ ದುಡಿಯುವ ಜನರು. ಭೂ ಮಾಲಕರ ಕಾಲಡಿಯಲ್ಲಿ ನಡುಗೋರೂ, ನೋವಿನಿಂದ ನರಳೋರೂ, ನಗುವನ್ನೇ ಮರ್ರೋರೂ, ನೋವುಂಡು ನಗಿಸೋರೂ, ಎದೆ ಎತ್ತಿ ನಡೆಯದವರು ನಮ್ಮಂತೆ ನಮ್ಮ ಮಕ್ಕಳು ತಲೆ ತಗ್ಗಿಸಬಾರದು, ಮಲ-ಮೂತ್ರ ತಿನ್ನಿಸಿಕೊಳ್ಳಬಾರದು, ಜೀವಂತವಾಗಿ ಸುಟ್ಟುಹೋಗಬಾರದು, ನಮ್ಮ ಅಕ್ಕ-ತಂಗಿ, ತಾಯಿ, ಹೆಂಡತಿಯರಂತೆ ಅತ್ಯಾಚಾರಕ್ಕೆ ಮಾನಭಂಗಕ್ಕೆ, ಬೆತ್ತಲೆಗೆ ಒಳಗಾಗಬಾರದೆಂದೂ ಹಾತೊರೆಯುತ್ತಿರುವ ಧ್ವನಿಗಳನ್ನಡಗಿಸಲು ನಿರಂತರವಾಗಿ ಪಟ್ಟಭದ್ರರು ಷ್ಯಡ್ಯಂತ್ರಗಳನ್ನು ರೂಪಿಸುತ್ತಿತ್ತಾರೆಂಬುದಕ್ಕೆ ದಲಿತ-ಹಿಂದುಳಿದ ಹಾಸ್ಟೆಲ್‌ಗಳ ಪರಿ ನೋಡಿದರೆ ಗೊತ್ತಾಗುತ್ತದೆ.


ಚಿವುಟುವ ನೀತಿ

ದೇಶ ಕಟ್ಟುವ -ಬೆಳೆಸುವ ಕಂದಮ್ಮಗಳ ಭವಿಷ್ಯವನ್ನು ಮೊಳಕೆಯಲ್ಲೇ ಚಿವುಟಿ ಹಾಕಲು ಆಳುವ ಸರ್ಕಾರಗಳು ತೀರ್ಮಾನಿಸಿರುವಂತಿವೆ. ಹಸಿವು ಬಾಯಾರಿಕೆಯಲ್ಲಿ ಬಳಲುವ ನಾಲಿಗೆಗಳಿಗೆ ಕೊಳಚೆ ನೀರಿನ ಹನಿಗಳನ್ನು ಚಿಮುಕಿಸುತ್ತಿವೆ. ಈ ಕೊಳಚೆ ನೀರಿನ ಹನಿಗಳಿಂದ ಬಾಯಾರಿಕೆ ಜೊತೆಗೆ ಇಡೀ ದೇಹ-ಜೀವಗಳೇ ರೋಗಗ್ರಸ್ತ ವಾಗುತ್ತಿವೆ. ರೋಗರುಜಿನುಗಳಿಂದ ನರಳುತ್ತಿವೆ. ಇಂತಹ ದುಸ್ಥಿತಿಯನ್ನು ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗ ಇಲಾಖೆಗಳ ಅಡಿಯಲ್ಲಿರುವ ಶಾಲಾ-ಕಾಲೇಜು ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಆಳುವ ಸರ್ಕಾರಗಳು ಒದಗಿಸಿವೆ. ಶತ ಶತಮಾನಗಳಿಂದ -ಅನ್ನ-ನೀರು- ನೆರಳಿನಿಂದ ಬಹುದೂರ ಇರಿಸಿ, ಉಳ್ಳವರ ಸಿರಿತನಕ್ಕೆ ಏಣಿಗಳಾಗಿ ದುಡಿಯುವ ಜನತೆಗೆ ಶಿಕ್ಷಣ ನೀಡುವುದುಂಟೇ? ಸ್ವಾತಂತ್ರ್ಯಗಳಿಸಿ 60 ವರ್ಷ ಗತಿಸಿದರೂ ಭೂಮಾಲಿಕ- ಬಂಡವಾಳಶಾಹಿ-ಪಟ್ಟಭದ್ರರು ವ್ಯವಸ್ಥಿತವಾಗಿ ಸಾಮ್ರಾಜ್ಯಶಾಹಿಗಳ ಜೊತೆಗೂಡಿ ಬೀಸಿರುವ ಬಲೆಯಲ್ಲಿ ಸಿಲುಕಿ ನರಳುವ ಜನತೆಗೆ ಇನ್ನಷ್ಟು ವಂಚಿಸಲೆಂದೇ ರೂಪಿಸಿರುವ ಯೋಜನೆಗಳಲ್ಲಿ ಇದೂ ಒಂದಾಗಿರಬಹುದೇ? ದಲಿತ-ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಬೆಂಬಲಕ್ಕೆಂದು ಹಾಸ್ಟೆಲ್‌ಗಳ ಪರಿಕಲ್ಪನೆ ಹೊರಬಿದ್ದಿತ್ತು. ದಿವಂಗತ ದೇವರಾಜ ಅರಸು ಮುಖ್ಯಮಂತ್ರಿ ಕಾಲದಲ್ಲಿ ಸಣ್ಣ ಆಶಾಕಿರಣವೂ ಮೂಡಿತ್ತು. ಹಾಗಂತ ದಮನಿತರನ್ನು ಮೇಲೆತ್ತಿ ಪಟ್ಟಭದ್ರರ ಸಮಾನವಾಗಿ ದಲಿತ-ಹಿಂದುಳಿದವರನ್ನು ನಿಲ್ಲಿಸಲು ಸಾಧ್ಯವೇ? ಸಂವಿಧಾನದ ಆಶಯ ಬೇರೆ ಇದೆ. ಪಟ್ಟಭದ್ರರ ಮನಸೊಪ್ಪದಿದ್ದರೂ ದೇಶ ಒಪ್ಪಿದೆ. ಮೀಸಲಾತಿ ಇದೆ, ಹಲವು ಯೋಜನೆಗಳಿವೆ ನಿಜವಾಗಿ ಅನುಷ್ಠಾನಕ್ಕೆ ತರದಿದ್ದರೂ ಅನುಸ್ಠಾನದಲ್ಲಿವೆ ಎಂಬುದನ್ನು ತೋರಬೇಡವೇ? ಹೀಗಾಗಿಯೇ ಹಸಿದ ಹೊಟ್ಟೆಗೆ ಊಟದ ವಾಸನೆ ತೋರಿಸಿ ಹೊಟ್ಟೆ ತುಂಬಿಸಿಕೊಳ್ಳಬೇಕು ಇಲ್ಲವೇ ಹಸಿವಿನಿಂದಲೇ ಸಾಯಬೇಕು. ಇಷ್ಟೊಂದು ಅನುಕೂಲ ದಲಿತರಿಗೆ ನೀಡುತ್ತಿರುವುದ ರಿಂದಲೇ ದೇಶ ಹಿಂದುಳಿದಿರುವುದು, ಪ್ರತಿಭಾವಂತರಿಗೆ ಅನ್ಯಾಯವಾಗಿರುವುದು; ಆದ್ದರಿಂದಲೇ ಊಟದ ವಾಸನೆಯೂ ತೋರಿಸದಂತಹ ಸ್ಥಿತಿಗೆ ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳ ಭವಿಷ್ಯವನ್ನು ಚಿವುಟಿ ಹಾಕುತ್ತಿರುವುದು.

ಹೈಸ್ಕೂಲ್ ಹಾಸ್ಟೆಲ್‌ಗಳು ವಿನಾಶದತ್ತ...

ಸಮಾಜ ಕಲ್ಯಾಣ ಹಿಂದುಳಿದ ವರ್ಗ ಇಲಾಖೆಗಳಲ್ಲಿ ಒಟ್ಟು 6000 ಸಾವಿರಕ್ಕಿಂತ ಹೆಚ್ಚು ಹಾಸ್ಟೆಲ್‌ಗಳಿದ್ದು ಇವುಗಳಲ್ಲಿ ಮೆಟ್ರಿಕ್ ಪೂರ್ವದ ಹಾಸ್ಟೆಲ್‌ಗಳೇ ಹೆಚ್ಚು. ಈ ಮೆಟ್ರಿಕ್ ಪೂರ್ವದ ಹಾಸ್ಟೆಲ್‌ಗಳ ವಿದ್ಯಾರ್ಥಿಗಳು ನೀರಿನಿಂದ ಹೊರ ತೆಗೆದ ಮೀನಿನ ಸ್ಥಿತಿಯಂತೆ ಬದುಕುತ್ತಿದ್ದಾರೆ. ಜಾಗತೀಕರಣದ ಬೇಗೆಯಲ್ಲಿ ಬೆಂದು ಬೂದಿಯಾಗುತ್ತಿರುವ ದಲಿತರಲ್ಲಿ ಅಳಿದುಳಿದವರು ಶಿಕ್ಷಣಕ್ಕೆಂದು ಹಾಸ್ಟೆಲ್‌ಗಳಿಗೆ ಅವಲಂಬಿತರಾದರೆ ಅವರಿಗೆ ಶಿಕ್ಷೆ ಎಂಬಂತೆ ಇಂತಹ ಅವ್ಯವಸ್ಥೆಗೆ ತಳ್ಳಲಾಗುತ್ತದೆ.

ಸಮರ್ಪಕ ಕಟ್ಟಡ, ಕೊಠಡಿ, ವಿದ್ಯುತ್ ಬೆಳಕು, ಸ್ವಚ್ಛ ಕುಡಿಯುವ ನೀರು, ಪೌಷ್ಠಿಕ ಆಹಾರ, ಸ್ವಚ್ಛತೆ, ಶೌಚಾಲಯಗಳಂತಹ ಕನಿಷ್ಠ ಮಟ್ಟದ ಸೌಲಭ್ಯಗಳೇ ಇಲ್ಲದಿರುವಾಗ ಹಾಸ್ಟೆಲ್‌ಗಳಲ್ಲಿ ಶೈಕ್ಷಣಿಕ ವಾತಾವರಣ ನಿರ್ಮಿಸಲು ಗ್ರಂಥಾಲಯ, ದಿನ ಪತ್ರಿಕೆಗಳು, ಡೈನಿಂಗ್ ಹಾಲ್, ಟಿ.ವಿ., ಕ್ರೀಡಾ ಸಾಮಗ್ರಿಗಳು ಎಲ್ಲಿಂದ ಬರಬೇಕು? ಒಂದಲ್ಲಾ ಒಂದು ರೀತಿಯಲ್ಲಿ ಅನಾರೋಗ್ಯದಿಂದ ಬಳಲುವ ಮಕ್ಕಳು ಅಧಿಕಾರಿಗಳ, ವಾರ್ಡನ್‌ಗಳ ಎದುರು ನಿಲ್ಲುವ ಶಕ್ತಿಯಾದರು ಎಲ್ಲಿಂದ ಬರಬೇಕು. ಅಸಮಾನತೆಯ ಬೇಗೆಯಲ್ಲಿ ಯಾರಾದರೂ ಸೊಲ್ಲನ್ನು ಎತ್ತಿದ್ದರೆ ಮುಗಿಯಿತು. "ನಿರ್ಗತಿಕರು ನೀವು, ತಿನ್ನಲು ಎಲ್ಲಿಯೂ ಗತಿ ಇಲ್ಲದೆ ಇಲ್ಲಿಗೆ ಬಂದಿದ್ದೀರಿ, ಹಾಕಿದ್ದನ್ನು ತಿನ್ನಿ ನಾಯಿ ಮುಂಡೇವಾ, ಬಿಟ್ಟಿ ಕೂಳು ಇಷ್ಟಾದರೂ ಸಿಗುತ್ತದೆ, ನೀವೂ ಓದಿ ಉದ್ದಾರ ಮಾಡೋದು ಅಷ್ಟರಲ್ಲೇ ಇದೆ" ಎಂಬ ಬೈಗುಳ. ಹೀಗಾಗಿ ಹಾಕಿದ್ದನ್ನು ತಿನಕೊಂಡು ಗುಬ್ಬಚ್ಚಿಗಳಂತೆ ಮುದುಡಿಕೊಂಡು ಕಾಲಹರಣ ಮಾಡೋದೇ ಆಗಿದೆ. ಮಾಧ್ಯಮಿಕ-ಹೈಸ್ಕೂಲ್ ಹಾಸ್ಟೆಲ್ ವಿದ್ಯಾರ್ಥಿಗಳ ಪರಿ ಇದು.


ಸರ್ಕಾರಿ ಜಾಹಿರಾತಿನಲ್ಲಿ ಹಾಸ್ಟೆಲ್‌ಗಳ ಸೊಗಸು ಇದು ಕಾಗದದ ಮೇಲೆ ಮಾತ್ರ

ನಿಬ್ಬೆರಗು!!

ಹಾಸ್ಟೆಲ್‌ಗಳಿಗೆ ಭೇಟಿ ಕೊಟ್ಟು, ಊಟ ಹೇಗಿದೆ? ಹೊಟ್ಟೆ ತುಂಬಾ ಸಿಗುತ್ತಾ? ಕುಡಿಯುವ ನೀರಿದೆಯಾ? ಶೌಚಾಲಯ ಹೇಗಿದೆ? ನಿಮಗೆ ಮೊಟ್ಟೆ ಕೊಡುತ್ತಾರಾ?, ಚಿಕನ್-ಮಟನ್, ಬಾಳೆಹಣ್ಣು? ಸ್ನಾನಕ್ಕೆ ಬಿಸಿ ನೀರು ಇದೆಯಾ? ಟಿ.ವಿ. ಉಂಟಾ?, ದಿನ ಪತ್ರಿಕೆಗಳು, ಲೈಬ್ರರಿ ಇದೆಯಾ? ಟ್ಯೂಷನ್ ಮಾಡ್ಲಿಕ್ಕೆ ಶಿಕ್ಷಕರು ಬರುತ್ತಾರಾ? ಎಂಬ ಪ್ರಶ್ನೆಗಳಿಗೆ ಮೆಟ್ರಿಕ್ ಪೂರ್ವದ ವಿದ್ಯಾರ್ಥಿನಿ ವಿದ್ಯಾರ್ಥಿನಿಯರು ನಿಬ್ಬೆರಗಾಗುತ್ತಾರೆ. "ಇದೇನು ಇವೆಲ್ಲಾ ಸೌಲಭ್ಯಗಳು ನಮಗೆ ಉಂಟಾ"? ಎಂಬ ಅವರ ಪ್ರಶ್ನಾರ್ಥಕ ದೃಷ್ಟಿಯಲ್ಲಿಯೇ ನಮಗೆ ಇವರು ಎಂಥಾ ಪರಿಸ್ಥಿತಿಯಲ್ಲಿದ್ದಾರೆಂಬ ಬಗ್ಗೆ ಉತ್ತರ ಸಿಗುತ್ತದೆ. ಹಾಗೆಯೇ ವಾರ್ಡನ್ ಹೇಗಿದ್ದಾರೆ? ಅಡುಗೆಯವರು ನಿಮ್ಮನ್ನು ಹೇಗೆ ನೋಡಿಕೊಳ್ಳುತ್ತಾರೆಂದು ಮರು ಪ್ರಶ್ನೆ ಹಾಕಿದರೆ ಅವರ ಮೌನ ವೇದನೆಯೇ ಎಲ್ಲಾವನ್ನು ಹೇಳುತ್ತದೆ. ಹೆತ್ತಮ್ಮ ಅಪ್ಪನನ್ನು ಬಿಟ್ಟು ದೂರದ ಊರಿನಿಂದ ಜೀವನದ ಆಸರೆಯಾದೀತೆಂಬ ಆಸೆಯಿಂದ ಹಾಸ್ಟೆಲ್‌ಗೆ ಧಾವಿಸಿ ಬರುವವರಿಗೆ ಅಧಿಕಾರಿಗಳು, ವಾರ್ಡನ್-ಅಡುಗೆಯವರು ಪೋಷಕ ರಾಗುವ ಬದಲು ರಾಕ್ಷಸರಾಗಿ ಹಿಂಸಿಸುತ್ತಿರುತ್ತಾರೆ. ಲೈಂಗಿಕ ಕಿರುಕುಳ ಕೊಡುತ್ತಾರೆ, ಇಲ್ಲವೇ ಪ್ರೇರೇಪಿಸುತ್ತಾರೆ. ಇಂತಹ ಅನೇಕ ದುಃಖ ದುಮ್ಮಾನಗಳನ್ನು ಹರಿಯಬಿಡುತ್ತಾರೆ. ಏನೂ ಅರಿಯದ ಮಾಧ್ಯಮಿಕ-ಹೈಸ್ಕೂಲ್‌ನ ಹಾಸ್ಟೆಲ್ ವಿದ್ಯಾರ್ಥಿಗಳು. ಈ ವಿದ್ಯಾರ್ಥಿಗಳಿಗೆ ತಿಂಗಳಿಗೆ ಕೇವಲ ರೂ.400 ರೂಪಾಯಿಯೇ. ರಾಕ್ಷಸರ ಕೈ ಬಾಯಿ ತಪ್ಪಿಸಿ ವಿದ್ಯಾರ್ಥಿ ಹೊಟ್ಟೆ ಸೇರುವಾಗ ಅದು ಒಂದು ತುತ್ತಿಗೂ ಸಾಲುವುದಿಲ್ಲ. ಅಪರಾಧ, ಕೊಲೆ, ಸುಲಿಗೆ ಮಾಡಿ ಜೈಲಿನಲ್ಲಿರುವ ಕೈದಿಗಳಿಗೆ ದಿನಕ್ಕೆ 80 ರೂ. ಖರ್ಚು ಮಾಡುತ್ತದೆ ಆಳುವ ಸರ್ಕಾರ. ಭವಿಷ್ಯದ ಬುತ್ತಿ ಹೊತ್ತ ವಿದ್ಯಾರ್ಥಿಗಳಿಗೆ ದಿನಕ್ಕೆ ರೂ.12-15 ರಷ್ಟು ಊಟಕ್ಕೆ ಮೀಸಲಿಟ್ಟಿದೆ. ಇದೊಂದೇ ಸಾಲದೆ ದಲಿತ ವಿದ್ಯಾರ್ಥಿ ಸಮುದಾಯದ ಬಗ್ಗೆ ಸರ್ಕಾರಕ್ಕೆ ರಾಜಕೀಯ ಪಕ್ಷಗಳಿಗೆ, ಅಧಿಕಾರಿಶಾಹಿಗಳಿಗೆ ಇರುವ ಕಾಳಜಿ ತೋರಿಸಲು?

ಕಾಲೇಜ್ ಹಾಸ್ಟೆಲ್‌ಗಳು ಜಾತಿವಾದಿಗಳ ಅಡ್ಡೆಗಳು

ಬೆಂಗಳೂರು -ಕೋಲಾರ-ಮೈಸೂರು-ಗುಲ್ಬರ್ಗಾ-ದಾವಣಗೆರೆ ಮುಂತಾದ ಜಿಲ್ಲೆಗಳಲ್ಲಿ ಪದವಿ ಹಾಸ್ಟೆಲ್‌ಗಳೆಂದರೆ ಸರ್ಕಾರಗಳೇ ಬೆಚ್ಚಿ ಬೀಳುತ್ತಿದ್ದ ಕಾಲವೊಂದಿತ್ತು. 'ಇಕ್ರಲಾ ಒದಿರ್ಲಾ' ಎಂಬ ಧ್ವನಿ ರಾಜ್ಯಾದ್ಯಂತ ಮೊಳಗಿಸಲು ಇವು ಮುಂಚೂಣಿಯಲ್ಲಿದ್ದವು. ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದಾಗ, ವೀರಪ್ಪಮೊಯ್ಲಿ ಅಧಿಕಾರದಲ್ಲಿದ್ದಾಗ ಹಾಸ್ಟೆಲ್ ವಿದ್ಯಾರ್ಥಿಗಳ


ಹಾ[illegible] ಸ[illegible]ಸ್ಯೆಗಳ ವಿರುದ್ಧ ಪ್ರತಿಭಟ[illegible]

ಬೇಡಿಕೆಗಳಿಗೆ ಸ್ವಲ್ಪವಾದರೂ ಸ್ಪಂದನೆಯೂ ಇರುತ್ತಿತ್ತು. ಅಷ್ಟೇ ಅಲ್ಲ ಇವು ಅಸಮಾನತೆಯ ಸುಳಿಯಲ್ಲಿ ಅಸಮಾನತೆಯ ಹಿಂಸೆಗಳಲ್ಲಿ ವಿಲಿ-ವಿಲಿ ಒದ್ದಾಡುವ ತಮ್ಮ ಜನಗಳ ಬಿಡುಗಡೆಗಾಗಿ ಹಾತೊರೆಯುವ ಆಶಾಕಿರಣಗಳಿಗೆ ಶಕ್ತಿ ತುಂಬುವ ಕೇಂದ್ರಗಳಾಗಿದ್ದವು. ಕಾಲೇಜ್ ಹಾಸ್ಟೆಲ್‌ಗಳು, ಜನ ಚಳುವಳಿ ರೂಪಿಸುವ ಕೇಂದ್ರಗಳಾಗಿ ಮಾರ್ಪಟ್ಟಿದ್ದವು. ಅವಕಾಶ ವಂಚಿತರಿಗೆ ಉನ್ನತ ಶಿಕ್ಷಣದ ಮೆಟ್ಟಲೇರಲು ಸಹಕಾರಿಯಾಗಿದ್ದವು.

ಪುರೋಹಿತಶಾಹಿ-ಮೂಲಭೂತವಾದಿ

ರಾಮಕೃಷ್ಣ ಹೆಗಡೆಯವರ ಸರ್ಕಾರ ಇದನ್ನು ಸಹಿಸದಾಯಿತು. ಜೊತೆಗೆ 1991-1992 ರಲ್ಲಿ ಹೊಸ ಆರ್ಥಿಕ ನೀತಿಗಳನ್ನು ಜಾರಿಗೆ ತಂದು ದಲಿತ ಸಮುದಾಯಕ್ಕೆ ಸಿಗುತ್ತಿದ್ದ ಸೌಲಭ್ಯಗಳಿಂದ ವಂಚಿಸಲಾಯಿತು. ಕೇಂದ್ರ ಸರ್ಕಾರದ ನೆರವನ್ನು ರಾಜ್ಯದ ದಲಿತ ಸಮುದಾಯಕ್ಕೆ ಸಿಗದಂತೆ ನೋಡಿಕೊಂಡು ಹಿಂದಕ್ಕೆ ಕಳಿಸಿದ್ದ ಕೀರ್ತಿ ರಾಮಕೃಷ್ಣ ಹೆಗಡೆ ಹಾಗೂ ಮಾಜಿ ಪ್ರಧಾನಿ ದೇವೇಗೌಡರಿಗೆ ಸಲ್ಲುತ್ತದೆ.

ಪುಟ 12 ಕ್ಕೆ

ಶೇ.60 ಅಂಕಗಳಿಸಿದರೆ ಮಾತ್ರ ವಿದ್ಯಾರ್ಥಿ ವೇತನ, ಯುಪಿಎ ಸರ್ಕಾರ ಆದೇಶ

ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತದ ಸಂಪತ್ತನ್ನು ಹರಾಜು ಹಾಕಲು ಅಂಕಿತ ಹಾಡಿದ್ದ ಪ್ರಧಾನಿ ಮನಮೋಹನ್‌ಸಿಂಗರವರ ಸರ್ಕಾರ ದಲಿತರಿಗೆ ಮಹತ್ವದ ಕೊಡುಗೆ ನೀಡಿದೆ. ಮುಂಬರುವ ಶೈಕ್ಷಣಿಕ ವರ್ಷದಿಂದ ಪರಿಶಿಷ್ಟ ಜಾತಿ-ಪಂಗಡದ ವಿದ್ಯಾರ್ಥಿಗಳಲ್ಲಿ ಶೇ.60 ಅಂಕಗಳಿದ್ದವರಿಗೆ ಮಾತ್ರ ಕೇಂದ್ರ ಸರ್ಕಾರದ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಲಿದೆಯಂತೆ! ಈ ಆದೇಶದಿಂದ ಹಲವರು ಹಿರಿ ಹಿರಿ ಹಿಗ್ಗಿರಬಹುದು. ಯಾಕೆಂದರೆ ಎಲ್ಲಾ ದಲಿತರಿಗೆಲ್ಲಿ ಶೇ.60 ರಷ್ಟು ಅಂಕಗಳಿಸಲು ಸಾಧ್ಯ? ಇವರು ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಕನಿಷ್ಠ ಸೌಕರ್ಯಗಳಿಲ್ಲದ, ಗುಣಮಟ್ಟವಿಲ್ಲದ ಶಿಕ್ಷಣ ಪಡೆಯುತ್ತಿದ್ದಾರೆ. ಹೀಗಾಗಿ ಇನ್ನು ಮುಂದೆ ದಲಿತ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿ ವೇತನ ನಿಷಿದ್ಧ ಎಂದೇ ಅರ್ಥ.

ಮೀಸಲಾತಿಯಿಂದ ಗೆದ್ದು ಗದ್ದುಗೆ ಏರಿದ್ದ ದಲಿತ ಮಹನೀಯ ನಾಯಕರೇ, ಅಂಬೇಡ್ಕರ್ ಫೋಟೋ ಹಾಕಿಕೊಂಡು ಮೆರೆಸುವ ಸಂಘ ನಾಯಕರೇ, ದಲಿತರ ಪರ ನಾವೆಂದು ವಂಚಿಸಿರುವ ಬಂಡವಾಳಶಾಹಿ ಭೂ ಮಾಲಕ ಪಕ್ಷಗಳೇ ಕಿವಿ, ಕಣ್ಣು ಜ್ಞಾನವಿಲ್ಲವೇ ನಿಮಗೆ ಎಂದು ಕೇಳಿದರೆ ತಪ್ಪಾದೀತು. ಕಿವಿ-ಕಣ್ಣು-ಜ್ಞಾನವಿದ್ದರೂ ಇಂತಹ ನೀತಿಗಳ ವಿರುದ್ಧ ಹೋರಾಡುವ ಇರಾದೆ ಇರಬೇಕಲ್ಲವೇ? ಯುಪಿಎ ಸರ್ಕಾರ "ಕನಿಷ್ಠ ಕಾರ್ಯಕ್ರಮ"ದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ. "ಸಾಮಾನ್ಯ ಕನಿಷ್ಟ ಕಾರ್ಯಕ್ರಮ"ವನ್ನು ಕೈಬಿಟ್ಟಿದೆ ಬದಲಾಗಿ ಸಾಮಾನ್ಯ ಜನರ ಜೀವನವನ್ನು ದುರ್ಬಲಗೊಳಿಸುತ್ತಿದೆ ಎಂಬುದನ್ನು ಮನಗಂಡು ಪ್ರಜ್ಞಾಪೂರ್ವಕ ಒತ್ತಡ ಹೇರುತ್ತಿವೆ ಎಡಶಕ್ತಿಗಳು.

ಮರದ ಕೊಂಬೆಗಳಂತೆ ಕಾಂಗ್ರೆಸ್, ಬಿಜೆಪಿ, ಇನ್ನಿತರ ರಾಜಕೀಯ ಪಕ್ಷಗಳು. ಅವುಗಳ ಬುಡವೊಂದೇ, ತನ್ನ ಅಡಿಯಲ್ಲಿ ಯಾವೊಂದು ಕಳೆ ಬೇರೂರಲು ಬಿಡುವುದಿಲ್ಲ. ದಲಿತರಿಗೆ ಜೀವನ ಸಿಗುವ ಅವಕಾಶದಲ್ಲಿ ಬೇರೂರಲು ಬಿಡುವುದಿಲ್ಲ. ಹಾಗಾಗಿ ಹೆಮ್ಮರದ ಕೆಳಗೆ ಜೀವ ಕಳೆಯ ಸಸಿಯೂ ಮೊಳಕೆಯೊಡೆಯಲು ಸಾಧ್ಯವಿಲ್ಲ. ಇಂತಹ ನೀತಿಗಳಿಂದಲೇ ತಾನೇ ಪಟ್ಟಭದ್ರರು. ದಲಿತ ವಿದ್ಯಾರ್ಥಿಗಳಿಗೆ ಶೇ.60 ಅಂಕಗಳಿಸಿದರೆ ಮಾತ್ರ ವಿದ್ಯಾರ್ಥಿ ವೇತನವೆಂದು ಆದೇಶ ಹೊರಡಿಸಿರುವುದು. ಈ ಮರ್ಮ ಅರ್ಥವಾಗಿ ಆಳುವವರ ವಿರುದ್ಧ ಐಕ್ಯತೆ ಮೂಡಿಸುವ ಬದಲು ಆಳುವ ವರ್ಗಗಳ ಅಡಿಯಾಳಾಗುವ ಪರಿ ಇಂದು ದಲಿತ ನಾಯಕರಲ್ಲಿ ಕೇಂದ್ರ ಸರ್ಕಾರದ ಈ ದಲಿತ ವಿದ್ಯಾರ್ಥಿ ವಿರೋಧಿ ನೀತಿಯ ವಿರುದ್ಧ ವಿದ್ಯಾರ್ಥಿ ಸಮುದಾಯ ಸಿಡಿದೇಳಬೇಕಾಗಿದೆ. ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯ ಬಯಸುವ ಎಲ್ಲರೂ ಈ ಅನ್ಯಾಯದ ವಿರುದ್ಧ ಧ್ವನಿ ಎತ್ತಬೇಕಾಗಿದೆ.

ದಲಿತ ಮಹಿಳೆಯ ಮಾನಭಂಗ ಯತ್ನ, ವಿಷಯ ಬಯಲಾಗಿ ಆರೋಪಿಯ ಆತ್ಮಹತ್ಯೆಯಂತಹ ಘಟನೆ ದಲಿತರ ಸಾಮಾಜಿಕ ಬಹಿಷ್ಕಾರಕ್ಕೆ ಎಡೆಮಾಡಿಕೊಟ್ಟ ಘಟನೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿ ಬಳದೆರೆ ಗ್ರಾಮದಲ್ಲಿ ಸಂಭವಿಸಿದೆ. ಬಲಾಢ್ಯ ಮೇಲ್ಜಾತಿಯ ಜನರ ದಬಾವಣೆ ನೀತಿಯೇ ಇಲ್ಲಿ ವಿಜೃಂಭಿಸುತ್ತಿದೆ.

ಹಾಸನದಲ್ಲಿ ಮತ್ತೊಮ್ಮೆ ಪೊಲೀಸ್ ವೈಫಲ್ಯ

ಮಾನಭಂಗ ಯತ್ನದ ಆರೋಪಿ ಆತ್ಮಹತ್ಯೆ ದಲಿತರಿಗೆ ಬಹಿಷ್ಕಾರ !!

ಎಸ್.ಹೆಚ್.ಗುಲ್ವಾಡಿ

ಸುಮಾರು 250 ಕುಟುಂಗಳಿರುವ ಈ ಗ್ರಾಮದಲ್ಲಿ ಕೇವಲ 10 ಕುಟುಂಬಗಳು ದಲಿತರಾಗಿದ್ದಾಗಿದೆ. ಈ ಹತ್ತು ಕುಟುಂಬಗಳ ಸುಮಾರು 75 ಜನ ದಲಿತರು ಇಲ್ಲಿನ ಸವರ್ಣೀಯರ ಹೊಲಗದ್ದೆಗಳಲ್ಲಿ ಕೂಲಿ ಪಾಲಿ ಮಾಡುತ್ತಾ 'ಅನೋನ್ಯ' ವಾಗಿ ಜೀವನ ನಡೆಸುತ್ತಿದ್ದರು. ಆದರೆ ಇತ್ತೀಚೆಗೆ ನಡೆದ ಒಂದು ಘಟನೆ ದಲಿತರಿಗೆ ಗ್ರಾಮಸ್ಥರು (ಸವರ್ಣೀಯರು) ಸಾಮಾಜಿಕ ಬಹಿಷ್ಕಾರ ಹಾಕುವುದರೊಂದಿಗೆ ಗ್ರಾಮದ ಶಾಂತಿ ಕದಡಿ ಉದ್ವಿಗ್ನ ಸ್ಥಿತಿಗೆ ಕಾರಣವಾಯಿತು.

ಏನು ಕಾರಣ?

ಇದಕ್ಕೆಲ್ಲಾ ಕಾರಣವಾದದ್ದು ಈ ಗ್ರಾಮದ ದಲಿತ ಕುಟುಂಬದ ವೀರಭದ್ರಯ್ಯನ ಪತ್ನಿ ಭಾಗ್ಯಮ್ಮ ಎಂಬುವವರು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಅದೇ ಗ್ರಾಮದ ದ್ಯಾವೇಗೌಡ ಎನ್ನುವ ವ್ಯಕಿ ಅತ್ಯಾಚಾರಕ್ಕೆ ಯತ್ನಿಸಿದ್ದು ಹಾಗೂ ಈ ಬಗ್ಗೆ ಅಲ್ಲಿನ ಗ್ರಾಮಾಂತರ ಪೋಲಿಸ್ ಠಾಣೆಗೆ ದೂರು ನೀಡಿದ್ದೇ ಒಂಧು ನೆಪ ಮಾಡಿಕೊಂಡ ಇಲ್ಲಿನ ಸವರ್ಣೀಯರು ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಲು ಕಾರಣವಾಯಿತು.

ಪೋಲೀಸ್ ಠಾಣೆಯಲ್ಲಿ ದೂರು ದಾಖಲಾದ ಕೂಡಲೇ ಎಚ್ಚೆತ್ತ ಸವರ್ಣೀಯ ಮುಖಂಡರು ಕೂಡಲೇ ಸಭೆ ಸೇರಿ ಅಲ್ಲಿನ ದಲಿತರನ್ನು ಕರೆಸಿ ಮಾನಭಂಗಕ್ಕೆ ಯತ್ನಿಸಿದ ದ್ಯಾವೇಗೌಡನಿಗೆ ಬುದ್ಧಿ ಹೇಳುತ್ತೇವೆ, ಪ್ರಕರಣವನ್ನು ಹಿಂತೆಗೆಯಿಲಿ ಎಂದು ದಲಿತರ ಮನವೊಲಿಸಲು ಪ್ರಯತ್ನಿಸಿದರು. ಒಂದು ಹಂತದಲ್ಲಿ ಪರಸ್ಪರ ಮಾತುಕತೆ ಮೂಲಕ ಈ ವಿವಾದ ಬಗೆಹರಿಯುವುದರಲ್ಲಿತ್ತು(!) ಆದರೆ ಆರೋಪ ಹೊತ್ತ ದ್ಯಾವೇಗೌಡ ಗ್ರಾಮದಿಂದ 2 ಕಿ.ಮೀ. ದೂರದ ಅರಣ್ಯ ಪ್ರದೇಶದಲ್ಲಿ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ. ಆಗ ವಿವಾದ ಉಲ್ಬಣಗೊಳ್ಳಲು ಕಾರಣವಾಯಿತು. ಆ ಕೂಡಲೇ ಸಭೆ ಸೇರಿದ ಸವರ್ಣೀಯರು ದ್ಯಾವೇಗೌಡರ ಪತ್ನಿ ಮಂಜುಳಾ ಮುಖಾಂತರ ಆಕೆಯ ಗಂಡನ ಸಾವಿಗೆ ವೀರಭದ್ರಯ್ಯ ಸೇರಿದಂತೆ ನಾಲ್ವರು ದಲಿತರು ಕಾರಣ ಎಂದು ದೂರು ನೀಡಿದಾಗ ಪೋಲೀಸರು ಐಪಿಸಿ ಸೆಕ್ಷನ್ 306ರ ಪ್ರಕಾರ ದೂರು ದಾಖಲು ಮಾಡಿದರು. ಇದರಿಂದ ಭಯಗೊಂಡ ದಲಿತರು ಇಲ್ಲಿಯ ಊರಿನ ವಿದ್ಯಾವಂತ ದಲಿತರನ್ನು ಸಂಪರ್ಕಿಸಿ ಘಟನೆ ಬಗ್ಗೆ ತಿಳಿಸಿ ಜಾಮೀನಿಗೆ ಅರ್ಜಿ ಹಾಕಿದರು.



ಮಾತಾಡಿಸಿದರೆ ದಂಡ – ಹೊಡೆದರೆ ಇನಾಮು

ನ್ಯಾಯಾಲಯದಿಂದ ಜಾಮೀನು ಪಡೆದು ಗ್ರಾಮಕ್ಕೆ ವಾಪಾಸಾದ ದಲಿತರನ್ನು ನೋಡಿದ ಕೂಡಲೇ ಸವರ್ಣೀಯರು ಕೋಪಗೊಂಡರು. ಆದರೆ ದಲಿತರು ರಾಜಿ ಪಂಚಾಯಿತಿಗಾಗಿ ಸೂಕ್ತ ವೇದಿಕೆ ರಚಿಸಲು ಮಾತುಕತೆಗೆ ಮುಂದಾಗುವಾಗಲೇ ಸವರ್ಣೀಯ ಮುಖಂಡರು, ಯುವಕರು ಸಭೆ ಸೇರಿ ಗ್ರಾಮದ ಎಲ್ಲಾ ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಲು ನಿರ್ಧರಿಸಿದರು. ಸಾಮಾಜಿಕ ಬಹಿಷ್ಕಾರಕ್ಕೊಳಗಾದ ದಲಿತರನ್ನು ಸವರ್ಣೀಯರು ಕೂಲಿಗೆ ಕರೆಯುವುದನ್ನು ನಿಷೇಧಿಸುವುದು ಸೇರಿದಂತೆ ಸವರ್ಣೀಯರ ಅಂಗಡಿಗೆ ದಲಿತರು ಬರುವುದನ್ನು ಸಹ ನಿಷೇಧಿಸಲಾಯಿತು. ಎಲ್ಲಾ ಜಾತಿಯವರು ಕೂಡಿ ನಡೆಸುತ್ತಿದ್ದ ಸ್ತ್ರೀಶಕ್ತಿ ಸಂಘಗಳಿಂದ ದಲಿತ ಮಹಿಳೆಯರನ್ನು ಹೊರ ಹಾಕಲಾಗಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ದಲಿತರನ್ನು ಮಾತನಾಡಿಸಿದ ಸವರ್ಣೀಯನಿಗೆ ಒಂದು ಸಾವಿರ ರೂ ದಂಡ ವಿಧಿಸುವ, ದಲಿತರಿಗೆ ಹೊಡೆದರೆ ಎರಡು ಸಾವಿರ ರೂಪಾಯಿ ಇನಾಮು ಕೊಡುವ ನಿರ್ಧಾರವನ್ನು ಸವರ್ಣೀಯ ಮುಖಂಡರು ಕೈಗೊಂಡಿರುವುದು ಈ ದೇಶದ ಸಂವಿಧಾನಕ್ಕೆ ಎಸಗಿದ ಅಪಮಾನವಾಗಿದೆ.

ಗ್ರಾಮದ 'ಕೆಲವೊಂದು ಕೆಲಸ ಕಾರ್ಯಗಳಿಗೆ ದಲಿತರೇ' ಅವಶ್ಯಕ ಇರುವುದನ್ನು ಮನಗಂಡ ಕೆಲವು ಸವರ್ಣೀಯ ಹಿರಿಯರು ದಲಿತರ ಅಸಹಾಯಕತೆಯನ್ನು ಬಳಸಿ ನಿರ್ಬಂಧ ಸಡಲಿಸುವ ಬಗ್ಗೆ ಮಾತುಕತೆ ನಡೆಸಿದರು. ಮುಖ್ಯವಾಗಿ ತಮಟೆ ಬಡಿಯುವುದು, ಗ್ರಾಮ ಸ್ವಚ್ಛಗೊಳಿಸುವುದು, ಸತ್ತ ದನ ಕರುಗಳನ್ನು ಹೊರುವುದು ಸೇರಿದಂತೆ ಹಲವು ಕೆಲಸ (ಶಿಕ್ಷೆ) ಗಳನ್ನು ಮಾಡಬೇಕಾಗಿದೆ. ಈ ನಿರ್ಣಯ ಪಾಲಿಸಿದರೆ ಬಹಿಷ್ಕಾರ ಹಿಂತೆಗೆದುಕೊಳ್ಳುವುದಾಗಿ ತಿಳಿಸಿದರು. ಇದು ರಾಜಿ ಸೂತ್ರ ಇನ್ನಷ್ಟು ಜಟಿಲವಾಗಲು ಕಾರಣವಾಯಿತು. ಈ ಮಧ್ಯೆ ಸಂಜೆಯಾಗುತ್ತಿದ್ದಂತೆ ದಲಿತರ ಮನೆಗಳ ಮೇಲೆ ಕಲ್ಲುಗಳ ಸುರಿಮಳೆ ಸಹಾ ಆಗುತ್ತಿದ್ದು ಹಲವಾರು ದಿನಗಳಿಂದ ದಲಿತ ಕುಟುಂಬಗಳು ನಿದ್ರೆರಹಿತ ರಾತ್ರಿಯನ್ನು ಕಳೆಯಬೇಕಾಗಿದೆ. ತನ್ನ ಜೀವಮಾನವಿಡೀ ಗ್ರಾಮದಲ್ಲಿ 'ಅನ್ಯೋನ್ಯತೆ' ಯಿಂದ ಬಾಳಿದ್ದ ಈ ಗ್ರಾಮದ ಹಿರಿಯ ದಲಿತ ಈರಯ್ಯ ಎಂಬುವರು ಈ ಎಲ್ಲಾ ಘಟನೆಗಳಿಂದ ನೊಂದು ಮಾನಸಿಕ ಅಸಮತೋಲನ ಕಳೆದುಕೊಂಡು ಖಾಸಗಿ ಆಸ್ಪತ್ರೆಗೆ ದಾಖಲಾದರು.

ಈ ಘಟನೆಗಳ ಉಲ್ಬಣೆಗೆ ಯಾವುದೇ ರಾಜಕೀಯ ಪಕ್ಷದ ರಾಜಕಾರಣಿಗಳ ಕೈವಾಡ ಇರಲಿಲ್ಲ ಎನ್ನುವುದು ಒಂದು ಸಮಾಧಾನಕರ ಸಂಗತಿ. ಆದರೆ ಸವರ್ಣೀಯರ ಮುಖಂಡರ ದಬ್ಬಾಳಿಕೆ ದೌರ್ಜನ್ಯದ ಮನೋಭಾವವೇ ಇದಕ್ಕೆ ಪ್ರಮುಖ ಕಾರಣವಾಗಿದೆ. ದಲಿತರಿಗೆ ನ್ಯಾಯ ಕೊಡಿಸಬೇಕಾದ ದಲಿತ ಸಂಘಟನೆಗಳ ಮುಖಂಡರೂ ಸಹಾ ಈ ಬಗ್ಗೆ ಚಕಾರ ಎತ್ತದೆ ಇರುವುದು ಈ ಘಟನೆಯ ಬೆಳವಣಿಗೆಯ ಕಾರಣವಾಗಿದೆ.

ಪೊಲೀಸ್ ವೈಫಲ್ಯ

ಹಾಸನ ಜಿಲ್ಲೆಯಲ್ಲಿ ನಡೆದ ಕೆಲವು ಘಟನೆಗಳಂತೆ ಈ ಪ್ರಕರಣದಲ್ಲಿ ಪೋಲೀಸ್ ವೈಫಲ್ಯ ಎದ್ದು ಕಾಣುತ್ತಿದೆ. ಮುಖ್ಯವಾಗಿ ಆತ್ಮಹತ್ಯೆ ಮಾಡಿಕೊಂಡ ದ್ಯಾವೇಗೌಡ ವಿರುದ್ಧ ಮಾನಭಂಗಕ್ಕೆ ಯತ್ನಿಸಿದ ಎಂದು ದಲಿತ ವೀರಭದ್ರಯ್ಯನ ಪತ್ನಿ ದೂರು ನೀಡಿದ ಕೂಡಲೇ ಪೋಲೀಸರು ಕಾರ್ಯ ಪ್ರವೃತ್ತರಾಗಿದ್ದರೆ ದಲಿತರಿಗೆ ಬಹಿಷ್ಕಾರ ಹಾಕುವ ಘಟನೆ ನಡೆಯುತ್ತಿರಲಿಲ್ಲ ಮತ್ತು ಆತ ಆತ್ಮಹತ್ಯೆ ಮಾಡಿಕೊಳ್ಳುವವರೆಗೆ ಪ್ರಕರಣ ಮುಂದುವರೆಯುತ್ತಿರಲಿಲ್ಲ.

ಈ ಎಲ್ಲಾ ಘಟನೆಗಳ ಮಧ್ಯೆ ಸುದ್ದಿ ಗೋಷ್ಠಿ ನಡೆಸಿದ ಆ ಗ್ರಾಮದ ಗ್ರಾಮ ಪಂಚಾಯತ್ ಸದಸ್ಯ ಶ್ರೀಕಾಂತ್ ಎನ್ನುವ ಸವರ್ಣೀಯ ಮುಖಂಡ ಆತ್ಮಹತ್ಯೆಗೆ ನೇರವಾಗಿ ದಲಿತರೇ ಕಾರಣ ಎಂದೂ ದಲಿತರ ಎಲ್ಲಾ ಆರೋಪಗಳನ್ನು ಸಾರಸಗಟಾಗಿ ತಿರಸ್ಕರಿಸಿದನು. ರಾಜಿ ಸಂಧಾನದಲ್ಲಿ ನಂಬಿಕೆ ಇರಲಿಲ್ಲ. ಈ ಎಲ್ಲಾ ಘಟನೆಯ ನಂತರ ಎಂದಿನಂತೆ ಆಗಮಿಸಿದ ಉನ್ನತಾಧಿಕಾರಿಗಳು ಪರಿಸ್ಥಿತಿಯನ್ನು ಅವಲೋಕಿಸಿ ಗ್ರಾಮಕ್ಕೆ ಪೋಲೀಸ್ ರಕ್ಷಣೆಯನ್ನು ನೀಡಿದರು. ಅನಂತರ ಗ್ರಾಮಕ್ಕೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರಲ್ಲದೆ ಎರಡೂ ಕಡೆಯವರನ್ನು ಪ್ರತ್ಯೇಕವಾಗಿ ಮಾತುಕತೆ ನಡೆಸಿ ಮಾಹಿತಿ ಸಂಗ್ರಹಿಸಿದರು. ದಲಿತರು ಈಗಾಗಲೇ ಕಲ್ಲು ತೂರಾಟದಿಂದ ಮನೆಗೆ ಆಗಿರುವ ನಷ್ಟ ಮತ್ತು ಕಿರುಕುಳಕ್ಕೊಳಗಾದ ದಲಿತ ಮಹಿಳೆ ಭಾಗ್ಯಮ್ಮ ಅವರ ಮಾನಹಾನಿಯ ಬಗ್ಗೆ ಅಧಿಕಾರಿಗಳಿಗೆ ವಿವರ ನೀಡಿದರು.



ಸಹ ಭೋಜನಕ್ಕೆ ಬರದ ಸವರ್ಣೀಯರು!!!

ಕೊನೆಗೂ ಎಚ್ಚೆತ್ತ ಪೋಲೀಸರು


ಎರಡೂ ಜನಾಂಗಗಳ ಮಧ್ಯೆ ಉಂಟಾದ ಮನಸ್ತಾಪ, ಇತ್ಯರ್ಥಪಡಿಸಲು ಪೋಲೀಸರು ಚನ್ನರಾಯಪಟ್ಟಣದ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಶಾಂತಿ ಸಭೆ ಕರೆದರೂ ದಲಿತರಿಗೆ ರಾಜಿ ಸೂತ್ರದ ಬಗ್ಗೆ ನಂಬಿಕೆ ಉಳಿದಿಲ್ಲ. ತಮ್ಮ ಸಂಖ್ಯಾಬಲದ ಕೊರತೆ, ಆರ್ಥಿಕ ಬಲಹೀನತೆ ಮತ್ತು ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಳ್ಳಬಹುದು ಎಂದು ಮತ್ತು ಸವರ್ಣೀಯ ಪುಂಡ ಯುವಕರು ಹಿರಿಯರ ಮಾತನ್ನು ಧಿಕ್ಕರಿಸಬಹುದು ಎನ್ನುವ ಭಯ ಕಾಡುತ್ತಿದೆ. ಕೊನೆಗೂ ಶಾಂತಿ ಸಭೆಯಲ್ಲಿ ಭಾಗವಹಿಸಿದ ದಲಿತರ ಸವರ್ಣೀಯ ಯುವಕರು ಕಿರುಕುಳ ನೀಡಿದರೆ ಹಿರಿಯರು ಜವಾಬ್ದಾರಿಯಾಗುತ್ತೇವೆಂದು ಲಿಖಿತವಾಗಿ ಬರೆದು ಕೊಡಲಿ ಎನ್ನುವ ದಲಿತ ಬೇಡಿಕೆಗೆ ಸವರ್ಣೀಯರು ಒಪ್ಪದೇ ಮತ್ತೆ ಸ್ವಲ್ಪ ಬಿಗುವಿನ ವಾತಾವರಣಕ್ಕೂ ಕಾರಣ ವಾಯಿತು.


ಈ ಬಗ್ಗೆ ಚರ್ಚಿಸಿದ ನಂತರ ಪುಂಡರ ಗುಂಪು ಗಲಾಟೆ, ಹಲ್ಲೆ ಮಾಡಿದರೆ ಪೋಲೀಸರಿಗೆ ನೇರವಾಗಿ ದೂರು ನೀಡಿದರೆ ಸೂಕ್ತ ಕ್ರಮ ಕೈಗೊಳ್ಳುವ ಭರವಸೆಯನ್ನು ನೀಡಿದ ನಂತರ ಎರಡೂ ಕಡೆಯವರು ತಮ್ಮ ಪಟ್ಟು ಸಡಲಿಸಿದರು. ದಲಿತರ ಮನೆಗಳ ಮೇಲೆ ಕಲ್ಲು ತೂರಿರುವ ಬಗ್ಗೆ ಈ ಕೃತ್ಯವೆಸಗಿದವರ್‍ಯಾರು ಎನ್ನುವುದು ಸ್ಪಷ್ಟವಾಗದ ಕಾರಣ ಗ್ರಾಮ ಪಂಚಾಯತ್‌ನ ಶೇ.20 ಹಣದಲ್ಲಿ ನಷ್ಟ ತುಂಬಿಕೊಡಲು ಮತ್ತು ಕಿರುಕುಳಕ್ಕೊಳಗಾದ ದಲಿತ ಮಹಿಳೆ ಭಾಗ್ಯಮ್ಮ ಅವರ ಮಾನಹಾನಿ ಪರಿಹಾರ ನೀಡುವ ಬಗ್ಗೆ ಸರಿಯಾದ ತೀರ್ಮಾನವಾಗದೇ ಇದ್ದರೂ ಪೋಲೀಸ್ ಠಾಣೆಯ ವರದಿ ಆಧರಿಸಿ ಸಮಾಜ ಕಲ್ಯಾಣ ಇಲಾಖೆಯಿಂದ ಮಾನನಷ್ಟ ಪರಿಹಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ ನಿರ್ಧರಿಸಲಾಯಿತು.

ಆತ್ಮಹತ್ಯೆ ಮಾಡಿಕೊಂಡ ದ್ಯಾವೇಗೌಡ ಕುಟುಂಬಕ್ಕೂ ಪರಿಹಾರ ನೀಡಬೇಕೆನ್ನುವ ಸವರ್ಣೀಯರ ಒತ್ತಾಯಕ್ಕೆ ತಹಶೀಲ್ದಾರರು ರಾಷ್ಟ್ರೀಯ ಕುಟುಂಬ ಯೋಜನೆಯಡಿ 10 ಸಾವಿರ ಪರಿಹಾರ, ನೀಡಲು ದ್ಯಾವೇಗೌಡ ಪತ್ನಿಗೆ ವಿಧವಾವೇತನ ನೀಡುವ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು. ಶಾಂತಿ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಪೋಲೀಸ್ ಅಧಿಕಾರಿಗಳು, ತಹಶೀಲ್ದಾರ್‌ರು, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಇತರೆ ಮುಖಂಡರು ಈ ಕಹಿ ಘಟನೆ ಮರೆತು ಸಹಬಾಳ್ವೆ ಜೀವನ ನಡೆಸುವ ಬಗ್ಗೆ ಗ್ರಾಮದ ಎರಡೂ ಜನಾಂಗದವರಿಗೆ ಎಚ್ಚರಿಕೆಯ ಮನವಿ ಮಾಡಿದರು. ನಂತರದ ಬೆಳವಣಿಗೆಯಲ್ಲಿ ಎರಡೂ ಕಡೆಯವರು ಸಹಭೋಜನ ಮಾಡುವುದರೊಂದಿಗೆ ಮುಂದಿನ ದಿನಗಳಲ್ಲಿ ಇಂತಹ ಘಟನೆ ನಡೆಯದಂತೆ ನೋಡಿಕೊಳ್ಳುವ ಮುಖಾಂತರ ಪ್ರಕರಣಕ್ಕೆ ಸುಖಾಂತ್ಯ ಹಾಡಲು ತೀರ್ಮಾನಿಸಲಾಯಿತು. ಆದರೆ ಸಹ ಭೋಜನದ ದಿನ ಕುರ್ಚಿಗಳು ಖಾಲಿ ಖಾಲಿ. ಸವರ್ಣೀಯರು ಭೋಜನಕ್ಕೆ ಹಾಜರಾಗಲಿಲ್ಲ. ಸಹ ಭೋಜನ ಆಗುವುದು ಹೇಗೆ? ಬರದೇ ಇರುವುದಕ್ಕೆ ಏನೇನೋ ಕಾರಣಗಳು, ಸಬೂಬುಗಳು, ನಿಜವಾದ ಕಾರಣವೇನೋ ಆ 'ಮನು'ವಿಗೆ ಗೊತ್ತು.

ಹಾಸನ ಜಿಲ್ಲೆಯಲ್ಲಿ ಪದೇ ಪದೇ ಇಂತಹ ಘಟನೆಗಳು ನಡೆಯುತ್ತಿರುವುದು. ಜಿಲ್ಲೆಯ ಘನತೆಗೆ ಕಪ್ಪು ಚುಕ್ಕೆಯಾಗಿದೆ. ಎಲ್ಲ ಪ್ರಕರಣಗಳೂ ಕಾನೂನಿನ ಮೂಲಕವೇ ಬಗೆಹರಿಯಲು ಸಾಧ್ಯವಿಲ್ಲ. ಶಾಂತಿ, ನೆಮ್ಮದಿಯ ಜೀವನ ನಡೆಸಲು ಮನಸ್ಸು ಒಂದಾಗಬೇಕು. ಈ ನೆಲೆಗಟ್ಟಿನಲ್ಲಿ ಎರಡು ಸಮುದಾಯಗಳ ನಡುವೆ ಸಾಮರಸ್ಯ, ಮೂಡಬೇಕು. ಈ ನಿಟ್ಟಿನಲ್ಲಿ ಈಗಷ್ಟೇ ನೂತನವಾಗಿ ಅಧಿಕಾರ ಸ್ವೀಕರಿಸಿರುವ ಪೋಲೀಸ್ ಮುಖ್ಯಾಧಿಕಾರಿ ಕೆ.ವಿ.ಶರತ್ ಚಂದ್ರರವರು ಕಾರ್ಯ ನಿರ್ವಹಿಸುತ್ತಾರೋ ಕಾದು ನೋಡ ಬೇಕಾಗಿದೆ.

ಜನ ಚಳುವಳಿಗಳು ಇಂಥ ಪ್ರಶ್ನೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಿದೆ.





" ಅಂವ ಮನಶ್ಯಾನೇ ಅಲ್ಲ. ಅವ್ನಿಗೆ ಗೊತ್ತದ, ನಾ ಯಾರಿಗನೂ ಕಣ್ಣೆತ್ತಿ ನೋಡಾದಿಲ್ಲ ಅಂತ. ಆದನ್ರೂ ಸುಮ್ ಸುಮ್ನೆ ಸಂಶಯ ಮಾಡ್ತಾನ. ಯಾರರೇ ಮನಿ ಮುಂದಿಂದ ಹಾದು ಹೋಗಾಗ "ತಂಗೀ, ಊಟ ಆಯ್ತೇನು....?" ಅಂತ ಕೇಳಿದರೂ ನಿಂಗ್ಯಾಕ ಕೇಳಿದ್ರು ಅಂತ ಹೊಡಿತಾನ. ಅಂವ್ನ ದೋಸ್ತರು ಕೇಳಿದ್ರ 'ನಿಂಗೂ ಅಂವ್ನಿಗೂ ಏನ್ ಸಂಬಂಧದ?" ಅಂತ ತ್ರಾಸ್ ಕುಡ್ತಾನ.

ಹೊಸ ಜಗತ್ತು ನಮ್ಮದು

ಅಂಗಳದ ಹೊರಗಿನಿಂದ ತಣ್ಣನೆ ಗಾಳಿ ಹರಿದುಬರುತ್ತಿತ್ತು. ಅಂಗಳದ ತುಂಬ ಪುಟ್ಟ ಹಣ್ಣೆಲೆಗಳ ರಾಶಿ ಹಾಸಿಗೆಯಂತೆ. ಗಾಳಿಯ ವೇಗದ ಗಾನಕ್ಕೆ ಎಲೆಗಳ ಚಲನೆಯ ದಳ ದಳ ತಾಳ. ಮುಗಿಲ ತುಂಬ ಮೋಡಗಳ ದಂಡು. ಎಲ್ಲೋ ಬಿದ್ದ ಅಕಾಲಿಕ ಮಳೆಯಿಂದ ಸೂಸಿ ಬರುವ ಮಣ್ಣಿನ ವಾಸನೆ ಘಮಕ್ಕೆ ಮೂಗರಳಿದರೂ ಈಗ ಮಳೆ ಬೇಡವಾಗಿತ್ತು. ರಾಶಿಗೆ ಬಂದ ಬಿಳಿ ಜೋಳವು ಮಳೆಯ ಹೊಡೆತಕ್ಕೆ ಮುದುಡಿ ಹೋಗಿ, ಕಾಡಿಗೆ ಕಾಳಾಗಿ, ಇಳುವರಿ ಕಮ್ಮಿಯಾಗಿ ಎಲ್ಲವೂ ಸರ್ವನಾಶ! ರೈತರು ತಲ್ಲಣಿಸಿ ಹೋಗಿರುವರು. ಗಾಯದ ಮೇಲೆ ಮತ್ತೆ ಬರೆ!! ಶ್ರಮಿಕರ ಬದುಕೊಂದು ಒಸರುವ ವ್ರಣದಂತೆ. ಮತ್ತೆ ಮತ್ತೆ ನೋವು ಮಾತ್ರ....

ಭೂ ಮಂಡಲದ ಪ್ರತಿನಿಧಿ

ಟಿ.ವಿ. ಪರದೆಯ ಮೇಲೆ ಆಸಿನಿಮಾ. ಗಾಜಿನ ಹಿಂದೆ ಎರಡು ಆರ್ದ್ರ ಕಣ್ಣುಗಳು ಎವೆ ಬಡಿಯದೆ ಆಹ್ಲುವಾಲಿಯ ಎಂಬ ಹೆಂಗಸಿನ ಕತೆಯನ್ನು ಹೇಳತೊಡಗಿದವು. ಯಾಕೋ ಈ ಸಿನೇಮಾ ಮತ್ತೊಮ್ಮೆ ನೋಡುವ ಮನಸ್ಸಾಯ್ತು. ಈ ಕತೆಯ ಭೂಮಂಡಲದ ಅಸಂಖ್ಯಾತ ಮಹಿಳೆಯರ ಪ್ರತಿನಿಧಿ. ನಾನು ಹಿಂದೊಮ್ಮೆ ಹತ್ತು ದಿನಗಳ ಕಾಲ ಜೇಲಿನಲ್ಲಿದ್ದಾಗ ಮಹಿಳಾ ಕೈದಿಗಳ ಮನದಾಳಕ್ಕಿಳಿಯಲು ಪ್ರಯತ್ನಿಸಿದ್ದೆ. ಶೋಷಣೆಗೆ ಒಳಗಾದವರ ಅಪರಾಧದ ಹಿಂದೊಂದು ಎದೆ ಝಲ್ಲೆನ್ನಿಸುವ ನೋವಿನ ಗಾಥೆಯ ಕಾರಣವಿರುತ್ತದೆ. ಅಪರಾಧದೆಡೆಗೆ ತಳ್ಳುವ ಒತ್ತಡದ ಒಳ ಕಾರಣಗಳ ಭೇದಿಸುವ ದೃಷ್ಟಿಯಿರಬೇಕು. ಮೇಲ್ಪದರಿನ ವಿಶ್ಲೇಷಣೆಯೇ ಅಥವಾ ತಥಾಕಥಿತ ನಂಬಿಕೆಗಳೋ ಖಂಡಿತ ನಿಷ್ಪಕ್ಷಪಾತ ನ್ಯಾಯ ಒದಗಿಸಲಾರವು. ಅದರಲ್ಲೂ ಪಾಳೇಗಾರಿ ಮೌಲ್ಯಗಳು ಇನ್ನೂ ಜೀವಂತವಾಗಿರುವ ಈ ಹೊತ್ತಲ್ಲಿ ಪ್ರಸ್ತುತ ವ್ಯಾಖ್ಯಾನಗಳನ್ನು ಮುರಿದು ಕಟ್ಟಬೇಕಾದ ಜರೂರಿ ಇರುವುದನ್ನು 'ಪ್ರವೋಕ್ಡ್' ಧ್ವನಿಸುತ್ತಿತ್ತು. ಕಾನೂನಾತ್ಮಕ ಪರಿಭಾಷೆಯಲ್ಲಿ ಲಿಂಗ ಸಂವೇದನೆಯುಳ್ಳ ನ್ಯಾಯಿಕ ವಾದ ಮಂಡಿಸುವ ಪರಿ ಮತ್ತು ಅಂತಿಮದಲ್ಲಿ ವಿಜಯದ ಹೊನಲು ಉತ್ಸಾಹ ಕೊಡುತ್ತದೆ..........ಬದುಕನ್ನು ಮತ್ತೆ ಈಜಿ ಜೈಸಲು ಸಾಧ್ಯ ಎಂಬುದನ್ನು ರುಜುಗೊಳಿಸುತ್ತದೆ.

..................ಏನು ಹೇಳುತ್ತದೆ ಕತೆ? ಕಿರಣಳ ಕತೆ ಕೋಣೆಯ ತುಂಬ ಅನಾವರಣಗೊಳ್ಳತೊಡಗಿತು. ತಂದೆ, ತಾಯಿಯಿಲ್ಲದ ಬಡ ಹುಡುಗಿ ಕಿರಣ, ಗಂಡ ಒಪ್ಪಲಿಲ್ಲವೆಂದು ವಕೀಲಳಾಗುವ ಕನಸನ್ನು ಮೂಲೆಗೊತ್ತಿ, ವಿಕೃತ ಗಂಡನಿಗೆ ಹೆಂಡತಿಯಾಗಿ ಅತ್ತೆಗೆ ಸೊಸೆಯಾಗಿ, ಎರಡು ಕಂದಮ್ಮಗಳಿಗೆ ತಾಯಿಯಾಗಿ ಜೀವನ ಸಾಗಿಸುತ್ತಿದ್ದಳು. ಅವಳದೊಂದು ನೆಮ್ಮದಿಯ ಜೀವನವೇ ಆಗಿರಲಿಲ್ಲ. ಯಾರಿಗೂ ಹೇಳಿಕೊಳ್ಳಲಿಕ್ಕಾಗದ ನೋವಿಗೆ ಧಾಳಿಗೆ ಒಡ್ಡಿಕೊಂಡು ಅಕ್ಷರಶ: ಜೀವಚ್ಛವವಾಗಿದ್ದಳು. ಗಂಡನ ಪಾಶವೀ ಬಲತ್ಕಾರಕ್ಕೆ ಕಿರಣ ಸಹಿಸಿ ಸಹಿಸಿ ತತ್ತರಿಸಿಹೋಗಿದ್ದಳು. ಬದುಕು ಸಾಕಾಗಿತ್ತು. ಚಟಗಾರ, ವಿಕೃತಕಾಮಿ, ಲೋಭಿ, ದುರಾಚಾರಿ ಗಂಡನನ್ನು ಹತ್ತು ವರ್ಷಗಳ ಕಾಲ ಸಹಿಸಿಕೊಂಡ ಕಿರಣ ಅದೊಂದು ದಿನ, ರಾತ್ರಿ ಗಂಡ ಮಲಗಿದ ಮೇಲೆ ಸೀಮೆ ಎಣ್ಣೆ ಸುರಿದುಬಿಡುವ ಮಾನಸಿಕ ಒತ್ತಡಕ್ಕೆ ಒಳಗಾಗಿ, ಒಂದು ಕೈಯಲ್ಲಿ ಮೇಣಬತ್ತಿ, ಮತ್ತೊಂದು ಕೈಯಿಂದ ಸೀಮೆ ಎಣ್ಣೆ..... ಸ್ವಲ್ಪವೇ ಸುರಿದಳು. ಗಂಡ ಕಣ್ಬಿಟ್ಟ! ಗಡ ಗಡನೆ ನಡುಗಿದಳು. ಕೈಯಿಂದ ಜಾರಿದ ಮೇಣಬತ್ತಿ ಹೊತ್ತಿಕೊಂಡ ಉರಿ ಅವಕ್ಕಾಗಿ ತಲ್ಲಣಿಸಿದ ಕಿರಣ. ಹೊತ್ತಿಕೊಂಡ ಬೆಂಕಿಯ ಮೈಯಿಂದ ರಸ್ತೆಗೆ ಧಾವಿಸಿದ ಗಂಡ.... ಕಡೆಗೆ ಆಸ್ಪತ್ರೆಯಲ್ಲಿ ಗಂಡ ಕೊನೆಯುಸಿರೆಳೆದ. ಕಿರಣ ಜೇಲು ಸೇರಿದಳು. ಹತ್ತು ವರ್ಷ ಕಿರಣ ಅನುಭವಿಸಿದ ಶಾರೀರಿಕ ಮಾನಸಿಕ ಹಿಂಸೆಗಳು ಹಿಂದಾದವು. ಆ ರಾತ್ರಿ ಸುರಿದ ಎಣ್ಣೆ. ಅಸು ನೀಗಿದ ಗಂಡ. ಘಟನೆ ಮುಂದಾಯ್ತು. ಗಂಡನನ್ನೇ ಕೊಂದ 'ಕಟುಕಿ' ಎಂಬ ಬಿರುದು. ಕಿರಣಗೆ ಗಂಡನನ್ನು ಕೊಲ್ಲುವ ಮನಸೇ ಇರಲಿಲ್ಲ. ಹೆದರಿಸುವ ಮನಸೂ ಇರಲಿಲ್ಲ. ಆದರೆ, ಗಂಡನ ಬಾರ್ಬರಿಕ ಪಾಶವೀಕ ಧಾಳಿಗೆ ವಿಕೃತ ಲೈಂಗಿಕ ಹಲ್ಲೆಗೆ 'ಕಿರಣ' ಳ ಸಹನೆಯ ಕಟ್ಟೆಯೊಡೆದಿತ್ತು. ನರಕದ ಬದುಕು ಸಾಕಾಗಿತ್ತು. ಅವಳು ಮತ್ತೆ ಮತ್ತೆ ಸತ್ತು ಸತ್ತು ಉಸಿರಾಡುವ ನಡೆದಾಡುವ ಶವ ಮಾತ್ರ ಆಗಿದ್ದಳು. ಅವಳು ತಾಳಿಯ ನೆರಳಲ್ಲಿ ಕುಟುಂಬದ ರಕ್ಷಣೆ ಕೋಟೆಯಲ್ಲಿ ಪ್ರತಿದಿನವೂ ಅತ್ಯಾಚಾರಕ್ಕೊಳಗಾಗುತ್ತಿದ್ದಳು. ಈ ನೋವು ಭಾರತದ ಅಸಂಖ್ಯಾತ ಸ್ತ್ರೀಯರ ನಿತ್ಯಗಾಥೆ...

ಸಾಕಾಗ್ಯದ ಜೀವನ

.........ಹೌದು. ನಿನ್ನೆ ತಾನೇ ಬಂದ ಯಲ್ಲಮ್ಮಳ ಕತೆಯೇ ಇದು. ಸಂಜೆಯ ಇಳಿ ಹೊತ್ತಲ್ಲಿ ಮೂಳೆ ಚಕ್ಕಳದ ಎಲುಬಿನ ಹಂದರವೇ ಎದ್ದುಕಾಣುವಂತ ಹುಡುಗಿಯೊಂದಿಗೆ ಮಹಿಳಾ ಸಂಗಾತಿ ಕಚೇರಿಗೆ ಕಾಲಿಟ್ಟಳು. ಹಿಂದೊಮ್ಮೆ ಎಸ್‌ಎಫ್‌ಐನಲ್ಲಿ ದುಡಿದಾಕೆ. ಈಗ ಮದುವೆಯಾಗಿ ಎಲ್ಲವೂ ಮರೆತಿರಬೇಕು ಅಂದುಕೊಂಡಿದ್ದೆ. "ಇಲ್ಲ ಕಾಮ್ರೇಡ್, ನಾನೀಗ ಜನವಾದಿಯಲ್ಲಿ ಕೆಲಸ ಮಾಡಬೇಕು.." ನಗುತ ಹೇಳಿದಳು "ಆಯ್ತು ಎಂದಿನಿಂದ ಕೆಲಸ ಸುರು ಗೆಳತಿ?" ಕೇಳಿದೆ. "ಈಗಿನಿಂದಲೇ ನೋಡ್ರೀ, ಈಕೆಗೆ ನ್ಯಾಯ ಕೊಡಸ್ಲಾಕ ಕರ್ಕೊಂಡು ಬಂದಿನಿ" ಅಂದಳು. "ಮೊದಲು ಸದಸ್ಯತ್ವ ತಗೋ..." ಅಂದಿದ್ದಕ್ಕೆ "ಹಾಂ ಕಾಮ್ರೇಡ್, ತಗೋರಿ ಎರಡು ರೂಪಾಯಿ..." ಅವಳು ಉತ್ಸಾಹದಿಂದ ಕಣ್ಣರಳಿಸಿದಳು. ರಸೀದಿ ಕೈಗಿಟ್ಟೆ, ಅಲ್ಲಿವರೆಗೂ ಮಾತೇ ಬರದ ಮೂಕಿಯಂತೆ ಬರೆ ವೀಕ್ಷಕಳಾಗಿದ್ದ ಮಲ್ಲಮ್ಮ ಎಲ್ಲ ಥಟ್ಟನೆ, "ನಂಗೂ ಮೆಂಬರ್ ಮಾಡ್ಕೋರಿ ಸಾಕಾಗ್ಯಾದ ಜೀವನ..." ಅನಬೇಕ! "ಜೀವನ ಬೇಕಾಗುವಂಗ ಮಾಡ್ಕೋಲಾಕ ಸಂಘ ಅದ. ಸಾಕಾಗಲಿಕ್ಕ ಅಲ್ಲ..." ಎಲ್ಲಮ್ಮನ ಮುಖದ ಮೇಲಿನ ಸಣ್ಣ ಭರವಸೆಯ ಗೆರೆ ಗುರ್ತಿಸಿ ಮಾರ್ನುಡಿದೆ. ಅವಳಿಗೆ ಖುಷಿಯಾಯಿತೇನೋ... ಮರುಗಳಿಗೆಯೇ ಕಣ್ಣೀರು ಧುಮ್ಮಿಕ್ಕಿದವು. "ಹೇಳು ನೀನೇ ನಿನ್ನ ತಳಮಳ ಬಿಚ್ಚಿಡಬೇಕು." ಎಲ್ಲಮ್ಮ ಮಾತಾಡತೊಡಗಿದಳು. ಇದೇ ಕಿರಣ ಅಹುವಾಲಿಯಾಳೇ ಮಾತಾಡಿದಂತೆ ಥೇಟ್. ನೀವು ನಂಬಲೇಬೇಕು. ಅಸಂಖ್ಯಾತ "ಥೇಟ್" ಕಥೆಗಳಿವೆ ಭಾರತದಗಲಕ್ಕೂ ಸಿರಿವಂತರ ಬಂಗಲೆಯಲ್ಲೂ ಬಡವರ ಗುಡಿಸಲಲ್ಲೂ.

ಆಳಂದ ತಾಲ್ಲೂಕಿನ ಗೋಳಾದ ಕಟ್ಟುಮಸ್ತಾದ ಯುವಕನೊಂದಿಗೆ ಮದುವೆಯಾಗಿ ಒಂಬತ್ತು ವರ್ಷಗಳು ಉರುಳಿವೆ. ಆರು ವರ್ಷದ ಗಂಡು ಮಗು 2 ವರ್ಷ ಹೆಣ್ಣು ಮಗು. ದುಬೈಗೆ ಹೋಗಿ ಮೈಮುರಿದು ದುಡಿಯುವ ಗಂಡ, ಊಟ, ಬಟ್ಟೆ ಬರೆಗೇನೂ ಕೊರತೆ ಮಾಡಿಲ್ಲ. ಇರಲೊಂದು ಚಿಕ್ಕ ಮನೆಯೂ ಇದೆ. ಮತ್ತೇನು ಕೊರತೆ? ನೋವೇನು? ಯಲ್ಲಮ್ಮ ನೋವ ನುಂಗುತ ತಡೆ ತಡೆದು ಹೇಳಿದಳು....

" ಅಂವ ಮನಶ್ಯಾನೇ ಅಲ್ಲ. ಅವ್ನಿಗೆ ಗೊತ್ತದ, ನಾ ಯಾರಿಗನೂ ಕಣ್ಣೆತ್ತಿ ನೋಡಾದಿಲ್ಲ ಅಂತ. ಆದನ್ರೂ ಸುಮ್ ಸುಮ್ನೆ ಸಂಶಯ ಮಾಡ್ತಾನ. ಯಾರರೇ ಮನಿ ಮುಂದಿಂದ ಹಾದು ಹೋಗಾಗ "ತಂಗೀ, ಊಟ ಆಯ್ತೇನು....?" ಅಂತ ಕೇಳಿದರೂ ನಿಂಗ್ಯಾಕ ಕೇಳಿದ್ರು ಅಂತ ಹೊಡಿತಾನ. ಅಂವ್ನ ದೋಸ್ತರು ಕೇಳಿದ್ರ 'ನಿಂಗೂ ಅಂವ್ನಿಗೂ ಏನ್ ಸಂಬಂಧದ?" ಅಂತ ತ್ರಾಸ್ ಕುಡ್ತಾನ. ಸಂಬಂಧ ಅದಾಂತ ಒಪ್ಕೊಂಡಿ ಚಲೋ ಇಲ್ಲಾಂದ್ರ ಜೀವ ತೆಗೀತೀನಿ ಅಂತ ಕುತ್ಗಿಗೆ ಒತ್ತತಾನ. ರಾಕ್ಷಸ ಅವತಾರ ತಾಳತಾನ. ಹೊಡಿಗಿ ತಾಳಲಾರದಕ್ಕ ಹುಂ ಅಂದ್ರ, "ನೋಡಿದಿಲ್ಲ.... ನೀನೇ ಹ್ಯಾಂಗ ಒಪ್ಕೊಂಡಿ. ಸುಳ್ಳ ಯಾಕ ಹೇಳ್ದಿ...? ಮತ್ತ ಮತ್ತ ಬಡಿತಾನ. ಬಯಲ್‌ಕಡಿಗಿ (ಶೌಚಾಲಯಕ್ಕೆ) ಹೋದನ್ರೂ ಹಿಂದೇ ಬರ್ತಾನ. ಅಂವ ಹೊರಗ ಹೋದನ್ರೂ ನನಗ್ನೂ ತನ್ನ ಸಂಗಡ ಕರ್ಕೊಂಡ್ ಹೋಗ್ತಾನ. ಈ ನರಕ ಸಾಕಾಗ್ಯಾದ. ಮೂರು ನಾಲ್ಕು ಸಾರಿ ಊರವ್ರು ತವರಿನವ್ರು ಪಂಚಾಯ್ತಿ ಮಾಡ್ಯಾರ. ಎಲ್ಲರ ಮುಂದ ತನಗ ಹೆಣ್ತಿಬೇಕು. ಚಲೋ ನೋಡ್ಕೋತಿನಿ. ಹೆಣ್ತಿ ಅಂದ್ರ ಗಂಡನ ಜೋಡಿ ರಾತ್ರಿ ಕಳೀಲೇಬೇಕಲ್ಲ. ಆಕಿ ಒಲ್ಲೆಂತಾಳ" ಅಂತ ಹೇಳ್ತಾನ. ನೆರದ ಮಂದಿನೂ ನಕ್ಕು" ಬಿಡೇ ತಂಗಿ, ಸಣ್ಣ ಕೂಸಿನಂಗ ಮಾಡಬಾರದು. ಗಂಡ ಅಲ್ಲೇನು? ತಾಳ್ಕೋಬೇಕು" ಅಂತ ಪಂಚಾಯ್ತಿ ಮಾಡಿ ಗಂಡನ ಜೋಡಿ ಕಳಸ್ತಾರ. ನನ್ನ ಒಳಗಿನ ಗಾಯ ಯಾರಿಗ್ನೂ ಕಾಣವಲ್ಲದು. ಒಮ್ಮೆ ಎಣ್ಣೆ ಕುಡದೀನಿ....."ತನ್ನ ತಮ್ಮನ ಮ್ಯಾಲ ಕೇಸ್ ಮಾಡಬ್ಯಾಡ" ಅಂತ ಭಾವ ಬಂದು ಕಾಲ ಹಿಡದನು. ನಾ ಏನ್ ಮಾಡ್ಲಿ.....? ನನ್ನ ಕಾಲ ಮ್ಯಾಲ ನಾ ನಿಂತು ಬದುಕು ಮಾಡ್ತೀನಿ. ನಂಗ ಒಂದ್ ಹಾದಿ ತೋರಸ್ರಿ..."

ಬಿಡುಗಡೆಯ ಭಾವ

ಹೀಗೆ ಯಲ್ಲಮ್ಮ ಒಂದೇ ಸವನೆ ಮಾತಾಡುತ್ತ ಮಾತಾಡುತ್ತ ಬಿಡುಗಡೆಯ ಭಾವದಲ್ಲಿ ಹರುರಾಗುತ್ತಿದ್ದಳು. "ಯಲ್ಲಮ್ಮ ನಿನಗ ಬಟ್ಟೆ ಹೊಲಿಲಾಕ ಬರ್ತದ"? ಕೇಳಿದೆ. "ಇಲ್ರಿ. ಆದ್ರ ಕಲಿತೀನಿ" ತುಂಬು ವಿಶ್ವಾಸದಿಂದ ನುಡಿದಳು. ಅವಳ ಹೆಗಲು ತಟ್ಟಿ ಹೇಳಿದೆ. "ಆಯ್ತು. ಚಿಂತಿ ಮಾಡಬ್ಯಾಡ. ನಿಮ್ಮ ನ್ಯಾಗ ಹಳಿ ಹೊಲಿಗಿ ಮಷಿನ್ ಇದ್ರ ಧೂಳ ತೆಗೆದು ರಿಪೇರಿ ಮಾಡು ಮುಂದಿನ ವಾರ ಮತ್ತ ಬಾ" ಅವಳು ಅದಮ್ಯ ಚೈತನ್ಯ ಸಂಚಯಿಸಿಗೊಂಡಂತೆ "ಹೂಂ...ರೀ" ಅಂದಳು.

ಮುಂದೆರಡು ದಿನಗಳಲ್ಲಿ ಯಲ್ಲಮ್ಮ ಫೋನ್ ಮಾಡಿದಳು. ಅವಳು ಎಣ್ಣೆ ಕುಡದಾಗ ಮಾಡಿದ ಕೇಸಿನಿಂದ ಈಗ ಪೊಲೀಸರು ಗಂಡಗ ಹಿಡದಿದ್ದರಂತ. ಬೇಲ್ ಮ್ಯಾಲ ಹೊರಗ ಬಂದಾನ. ಇನ್ಮುಂದ ಹಾಂಗ ಮಾಡೋದಿಲ್ಲ ಹೊಳ್ಳಿ ಬಾ ಅಂತ ಕರದನು. ಆದ್ರ ತನಗ ಸಾಧ್ಯಾನೇ ಇಲ್ಲ ಅಂದಿನಿ. ತನ್ನ ಎರಡು ಮಕ್ಕಳ ಸಲುವಾಗಿ ಮತ್ತ ಸ್ವತ: ತನ್ನದೇ ಸಲುವಾಗಿ ಬದುಕಬೇಕನಸ್ತದ. ಹೊಲಿಗಿ ಕಲಿಲಾಕ ಸುರು ಮಾಡಿನಿ... ಯಲ್ಲಮ್ಮ ಹೇಳುತ್ತಲೇ ಇದ್ದಳು.....

'ಪ್ರೊವೋಕ್ಡ್' ಕೊನೆಯ ಸೀನು. ಕಿರಣ' ಕೋರ್ಟಿನಲ್ಲಿ ಒಂದು ಹಂತದ ನ್ಯಾಯ ದೊರೆತು ಜೀವಾವಧಿ ಶಿಕ್ಷೆ ಕಡಿಮೆಯಾಗಿ ಮೂರು ವರ್ಷಕ್ಕಿಳಿದು, ದೌರ್ಜನ್ಯ ಸಹನೆಯ ಕಟ್ಟೆಯೊಡೆದು ಮಾನಸಿಕ ಒತ್ತಡದಲ್ಲಿ ಘಟಿಸಿದ ಕೊಲೆಯದಾಗಿದೆ ಎಂಧಾಗಿ, ಮೂರು ವರ್ಷದ ತರುವಾಯ ಕಿರಣ ಮಕ್ಕಳಿಬ್ಬರನ್ನು ನೀಟಾಗಿಸಿ ಶಾಲೆಗೆ ಕಳಿಸುತ್ತಿದ್ದಳು. "ಯಲ್ಲಮ್ಮ ಕಿರಣ, ಅವಳು ಇವಳು ಹೆಣ್ಣಾಗಿ ನೊಂದವರು ಕೈಗೆ ಕೈ ಕೂಡಿಸಿದರೆ ಹೊಸ ಜಗತ್ತು ನಮ್ಮದು..."

ಮಂಗಳೂರು ವಿ.ವಿ........

ಪುಟ 5 ರಿಂದ

ಕೃತಿ. ಹಲವಾರು ಭಾಷೆಗಳಿಗೆ ಅನುವಾದಗೊಂಡು ವಿಶ್ವಮಾನ್ಯತೆ ಗಳಿಸಿದೆ. ಡಾ.ಚಂದ್ರಶೇಖರ ಕಂಬಾರರ ಪ್ರಕಾರ, ಸಂಸ್ಕಾರ ಒಂದು ಜನಾಂಗದ ನಂಬಿಕೆ, ಸಂಪ್ರದಾಯಗಳ ಒಟ್ಟು ಆಶೋತ್ತರ, ಸಿದ್ಧಿ ಸಾಧನೆಗಳ ಮೌಲಿಕತೆ ಸಂದರ್ಭದಲ್ಲಿ ನಡೆದ ಆತ್ಮಶೋಧನೆ.

ಕನ್ನಡದ ಶ್ರೇಷ್ಠ ವಿಮರ್ಶಕ ಡಾ.ಶಾಂತಿನಾಥ ದೇಸಾಯಿ ಅವರ ಪ್ರಕಾರ, "ಸಾಹಿತ್ಯರಂಗದಲ್ಲಿ ಕನ್ನಡದ ಪ್ರತಿನಿಧಿಯಾಗಿ ಬೆಳಗಬಲ್ಲ ಕೆಲವೇ ಕೃತಿಗಳಲ್ಲಿ 'ಸಂಸ್ಕಾರ' ಒಂದಾಗಿದೆ ಎಂದು ಖಚಿತವಾಗಿ ಹೇಳಬಹುದು.

ಈ ಕೃತಿ ಸಿನೆಮಾವಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿದೆ. ಇಂತಹ ಒಂದು ಅತ್ಯುತ್ತಮ ಕೃತಿ ಕನ್ನಡಿಗರಾದ ಅನಂತಮೂರ್ತಿ ರಚಿಸಿದ್ದು ಎಂಬುದು ಕನ್ನಡಿಗರಿಗೆ ಹೆಮ್ಮೆಯ ವಿಚಾರ.

ಸಂಸ್ಕಾರದಲ್ಲಿ ಲೈಂಗಿಕ ವಿಚಾರಗಳ ವರ್ಣನೆಗಳು ಆ ಕೃತಿಯ ಮೂಲ ರೂಪ, ವಸ್ತು ಮತ್ತು ಸೌಂದರ್ಯ ಬೋಧೆ ಹಾಗೂ ಕಲಾಕೃತಿಯ ಅಂಗವಾಗಿ ಬಂದಿರುತ್ತದೆ. ಯಾವುದೇ ಶ್ರೇಷ್ಠ ಕಲಾಕೃತಿಯಿಂದ ಕೆಲವೊಂದು ಭಾಗಗಳನ್ನು ಅಥವಾ ಸಾಲುಗಳನ್ನು ಪ್ರತ್ಯೇಕಿಸಿ ನೋಡುವುದು ಒಂದು ಕೃತಿಗೆ ಬಗೆಯುವ ಅಪಚಾರ. ಈ ಹಿನ್ನೆಲೆಯಲ್ಲಿ 'ಸಂಸ್ಕಾರ' ಕೃತಿಯಲ್ಲಿ ಇದೆ ಎನ್ನುವ ಆರೋಪಗಳನ್ನು ಹಿಂದಿ ಶೈಕ್ಷಣಿಕ ಮಂಡಳಿ ಒಪ್ಪುವುದಿಲ್ಲ.


ಈ ಪಠ್ಯ(ವಿವರವಾದ ಅಧ್ಯಯನ ಅಗತ್ಯವಿಲ್ಲದ) 'non detail' ನೆಲೆಯಲ್ಲಷ್ಟೇ ಕಲಿಸಲಾಗುತ್ತಿದೆ. ಹಾಗಾಗಿ ಕಾದಂಬರಿಯ ಸಣ್ಣಪುಟ್ಟ ವಿವರಗಳು ಮುಖ್ಯವಾಗುವುದಿಲ್ಲ. ಬದಲಾಗಿ ಮಹಾನ್ ಕಲಾಕೃತಿ 'ಸಂಸ್ಕಾರ'ದ ಒಟ್ಟು ಆಶಯ, ವಸ್ತು, ಕಲಾತ್ಮಕ ವಿಚಾರಗಳು, ರೂಪ ಮತ್ತು ಬಂಧ ಹಾಗೂ ಅದರಲ್ಲಿ ವ್ಯಕ್ತವಾದ ಸಾಂಸ್ಕೃತಿಕ ವಿಕಾಸದ ಮಜಲುಗಳು ಮುಖ್ಯವಾಗುತ್ತವೆ.

ಕೊನೆವರೆಗೂ ಮುಂದುವರಿದ ಒತ್ತಡ ಈ ಪಠ್ಯವನ್ನು ಹಿಂತೆಗೆಯುವ ನಿಟ್ಟಿನಲ್ಲಿ ಒತ್ತಡ ಕೊನೆವರೆಗೂ ಮುಂದುವರಿದಿತ್ತು. ಕನಿಷ್ಠ ಸಾಹಿತ್ಯದ ಗಂಧಗಾಳಿ ಇಲ್ಲದ ಮೌಢ್ಯವನ್ನೇ ಬಂಡವಾಳವನ್ನಾಗಿ ಮಾಡಿಕೊಂಡಿರುವ ಹಿಂದಿ ಶಿಕ್ಷಕರು, ಕ್ಷುಲ್ಲಕ ವಿಚಾರವನ್ನು ಮುಂದಿಟ್ಟುಕೊಂಡು ವಿವಾದ ಎಬ್ಬಿಸಿ ಕೊನೆಗೆ ಹಾಸ್ಯಾಸ್ಪದವಾಗಿದ್ದಾರೆ.

'ನಲಿಯಲು ಗೊತ್ತಿಲ್ಲದವರು ನೆಲ ಡೊಂಕು ಅಂದರು' ಎಂಬ ಗಾದೆಯಂತೆ ಆಯಿತು ಎಂದು ಸಾಹಿತ್ಯಪ್ರಿಯರು ಗೇಲಿ ಮಾಡುತ್ತಿದ್ದಾರೆ. ಶಿಕ್ಷಕರ ಸಾಹಿತ್ಯಿಕವಲ್ಲದ ಸಾಹಿತ್ಯೇತರ ಪಿತೂರಿಯನ್ನು ಹಿಮ್ಮೆಟ್ಟಿಸಿರುವ ಮೂಲಕ ವಿ.ವಿ.ಯ ಶೈಕ್ಷಣಿಕ ಮಂಡಳಿ ಈ ವಿಕೃತ ಹಿಂದಿ ಶಿಕ್ಷಕರ ಮುಖಕ್ಕೆ ಮಂಗಳಾರತಿ ಮಾಡಿದೆ.

ತ್ರಿಪುರಾ ರಾಜ್ಯ ಚುನಾವಣೆಗೆ ಸಿದ್ದವಾಗಿದೆ. ಸತತ ನಾಲ್ಕನೆ ಬಾರಿಗೆ ಎಡರಂಗದ ಗೆಲುವಿಗೆ ವೇದಿಕೆ ಸಜ್ಜಾಗಿದೆ. ಎಡರಂಗ ಸಾಗಿಬಂದ ದುರ್ಗಮ ಹಾದಿಯ ಕುರಿತು ಒಂದು ಅವಲೋಕನ ಇಲ್ಲಿದೆ.

ತ್ರಿಪುರ ಎಡರಂಗ ಮತ್ತೊಂದು ಗೆಲುವಿನತ್ತ



ಈಶಾನ್ಯ ಭಾರತದ ಪುಟ್ಟ ರಾಜ್ಯ ತ್ರಿಪುರಾದಲ್ಲಿ 10ನೇ ವಿಧಾನಸಭೆ ಅಸ್ತಿತ್ವಕ್ಕಾಗಿ ಇದೇ ಫೆಬ್ರವರಿ-23 ರಂದು ಚುನಾವಣೆಗಳು ನಡೆಯುತ್ತಿವೆ.

ಒಂದೆಡೆ ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳನ್ನು ಜಾರಿ ಮಾಡುತ್ತಾ ಜನಸಾಮಾನ್ಯರ ಬದುಕನ್ನು ಸಂಕಷ್ಟಕ್ಕೆ ಯುಪಿಎ ನೇತೃತ್ವದ ಕೇಂದ್ರ ಸರ್ಕಾರ ದೂಡಿರುವ ಸನ್ನಿವೇಶದಲ್ಲಿ, ಭಾರತದ ಸಾರ್ವಭೌಮತ್ವದ ಮೇಲೆ ಅಮೇರಿಕಾದಂತಹ ಸಾಮ್ರಾಜ್ಯಗಳು ದಾಳಿ ನಡೆಸಲು ಹುನ್ನಾರ ನಡೆಸುವ ಹವಣಿಕೆಯಲ್ಲಿರುವ ಈ ಸಂದರ್ಭದಲ್ಲಿ ಈ ಚುನಾವಣೆ ನಡೆಯುತ್ತಿವೆ. ಮತ್ತೊಂದೆಡೆ ಹಿಂದುತ್ವದ ಹೆಸರಲ್ಲಿ ಜನರನ್ನು ವಿಭಜಿಸಿ ಕೇಂದ್ರದಲ್ಲಿ ಅಧಿಕಾರಕ್ಕೇರಬೇಕೆಂದು ಬಿಜೆಪಿ ಹವಣಿಕೆಯಲ್ಲಿದೆ. ಸಾಮ್ರಾಜ್ಯಶಾಹಿ ಪ್ರೇರಿತ ಪ್ರತ್ಯೇಕತಾವಾದಿಗಳ ಚಟುವಟಿಕೆಗಳ ತೀವ್ರಗೊಂಡಿವೆ. ಇಂತಹ ಗಂಭೀರ ಸನ್ನಿವೇಶದಲ್ಲಿ ಈ ಚುನಾವಣೆಗಳು ನಡೆಯುತ್ತಿರುವುದರಿಂದ ಇದಕ್ಕೆ ಅತಿಯಾದ ಮಹತ್ವ ಬಂದಿದೆ.

ಗಡಿ ರಾಜ್ಯದ ತೊಂದರೆ

ಬಹುಪಾಲು ಬಾಂಗ್ಲಾ ದೇಶದ ಗಡಿಯಿಂದ ಸುತ್ತುವರಿದಿರುವ ಈ ಪುಟ್ಟ ರಾಜ್ಯದಲ್ಲಿ ನಿರಾಶ್ರಿತರದ್ದೆ ಒಂದು ಬಹುದೊಡ್ಡ ಸಮಸ್ಯೆಯಾಗಿದೆ. ಪೂರ್ವ ಬಂಗಾಳದ ಕಡೆಯಿಂದಾಗಿ ತ್ರಿಪುರಾಕ್ಕೆ ಬಾರಿ ಪ್ರಮಾಣದಲ್ಲಿ ಜನರು ವಲಸೆ ಬರುತ್ತಿರುವ ಪರಿಣಾಮ ತ್ರಿಪುರಾದ ಮೂಲ ಜನರಾದ ಆದಿವಾಸಿ ಬುಡಕಟ್ಟು ಜನರ ಸಂಖ್ಯೆ ನಿರಂತರವಾಗಿ ಕ್ಷೀಣಿಸುತ್ತಿದೆ.

ಕೇಂದ್ರದಲ್ಲಿ ಮತ್ತು ತ್ರಿಪುರಾದಲ್ಲಿ ಹಲವು ವರ್ಷಗಳ ಕಾಲ ಅಧಿಕಾರ ನಡೆಸಿದ ಕಾಂಗ್ರೆಸ್ ಸರ್ಕಾರ ನಿರಾಶ್ರಿತರಿಗೆ ಪುನರ್ ವಸತಿ ಕಲ್ಪಿಸಲು ಮತ್ತು ಬುಡಕಟ್ಟು ಜನರ ಭೂಮಿ ಹಕ್ಕನ್ನು ಸಂರಕ್ಷಿಸಲು ಹಾಗೂ ಅವರ ಅಭಿವೃದ್ಧಿಗೆ ಯಾವುದೇ ಅಗತ್ಯ ಕ್ರಮ ಕೈಗೊಳ್ಳಲಿಲ್ಲ. ಬದಲಾಗಿ ನಿರಾಶ್ರಿತರ ವಿರುದ್ಧ ಬುಡಕಟ್ಟು ಜನರನ್ನು ಎತ್ತಿಕಟ್ಟುವ ಕೆಲಸ ಮಾಡಿತು.

ಆದರೆ ತ್ರಿಪುರದ ಎಡಪಂಥೀಯರು ಬುಡಕಟ್ಟು ಜನರ ಹಕ್ಕುಗಳ ರಕ್ಷಣೆಗಾಗಿ ಮತ್ತು ನಿರಾಶ್ರಿತರಿಗೆ ನೆರವಾದ ಪುನರ್ ವಸತಿ ಬೇಡಿಕೆ ಮುಂದಿಟ್ಟು ಅದಕ್ಕಾಗಿ ಪ್ರತ್ಯೇಕ ಸ್ವಾಯತ್ತ ಮಂಡಳಿ ರಚನೆಯಾಗಿ, ಆದಿವಾಸಿ ಜನರ ಶಿಕ್ಷಣ, ಉದ್ಯೋಗ, ಅಭಿವೃದ್ಧಿ ಪ್ರಶ್ನೆಯನ್ನೆತ್ತಿ ನಿರಂತರ ಹೋರಾಟ ನಡೆಸಿದ ಪರಿಣಾಮವಾಗಿ ತ್ರಿಪುರಾದ ಜನತೆ 1978 ರಲ್ಲಿ 60 ವಿಧಾನಸಭಾ ಕ್ಷೇತ್ರಗಳ ಪೈಕಿ ಎಡರಂಗದ ಅಭ್ಯರ್ಥಿಗಳನ್ನು 56 ಕ್ಷೇತ್ರಗಳಲ್ಲಿ ಗೆಲ್ಲಿಸಿ ಅಭೂತಪೂರ್ವ ಬಹುಮತ ನೀಡಿದರು.

ಅಭಿವೃದ್ಧಿಯತ್ತ ತ್ರಿಪುರ:

1978 ಮತ್ತು 1983ರ ಎರಡನೇ ಅವಧಿಗೆ ಎಡರಂಗಕ್ಕೆ ಬಾರಿ ಬೆಂಬಲವನ್ನು ತ್ರಿಪುರಾದ ಜನತೆ ನೀಡಿದ ಪರಿಣಾಮ ಎಡರಂಗ ಸರ್ಕಾರ ಬಾರಿ ಪ್ರಮಾಣದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು, ಪಂಚಾಯತ್‌ಗಳ ಮೂಲಕ ಅಧಿಕಾರ ವಿಕೇಂದ್ರೀಕರಣವನ್ನು ಜಾರಿಗೊಳಿಸಲು ಸಾಧ್ಯವಾಯಿತು. ಸ್ವಾಯತ್ತ ಮಂಡಳಿಗಳನ್ನು ರಚಿಸಿದ್ದು, ಮಾತ್ರವಲ್ಲ ಹಿಂದಿನ ಕಾಂಗ್ರೆಸ್ ಸರ್ಕಾರ ಅವಧಿಯಲ್ಲಿ ಜನರು ಹಸಿವಿನಿಂದ ಸಾಯುತ್ತಿದ್ದ ಸನ್ನಿವೇಶವನ್ನು ಬದಲಾಯಿಸಿ, ಬಡ ಜನರಿಗಾಗಿ "ಆಹಾರಕ್ಕಾಗಿ ಕೆಲಸ" ಯೋಜನೆಗಳನ್ನು ಜಾರಿಗೊಳಿಸಲಾಯಿತು. ಇದಲ್ಲದೆ ಇದೇ ಅವಧಿಯಲ್ಲೇ ತ್ರಿಪುರಾ ಎಡರಂಗ ಸರ್ಕಾರ ದೇಶದಲ್ಲಿ ಮೊಟ್ಟಮೊದಲ ಬಾರಿಗೆ 'ಪ್ರಾಥಮಿಕ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟ ಯೋಜನೆಯನ್ನು ಜಾರಿಗೊಳಿಸಿತು. ರೈಲ್ವೆ ವಿಸ್ತರಣೆ ಗ್ಯಾಸ್ ಆಧಾರಿತ ವಿದ್ಯುತ್ ಸ್ಥಾವರ ಸ್ಥಾಪನೆಯಾಗಿದ್ದು, ಕೂಡ ಇದೇ ಅವಧಿಯಲ್ಲೇ.

ಕಾಂಗ್ರೆಸ್–ಟಿ.ಯು.ಜೆ.ಎಸ್.ಪಿತೂರಿ– ನೂರಾರು ಜನರ ಹತ್ಯೆ:

ಆದರೆ ಜನರಿಂದ ತಿರಸ್ಕೃತಗೊಂಡಿದ್ದ ಕಾಂಗ್ರೆಸ್ ಮತ್ತು ಮಿತ್ರಕೂಟಗಳು ಹಾಗೂ ಸ್ವಾರ್ಥ ಹಿತಾಸಕ್ತಿ ಹೊಂದಿದ್ದ ಪ್ರತ್ಯೇಕತವಾದಿ ಗುಂಪುಗಳು ಎಡರಂಗದ ವಿರುದ್ಧ ಪ್ರಜಾಪ್ರಭುತ್ವ ವಿರೋಧಿ ವಿಧಾನಗಳ ಮೂಲಕ ಪಿತೂರಿಯನ್ನು ಆರಂಭಿಸಿದರು.

ಇದರ ಭಾಗವಾಗಿಯೇ ಅಮೇರಿಕನ್ 'ಸಿಐಎ' ಆಪರೇಷನ್ ಬ್ರಹ್ಮಪುತ್ರ ಯೋಜನೆಗಳ' ರೂಪಿಸುವ ಮೂಲಕ ಈಶಾನ್ಯ ಭಾರತವನ್ನು ಭಾರತದಿಂದಲೇ ಬೇರ್ಪಡಿಸುವ ಪ್ರತ್ಯೇಕತಾ ಚಳುವಳಿಗೆ ಸಂಚು ಮಾಡಿತು. ಕಾಂಗ್ರೆಸ್ ಪ್ರತ್ಯೇಕವಾದಿ ಟಿಯುಜೆಎಸ್ ಜೊತೆ ಸೇರಿ ಪ್ರತ್ಯೇಕತೆ ಚಳುವಳಿಗೆ ಕುಮ್ಮಕ್ಕು ನೀಡಿತು ಮಾತ್ರವಲ್ಲ ತ್ರಿಪುರಾದಲ್ಲಿರುವ ಎಲ್ಲಾ ನಿರಾಶ್ರಿತರನ್ನು ತ್ರಿಪುರಾದಿಂದ ಹೊರ ಹಾಕಬೇಕೆಂಬ ಘೋಷಣೆ ನೀಡಿದವು. ಕಾಂಗ್ರೆಸ್ ಮತ್ತು ಟಿಯುಜೆಎಸ್‌ಗಳು ಗುಪ್ತವಾಗಿ ಟಿಎನ್‌ಯು ಎಂಬ ಪ್ರತ್ಯೇಕವಾದಿ ಸಂಘಟನೆಯನ್ನು ಹುಟ್ಟು ಹಾಕಿ ಅದರಲ್ಲಿ ಯುವಜನರನ್ನು ಪ್ರತ್ಯೇಕತೆ ಚಳುವಳಿ ಪಾಲ್ಗೊಳಿಸಲು ಅದಕ್ಕಾಗಿ ಅವರನ್ನು ಬಾಂಗ್ಲಾದೇಶದ ಚಿತ್ತಗಾಂಗ್ ಬೆಟ್ಟಗಳಲ್ಲಿ ತರಬೇತಿಗಾಗಿ ಕಳಿಸಲಾಯಿತು. ಇದರ ಪರಿಣಾಮವಾಗಿ 1980 ರಲ್ಲಿ ಸಿಪಿಐ(ಎಂ) ಮುಖಂಡರು ಹಾಗೂ ಕಾರ್ಯಕರ್ತರ ವಿರುದ್ಧ ಬಾರಿ ಪ್ರಮಾಣದ ಧಾಳಿಗಳನ್ನು ನಡೆಸಿ ಕೊಲ್ಲಲಾಯಿತು. ಆದಾಗ್ಯೂ ಬುಡಕಟ್ಟು ಜನರು ಮತ್ತು ನಿರಾಶ್ರಿತರೂ ಧೃತಿಗೆಡದೆ ಸೌಹಾರ್ದತೆ ಮೆರೆಯಲು ಸಿಪಿಐ(ಎಂ) ಶ್ರಮಿಸಿತು. ನಂತರ 1988ರ ಚುನಾವಣೆಗೆ ಕೇವಲ 7 ದಿನ ಪೂರ್ವದಲ್ಲೇ ಅಂದಿನ ಪ್ರಧಾನಿ ರಾಜೀವ್‌ಗಾಂಧಿ ಕುಮ್ಮಕ್ಕಿನ ಪರಿಣಾಮವಾಗಿ ಟಿಎನ್‌ವಿಯು, ಮಹಿಳೆಯರು, ಮಕ್ಕಳು ಹಾಗೂ ವೃದ್ಧರೂ ಸೇರಿದಂತೆ ಒಟ್ಟು 90 ಅಮಾಯಕರನ್ನು ನಿರ್ದಯವಾಗಿ ಕೊಚ್ಚಿ ಹಾಕಿ ಕೊಂದರು. ಆದರೆ ಕೊಲೆ ಆರೋಪವನ್ನು ಅಂದಿನ ಎಡರಂಗದ ಸರ್ಕಾರದ ಮೇಲೆ ಹೇರಿ ರಾಜ್ಯ ಸರ್ಕಾರದ ಗಮನಕ್ಕೂ ತರದಂತೆ 'ಗಲಭೆಗ್ರಸ್ಥ ಪ್ರದೇಶ ಕಾಯ್ದೆ' ಅನ್ವಯ ಕೇಂದ್ರದ ಮೀಸಲು ತುಕಡಿಯನ್ನು ರಾಜೀವ್‌ಗಾಂಧಿ, ತ್ರಿಪುರಾಕ್ಕೆ ಕಳಿಸಿದರು ಮಾತ್ರವಲ್ಲ ಚುನಾವಣೆಯಲ್ಲಿ ಎಡರಂಗವನ್ನು ಸೋಲಿಸಲು ಬೇಕಾದ ರಾಜ್ಯ ಅಧಿಕಾರ ದುರುಪಯೋಗ ಮಾಡಿ ಕಾಂಗ್ರೆಸ್ -ಟಿಯುಜೆಎಸ್ ಅಧಿಕಾರ ಬರಲು ಷಡ್ಯಂತ್ರ ರೂಪಿಸಲಾಯಿತು. ರಾಜ್ಯದಲ್ಲಿ ಈ ರೀತಿಯ ಅರಾಜಕತೆ ಸೃಷ್ಟಿಸಿ-ಕಾಂಗ್ರೆಸ್ ಅಧಿಕಾರಕ್ಕೆ ಬರಲು ಕಾರಣವಾದ ಟಿಎನ್‌ವಿ ಹಂತಕ ನಾಯಕ ಬಿಜೋಮಿ ಹರಂಗವಾಲ್ ಮತ್ತವನ ಸ್ನೇಹಿತರಿಗೆ ರಾಜೀವ್‌ಗಾಂಧಿ ಬಾರಿ ಉಡುಗೊರೆಗಳನ್ನು ನೀಡಿದರು.

ಅರಣ್ಯ ನ್ಯಾಯ

1988ರಿಂದ 1992 ರವರೆಗೆ ಕಾಂಗ್ರೆಸ್‌ನ-ಟಿಯುಜೆಎಸ್ ಆಡಳಿತ ತ್ರಿಪುರಾದಲ್ಲಿ ಅರಣ್ಯ ನ್ಯಾಯವನ್ನು ಸ್ಥಾಪಿಸಿ, ಬರ್ಬರ ಇತಿಹಾಸವನ್ನು ಸೃಷ್ಟಿಸಿತು. ಈ ಅವಧಿಯಲ್ಲಿ ವಿರೋಧಪಕ್ಷಕ್ಕೆ ತನ್ನ ವಿಚಾರವನ್ನು ಪ್ರತಿಪಾದಿಸುವ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಯಿತು. ಜೀವಿಸುವ ಹಕ್ಕಿಲ್ಲದೆ ನಾಗರೀಕರು ಯಾವುದೇ ಸಂರಕ್ಷಣೆಯಿಲ್ಲದೆ ಮಹಿಳೆಯರು ಬದುಕುವ ಸ್ಥಿತಿ ಸೃಷ್ಟಿಸಲಾಗಿತ್ತು. ಸಿಪಿಐ(ಎಂ) ಮುಖಂಡರು, ಕಾರ್ಯಕರ್ತರು ಹುಡುಕಿ ಹುಡುಕಿ ಕೊಲ್ಲಲಾಯಿತು. ದೌರ್ಜನ್ಯ, ಅತ್ಯಾಚಾರ ನಡೆಸಲಾಯಿತು. ಈ ಬಗ್ಗೆ ಕನಿಷ್ಠ ಎಫ್‌ಐಆರ್ ದಾಖಲಿಸಲು ಪೋಲಿಸರು ನಿರಾಕರಿಸಿದರು. ಫೆಬ್ರವರಿ-5,1988 ರಿಂದ 1991 ಡಿಸೆಂಬರ್ -31 ಅವಧಿಯಲ್ಲಿ 682 ಕೊಲೆಗಳು 370 ಅತ್ಯಾಚಾರಗಳು ನಡೆದಿವೆ ಎಂದು ಸ್ವತಃ ಸರ್ಕಾರವೇ ರಾಜ್ಯ ವಿಧಾನಸಭೆಯಲ್ಲಿ ಅಂಕಿ-ಅಂಶ ನೀಡಿತ್ತು. ಕಾಂಗ್ರೆಸ್-ಟಿಯುಜೆಎಸ್ ಸಮ್ಮಿಶ್ರ ಸರ್ಕಾರದ ಈ ಆಡಳಿತದಲ್ಲಿ ಸುಮಾರು 200 ಸಿಪಿಐ(ಎಂ) ಮತ್ತು ಸಾಮೂಹಿಕ ಸಂಘಟನೆಗಳ ಕಛೇರಿಗಳನ್ನು ಧ್ವಂಸಗೊಳಿಸಿ, ನಾಶಪಡಿಸಲಾಗಿತ್ತು. ಮಾತ್ರವಲ್ಲ, ಈಗಿನ ತ್ರಿಪುರಾ ಮುಖ್ಯಮಂತ್ರಿ, ಮಾಣಿಕ್ ಸರ್ಕಾರ್ ಸಾರಿದಂತೆ 75 ಜನ ಮುಖ್ಯಮಂತ್ರಿ ಒಳಗೊಂಡು ಮುಖಂಡರ ಹತ್ಯೆಗೆ ವಿಫಲ ಯತ್ನ ನಡೆಸಲಾಗಿತ್ತು. ಒಟ್ಟಿನಲ್ಲಿ ಈ ಅವಧಿಯಲ್ಲಿ ಅರೆ-ಫ್ಯಾಶಿಸ್ಟ್ ದಬ್ಬಾಳಿಕೆಯನ್ನು ಎಗ್ಗಿಲ್ಲದೆ ಹರಿಯಬಿಟ್ಟು ಇಡೀ ತ್ರಿಪುರಾದಲ್ಲಿ ರಕ್ತ ಸಿಕ್ತ ಇತಿಹಾಸವನ್ನು ಸೃಷ್ಟಿಸಲಾಯಿತು.

ಇಷ್ಟೆಲ್ಲಾ ಆದ ಮೇಲೆ, ಕಾಂಗ್ರೆಸ್-ಟಿಯುಜೆಎಸ್, ಸಮ್ಮಿಶ್ರ ಆಡಳಿತ ಮತ್ತು ಸಾಮಾನ್ಯ ಭ್ರಷ್ಟಾಚಾರದಿಂದ ಸುತ್ತುವರೆದಿತ್ತು. ಪುರಸಭೆ-ನಗರಸಭೆ- ಪಂಚಾಯತ್ ಸಹಕಾರಿ ಕ್ಷೇತ್ರದ ಎಲ್ಲಾ ಆಡಳಿತಗಳ ಎಲ್ಲಾ ಹಕ್ಕುಗಳನ್ನು ದಮನ ಮಾಡಲಾಗಿತ್ತು. ಇನ್ನು ಅಸಂಘಟಿತ ಆದಿವಾಸಿಗಳ ಮೇಲೆ ದಾಳಿ-ದಬ್ಬಾಳಿಕೆಗಳು ಎಗ್ಗಿಲ್ಲದೆ ನಡೆದವು. ಅವರ ಪ್ರತಿಕಾರದ ಹಲ್ಲೆಗಳ ಈ ಧಾಳಿ-ಅತ್ಯಾಚಾರಗಳ ಸ್ವತಃ ಕಾಂಗ್ರೆಸ್ ಬೆಂಬಲಿತ ಕುಟುಂಬಗಳು ಪಾರಾಗಲಿಲ್ಲ.

ಭರವಸೆ ಮೂಡಿಸಿದ ಬದಲಾವಣೆ:


ಆದರೆ 1993ರಲ್ಲಿ ತ್ರಿಪುರಾದಲ್ಲಿ ಪ್ರಜಾಪ್ರಭುತ್ವ ಪರ ಜನತೆಯ 'ಪ್ರತಿಯೊಬ್ಬರ ಮತವೂ ತಮ್ಮ ಸ್ವಂತ ಮತವಾಗಲಿ' ಎಂಬ ಘೋಷಣೆಯೊಂದಿಗೆ ಎಡರಂಗದ ಗೆಲುವಿಗೆ ಕಾರಣವಾಯ್ತು. ಆ ಮೂಲಕ ಐದು ವರ್ಷದ ಬರ್ಬರ ಆಡಳಿತಕ್ಕೆ ಜನರು ಅಂತ್ಯ ಹಾಡಿದ್ದರು. ಅಲ್ಲಿಯವರೆಗೆ ಸುಮಾರು 400ಕ್ಕಿಂತ ಅಧಿಕ ಸಿಪಿಐ(ಎಂ) ನಾಯಕರು, ಕಾರ್ಯಕರ್ತರ ಹತ್ಯೆಯಾಗಿದ್ದರು. ಆದಾಗ್ಯೂ ಸಿಪಿಐ(ಎಂ) ಸರ್ಕಾರ ಹದಗೆಟ್ಟ ಇಡೀ ತ್ರಿಪುರಾವನ್ನು ಪುನರ್‌ನಿರ್ಮಿಸುವ ದಿಶೆಯಲ್ಲಿ ಕೆಲಸ ಆರಂಭಿಸಿತು.

ಆದರೆ ಸೋಲುಂಡಿದ್ದ ಕಾಂಗ್ರೆಸ್ ನಾಯಕರು ಮತ್ತೆ ತೀವ್ರ ರೀತಿಯ ಹಿಂಸಾಚಾರವನ್ನು ಹರಿಯಬಿಟ್ಟರು. ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರುವ ಪ್ರಯತ್ನ ಮಾಡಲಾಯಿತು. ಆದಾಗ್ಯೂ ಕೆಲವು ಉಗ್ರಗಾಮಿ ಮುಖಂಡರೂ ಶರಣಾದರೂ, ಬಹುತೇಕ ಮುಖಂಡರು ಭೂಗತರಾಗಿದ್ದರು.

ಪುಟ 15 ಕ್ಕೆ

ಸುದ್ದಿಬಿಂಬ – ಇದು ಪ್ರಜಾವಾಣಿಯಲ್ಲಿ ಕಂಡ ವರದಿ

ತ್ರಿಪುರಾ ಮುಖ್ಯಮಂತ್ರಿ ಖಾತೆಯಲ್ಲಿ ಬರಿ 14 ಸಾವಿರ ರೂಪಾಯಿ



ಮಾಣಿಕ್ ಸರ್ಕಾರ್ ಅವರು ತ್ರಿಪುರಾ ಎಂಬ ಈಶಾನ್ಯ ಭಾರತದ ಪ್ರಾಕೃತಿಕ ಸಂಪದ್ಭರಿತ ಪುಟ್ಟ ರಾಜ್ಯದ ಮುಖ್ಯಮಂತ್ರಿ ಇವರ ಬ್ಯಾಂಕ್ ಖಾತೆಯಲ್ಲಿ ಈಗಿರುವ ಹಣ ಕೇವಲ ರೂ.13,920 ಮಾತ್ರ!

ಆಸ್ತಿ ಸಂಪಾದನೆ ಪಾಪ ಎಂದೇ ಪರಿಗಣಿಸಿ ಶುಭ್ರ ಹಾಗೂ ಪ್ರಾಮಾಣಿಕವಾದ ಸಾರ್ವಜನಿಕ ಜೀವನ ನಡೆಸುತ್ತಿರುವ ಸರ್ಕಾರ್ ಅವರ ಕೈ-ಬಾಯಿ ಸ್ವಚ್ಛ ಎಂಬುದನ್ನು ಅವರ ವಿರೋಧಿಗಳೂ ನಿರ್ವಿವಾದವಾಗಿ ಒಪ್ಪುತ್ತಾರೆ.

ತಾವು ನಂಬಿದ ಕಮ್ಯುನಿಸ್ಟ್ ಪಕ್ಷದ ಮೌಲ್ಯಗಳಿಗೆ ಬದ್ಧರಾಗಿಯೇ ಬದುಕುತ್ತಿರುವ ಮಾಣಿಕ್ ಸರ್ಕಾರ್ ಇನ್ನೊಂದು ತಿಂಗಳು ಕಳೆದರೆ ತ್ರಿಪುರಾದ ಮುಖ್ಯಮಂತ್ರಿಯಾಗಿ ಎರಡನೇ ಅವಧಿ ಪೂರೈಸಲಿದ್ದಾರೆ.

ತ್ರಿಪುರಾ ವಿಧಾನಸಭೆ ಚುನಾವಣೆಗೆ ಮತ್ತೊಮ್ಮೆ ಸ್ಪರ್ಧಿಸುತ್ತಿರುವ ಇವರು, ಬಾಂಗ್ಲಾದೇಶದ ಗಡಿಗೆ ಹೊಂದಿಕೊಂಡಿರುವ ಧನಪುರ ವಿಧಾನಸಭಾ ಕ್ಷೇತ್ರದಲ್ಲಿ ಸದ್ಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ.

ಅವರು ಕಳೆದ ವಾರ ತಮ್ಮ ಆಸ್ತಿ ವಿವರಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಿದ್ದು, ಅಗರ್ತಲಾದ ಎಸ್‌ಬಿಐನಲ್ಲಿ ರೂ.8992.38 ಹಾಗೂ ಯುಕೊ ಬ್ಯಾಂಕ್ ಶಾಖೆಯಲ್ಲಿ ರೂ.4928ಗಳನ್ನು ಹೊಂದಿರುವುದಾಗಿ ತಿಳಿಸಿದ್ದಾರೆ. ಅಂತೆಯೇ ತಮಗೆ ಯಾವುದೇ ಚರಾಸ್ತಿ ಇಲ್ಲವೆಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಸರ್ಕಾರ್ ಅವರ ಆಸ್ತಿ ವಿವರಗಳ ಬಗ್ಗೆ ವಿರೋಧ ಪಕ್ಷದವರ ಯಾವುದೇ ತಕರಾರೂ ಇಲ್ಲ.

ಇವರ ಶುದ್ಧ ಜೀವನವನ್ನು ತ್ರಿಪುರಾ ಕಾಂಗ್ರೆಸ್ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಮೀರ್ ರಂಜನ್ ಬರ್ಮನ್ ಮುಕ್ತಕಂಠದಿಂದಲೇ ಶ್ಲಾಘಿಸಿದ್ದಾರೆ.

ನಂದಿಗ್ರಾಮ ಹಿಂಸಾಚಾರದ ಬಗ್ಗೆ ಮಾನವ ಹಕ್ಕು ಆಯೋಗದ ಎಡಬಿಡಂಗಿ ವರದಿ

ನಂದಿಗ್ರಾಮದ ಐದು ಗ್ರಾಮಗಳ ದೊಡ್ಡ ಪ್ರದೇಶವನ್ನು ಪೋಲೀಸರು ಮತ್ತು ಸರಕಾರದ ಇತರ ಸಂಸ್ಥೆಗಳವರು ಪ್ರವೇಶಿಸದಂತೆ ಬಿಯುಪಿಸಿ ಮತ್ತು ಬೆಂಬಲಿಗರು ತಡೆದರು, ನಂದಿಗ್ರಾಮದಲ್ಲಿ ಯಾವುದೇ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದಿಲ್ಲ ಎಂದು ಹೇಳಿದ ಮೇಲೂ ಚಳುವಳಿಯನ್ನು ಹಿಂತೆಗೆದುಕೊಳ್ಳಲಿಲ್ಲ, ಹಿಂಸಾಚಾರ ಮುಂದುವರೆಯಿತು ಎಂದು ಮಾನವ ಹಕ್ಕು ಆಯೋಗದ ತನಿಖಾಗಾರರು ಒಪ್ಪಿಕೊಂಡರೂ, ವಿರೋಧ ಪಕ್ಷಗಳು ಈ ರೀತಿ ಜನಗಳನ್ನು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗುವಂತೆ ಪ್ರೋತ್ಸಾಹಿಸಬಾರದು ಎಂದಷ್ಟೇ ಅವರಿಗೆ ಬುದ್ಧಿವಾದ ಹೇಳುತ್ತಾರೆ! ಮಾಧ್ಯಮಗಳೂ ನಂದಿಗ್ರಾಮದ ದೊಡ್ಡ ಪ್ರದೇಶದಲ್ಲಿ ನಿರ್ಬಂಧ ಹಾಕಿದ್ದು ಸಂವಿಧಾನ ಬಾಹಿರ ಎಂದು ಒತ್ತಿ ಹೇಳುವ ಕರ್ತವ್ಯ ಪಾಲಿಸುವಲ್ಲಿ ವಿಫಲವಾಗಬಾರದಿತ್ತು ಎಂದೂ ಆಯೋಗದ ವರದಿ ಹೇಳುತ್ತದೆ! ಆದರೂ ಕೊನೆಗೆ ಆಸ್ತಿ-ಪಾಸ್ತಿಗಳ ಹಾನಿಗೆ ಎಡರಂಗ ಸರಕಾರವನ್ನು ಹೊಣೆ ಮಾಡುತ್ತದೆ!

ನಂದಿಗ್ರಾಮ ಹಿಂಸಾಚಾರದ ಬಗ್ಗೆ ರಾಷ್ಟ್ರಿಯ ಮಾನವ ಹಕ್ಕುಗಳ ಆಯೋಗದ ವರದಿ ಪ್ರಕಟವಾಗಿದೆ. ಈ ಹಿಂಸಾಚಾರದಲ್ಲಿ ಜೀವ-ಆಸ್ತಿ ಹಾನಿಯನ್ನು ತಪ್ಪಿಸುವಲ್ಲಿ ಪಶ್ಚಿಮ ಬಂಗಾಳ ರಾಜ್ಯ ಸರಕಾರ ವಿಫಲವಾದ್ದರಿಂದ ಅದು ಹೊಣೆಯಾಗುತ್ತದೆ ಎಂದಿರುವ ಅದು ಇನ್ನೊಂದೆಡೆ ರಾಜಕೀಯ ಪಕ್ಷಗ್ಗಳು/ಗ್ರಾಮಸ್ಥರು ಸರಕಾರದ ನೀತಿಗಳನ್ನು ವಿರೋಧಿಸುವಂತೆ ಕುಮ್ಮಕ್ಕು ನೀಡಿದವು ಎಂದು ಹೇಳಿ ಎಡಬಿಡಂಗಿತನವನ್ನೂ ತೋರಿಸಿದೆ. ಹೀಗೆ ಹೇಳಿದ್ದರೂ ಸಿಪಿಐ(ಎಂ) ಮತ್ತು ಎಡರಂಗವನ್ನು ಹೆಸರಿಸಿರುವ ವರದಿ ಹಿಂಸಾಚಾರಕ್ಕೆ ಅದರ ಪ್ರಕಾರವೇ ಕುಮ್ಮಕ್ಕು ನೀಡಿದ ತೃಣಮೂಲ ಕಾಂಗ್ರೆಸಿನ ಬಗ್ಗೆಯಾಗಲೀ, ಮಾವೋವಾದಿಗಳ ಬಗ್ಗೆಯಾಗಲೀ ಪ್ರಸ್ತಾಪ ಮಾಡಿಲ್ಲ. ವರದಿಯಲ್ಲಿ ಪಕ್ಷಪಾತ ಎಂಬುದು ಎದ್ದು ಕಾಣುವ ಅಂಶ.

ಪರಿಸ್ಥಿತಿ ಗಂಭಿರವಾಗಿದ್ದಾಗ ಬಹಳ ಕಷ್ಟದ ಸನ್ನಿವೇಶದಲ್ಲಿ ಆಯೋಗದ ಮೂವರು ಸದಸ್ಯರ ತಂಡ ನಂದಿಗ್ರಾಮಕ್ಕೆ ಭೇಟಿ ನೀಡಿತಂತೆ. ನಿಜವಾಗಿ ಯಾವಾಗ ಭೇಟಿ ನೀಡಿದರು ಎಂಬುದು ವರದಿಯಲ್ಲಿ ಸ್ಪಷ್ಟವಾಗುವುದಿಲ್ಲ. ತಪ್ಪಿತಸ್ಥರನ್ನು ಗುರುತಿಸುವಲ್ಲಿ ಬಹಳಷ್ಟು ಹಿಂಜರಿಕೆ ಪ್ರದರ್ಶಿಸುವ ಅದಕ್ಕೆ ಸರಕಾರ ಮತ್ತು ಸಿಪಿಐ(ಎಂ) ನ 'ಪಾತ್ರ' ವನ್ನು ದೂಷಿಸುವವರ ಜತೆಗೂಡಲು ಯಾವ ಮುಲಾಜೂ ಇದ್ದಂತಿಲ್ಲ.

ಹಿಂಸಾಚಾರದ 'ತನಿಖೆ' ಮಾಡಿದ ತಂಡ ಸಿಪಿಐ(ಎಂ)ನ ಕೊಲ್ಕತ ಕಚೇರಿಗಾಗಲೀ, ನಂದಿಗ್ರಾಮ ಕಚೇರಿಗಾಗಲೀ ಭೇಟಿ ನೀಡಿತೇ ಎಂದು ನಮಗೆ ತಿಳಿಯುವುದಿಲ್ಲ. ಆದರೆ 'ಭೂಮಿ ಉಚ್ಛೇದ್ ಪ್ರತಿರೋಧ್ ಸಮಿತಿ' (ಬಿಯುಪಿಸಿ) ಮತ್ತು ತೃಣಮೂಲ ಕಾಂಗ್ರೆಸ್ ಮುಖಂಡರನ್ನು ಭೇಟಿ ಮಾಡಿರುವುದಂತೂ ಸ್ಪಷ್ಟವಾಗುತ್ತದೆ, ಮೇಧಾ ಪಾಟ್ಕರ್ ರಂತವರ 'ಮಾರ್ಗದರ್ಶನ'ವೂ ಕಾಣುತ್ತದೆ. ಆಯೋಗದ ಅಧಿಕಾರಶಾಹಿಗಳು ಏಶ್ಯನ್ ಏಜ್ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗಳ ವರದಿಗಳನ್ನು ಆಧರಿಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ, ಆದರೆ ಅವೆರಡೇ ಪತ್ರಿಕೆಗಳನ್ನು ನಂಬಿದ್ದೇಕೆ ಎಂದು ಹೇಳುವುದಿಲ್ಲ. ಅದು ನಂದಿಗ್ರಾಮದ ಸರಳ ಮನಸ್ಸಿನ ರೈತರು ಈ ಅವಧಿಯಲ್ಲಿ ಅನುಭವಿಸಿದ ಸಂಕಟಗಳನ್ನು ತುಚ್ಛೀಕರಿಸಿರುವುದು ನಿಜಕ್ಕೂ ನೋವುಂಟು ಮಾಡುವಂತದ್ದು ಎಂದು ರಾಜಕೀಯ ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ಈ ವರದಿಯ ಒಣ ಗದ್ಯ ಈ ಘಟನೆಯನ್ನು ಆಳವಾಗಿ ತನಿಖೆ ಮಾಡುವಲ್ಲಿ ವಿಫಲವಾಗಿದೆಯೆಂಬುದಂತೂ ಸ್ಪಷ್ಟ.

ಏನು ಹೇಳಿದಂತಾಯಿತು?

ಸ್ಥಳೀಯ ಜನಗಳು ಭೂಸ್ವಾಧೀನದ ಬಗ್ಗೆ ಅಸಮಾಧಾನ ಹೊಂದಿದ್ದರು ಎಂದು ವರದಿ ಹೇಳುತ್ತದೆ, ಹಲ್ದಿಯ ಅಭಿವೃದ್ಧಿ ಪ್ರಾಧಿಕಾರದ ಅಧಿಸೂಚನೆ ರಾಸಾಯನಿಕ ಸಂಕೀರ್ಣ ತಟ್ಟಬಹುದಾದ ಪ್ರದೇಶಗಳ ಬಗ್ಗೆ ಸೂಚಿಸಿತಷ್ಟೇ ಎಂದು ವರದಿಯೂ ಒಪ್ಪಿಕೊಳ್ಳುತ್ತದೆ. ಆದರೆ ಈ ಅಧಿಸೂಚನೆ ಹೊರಡಿಸುವ ಆರು ತಿಂಗಳ ಮೊದಲೆ ಈ ಬಗ್ಗೆ ಅಪಪ್ರಚಾರ ನಡೆದಿತ್ತು ಎಂಬುದನ್ನು ಅದೇಕೋ ವರದಿ ಗಮನಿಸುವುದಿಲ್ಲ. ಯಾವುದೇ ಪರಿಹಾರ ಕೊಡುವುದಿಲ್ಲ, ಮಂದಿರ-ಮಸೀದಿ-ಮಕ್ತಾಬ್-ಮದರಸ ಎಲ್ಲವನ್ನೂ ಧ್ವಂಸ ಮಾಡಲಾಗುತ್ತದೆ. ಸ್ಮಶಾನಗಳಲ್ಲಿ ಹೂತ ಹೆಣಗಳನ್ನು ಹೊರಗೆಳೆದು ಹಾಕಿ ಈ 'ದೇವರಿಲ್ಲದ' ಕಮ್ಯುನಿಸ್ಟರು ಕೇಕೆ ಹಾಕುತ್ತಾರೆ ಎಂದೆಲ್ಲ ಮಾಡಿದ್ದ ಹೊಲಸು ಅಪಪ್ರಚಾರವನ್ನು ಯಾವುದೇ ನಿಷ್ಪಕ್ಷಪಾತ ತನಿಖೆ ಉಪೇಕ್ಷಿಸಲು ಸಾಧ್ಯವೇ? ಈ ಅಪಪ್ರಚಾರ ನಡೆಸಿದ ವ್ಯಾನುಗಳಲ್ಲಿ ಇದ್ದವರು ಎರಡೂ ರೀತಿಯ ಮತೀಯ ಮೂಲಭೂತವಾದಿಗಳು, ಜತೆಗೆ ಮಾವೋವಾದಿಗಳು ಹಾಗೂ ಸ್ಥಳೀಯ ತೃಣಮೂಲ ಕಾಂಗ್ರೆಸಿಗರು.

ಎಡರಂಗ ಸರಕಾರ ನಂದಿಗ್ರಾಮದಲ್ಲಿ ವಿಶೇಷ ಆರ್ಥಿಕ ವಲಯವನ್ನು ರಚಿಸಲು ಹೊರಟಿತ್ತು ಎಂಬುದಂತೂ ಶುದ್ಧ ಸುಳ್ಳು. ಆಸಕ್ತ ಮಾಧ್ಯಮಗಳು ಮತ್ತು ಎನ್‌ಜಿಒಗಳು ಸೃಷ್ಟಿಸಿದ ಸುಳ್ಳು ಇದು ಎಂಬುದನ್ನು ಗಮನಿಸುವಲ್ಲಿಯೂ ವರದಿ ವಿಫಲವಾಗಿದೆ. ನಂದಿಗ್ರಾಮ ಒಂದು ಆರ್ಥಿಕವಾಗಿ ಹಿಂದುಳಿದ ಪ್ರದೇಶ, ಉಪ್ಪು ನೀರು ರೈತರಿಗೊಂದು ಸಂಕಟದ ಮೂಲ ಎಂಬ ಹಿನ್ನೆಲೆಯಲ್ಲಿ ಉದ್ಯೋಗಾವಕಾಶ ನಿರ್ಮಿಸುವ ರಾಸಾಯನಿಕ ಸಂಕೀರ್ಣ ವಾಸ್ತವವಾಗಿ ಕೇಂದ್ರ ಸರಕಾರದ ಪ್ರಸ್ತಾವ, ಬಂಗಾಳದ ವಿಧಾನ ಸಭೆಯಲ್ಲಿ ಪ್ರದೇಶ ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ ಶಾಸಕರೂ ಉತ್ಸಾಹಪೂರ್ವಕವಾಗಿ ಅನುಮೋದಿಸಿದ ಯೋಜನೆ ಎಂಬುದೂ ಆಯೋಗದ ತಂಡದ ಗಮನಕ್ಕೆ ಅದೇಕೋ ಬಂದಂತಿಲ್ಲ. ಹೀಗಿರುವಾಗ ಈ ಹಿಂಸಾಚಾರವನ್ನು ತಡೆಯಲಾಗದ್ದರ ಜವಾಬ್ದಾರಿ ಸರಕಾರದ್ದು ಎಂದರೆ ಏನು ಹೇಳಿದಂತಾಯಿತು?

ಅತಿ ದೊಡ್ಡ ಅಸತ್ಯ

ಮಾರ್ಚ್ 14, 2007 ರ ಗೋಲಿಬಾರನ್ನು ಒಂದು ದೊಡ್ಡ ಲೋಪ ಎಂದು ವರದಿ ಹೇಳಿದೆ. ಈ ಬಗ್ಗೆ ಎಡರಂಗ ಸರಕಾರವೂ ಮತ್ತೆ-ಮತ್ತೆ ನೋವು ವ್ಯಕ್ತಪಡಿಸಿದೆ. ಇಲ್ಲಿಯೂ ಸತ್ತವರಲ್ಲಿ 14 ಮಂದಿಯೂ ಗೋಲೀಬಾರಿನಲ್ಲಿಯೇ ಸತ್ತರು ಎಂದು ಬಿಂಬಿಸುವ ಪ್ರಯತ್ನ ನಡೆದಿದೆ. ವಾಸ್ತವವಾಗಿ ಗೋಲೀಬಾರಿನಲ್ಲಿ ಸತ್ತವರು ಆರು ಮಂದಿ, ಉಳಿದ ಎಂಟು ಮಂದಿ ಸಿಡಿದ ಬಾಂಬುಗಳ ತುಣುಕುಗಳು ತಗಲಿ ಮತ್ತು ಕಂತ್ರಿ ಗನ್ನುಗಳಿಂದ ಸಾಯಿಸಲ್ಪಟ್ಟವರು, ಇವರಲ್ಲಿ ಹೆಚ್ಚಿನವರನ್ನು ಬೆನ್ನಲ್ಲಿ ಇರಿಯಲಾಗಿತ್ತು. ಈ ಭೀಕರ ಪ್ರಸಂಗದಿಂದಲೇ ತೀರ್ಮಾನಕ್ಕೆ ಬರಲು ಸಾಧ್ಯವಿತ್ತು.

ಆಯೋಗದ ತಂಡದ ವರದಿಯಲ್ಲಿನ ಅತಿ ದೊಡ್ಡ ಅಸತ್ಯ ಎಂದರೆ ನವಂಬರ 6 ಹಾಗೂ 7ರಂದು ಸಿಪಿಐ(ಎಂ) ಕಾರ್ಯಕರ್ತರು 'ಕ್ರಿಮಿನಲ್ ವ್ಯಕ್ತಿಗಳ' ನೆರವಿನಿಂದ 'ನಿರ್ಬಂಧ'ವನ್ನು ಮುರಿದು 'ಮರು ಅತಿಕ್ರಮಣ' ನಡೆಸಿದರು, ಈ ಘಟನೆಯಲ್ಲಿ ಏಳು ಜನ ಸತ್ತರು, 32 ಜನ ಗಾಯಗೊಂಡರು, 16 ಪೋಲೀಸ್ ಸಿಬ್ಬಂದಿ ಗಾಯಗೊಂಡರು, ಎಲ್ಲಕ್ಕೂ ಹೆಚ್ಚಾಗಿ ಬಿಯುಪಿಸಿಯ 2500 ಕ್ಕೂ ಹೆಚ್ಚು ಬೆಂಬಲಿಗರನ್ನು ಓಡಿಸಲಾಯಿತು ಎಂಬುದು. ಸಿಪಿಐ(ಎಂ) ವಿರೋಧಿಗಳ ಈ ಅತಿ ದೊಡ್ಡ ಅಸತ್ಯವನ್ನು ಪುನರಾವರ್ತಿಸ ಲಾಗಿದೆ. ಈ 'ನಿರ್ಬಂಧ' ದಿಂದಾಗಿ ತಮ್ಮ ಮನೆಗಳಿಂದ ಓಡಿಸಲ್ಪಟ್ಟು ತಿಂಗಳಾನುಗಟ್ಟಲೆ ನಿರಾಶ್ರಿತರ ಶಿಬಿರಗಳಲ್ಲಿ ಸಂಕಟ ಪಟ್ಟ ಜನ ಕೊನೆಗೆ ಕೆಂಬಾವುಟಗಳನ್ನೆತ್ತಿ ಏನೇ ಬರಲಿ, ಮನೆಗಳಿಗೆ ಹಿಂದಿರುಗುತ್ತೇವೆ ಎಂದು ಹೊರಟರೆ ಅದನ್ನು ಮರು ಅತಿಕ್ರಮಣ ಎನ್ನುವುದಾದರೆ ಆಯೋಗದ ತನಿಖೆಯ ಯಥಾರ್ಥತೆಯ ಮೇಲೆಯೇ ಸಂದೇಹ ಬರುವುದಿಲ್ಲವೇ? ಸತ್ತ ಏಳು ಜನರಲ್ಲಿ ಐವರು ಸಿಪಿಐ(ಎಂ) ಬೆಂಬಲಿಗರು. ಉಳಿದ ಇಬ್ಬರು ಸುಮಾರು ಕೆಂಬಾವುಟ ಹಿಡಿದು ಬರುತ್ತಿದ್ದ 3500 ಜನರನ್ನು ಕಂಡು ಕಾಲಿಗೆ ಬುದ್ಧಿ ಹೇಳಲಾರಂಭಿಸಿದ ಸಶಸ್ತ್ರ ಮಾವೋವಾದಿಗಳು ಭಯದಿಂದ ಹಾರಿಸಿದ ಗುಂಡುಗಳಿಗೆ ಬಲಿಯಾದ ಅವರದೇ ಜನಗಳು. ಇನ್ನು ಬಿಯುಪಿಸಿಯ 2500 ಬೆಂಬಲಿಗರನ್ನು ಓಡಿಸಲಾಯಿತು ಎಂದು ತೃಣಮೂಲ ಕಾಂಗ್ರೆಸಿಗರೂ ಅಷ್ಟೇನೂ ಗದ್ದಲ ಎಬ್ಬಿಸಿಲ್ಲ ಎಂಬುದನ್ನು ಬಹುಶಃ ಆಯೋಗದ ತನಿಖೆಗಾರರು ಗಮನಿಸಿದಂತಿಲ್ಲ. ನಂದಿಗ್ರಾಮದ ಶಾಲೆಯಲ್ಲಿ ಹೊರಗಿನಿಂದ ಬಂದವರಿಗೆ ಹಿಂದಿನ ಹನ್ನೊಂದು ತಿಂಗಳಿಂದ ನಂದಿಗ್ರಾಮದಲ್ಲಿ ಸಿಪಿಐ(ಎಂ) ಹಿಂಸಾಚಾರದ ಕಥೆ ಕಟ್ಟಿ ಹೇಳುತ್ತಿದ್ದ ಹತ್ತು-ಹನ್ನೆರಡು ಬಿಯುಪಿಸಿ ಕ್ರಿಮಿನಲ್‌ಗಳನ್ನು ಓಡಿಸಿದ್ದೇನೋ ನಿಜ. ಅದರಿಂದಾಗಿ ಆ ಶಾಲೆಯಲ್ಲಿ ಈಗ ಹನ್ನೊಂದು ತಿಂಗಳ ನಂತರ ಆ ಶಾಲೆಯ ಮಕ್ಕಳು ಮತ್ತೆ ಓದಲಾರಂಭಿಸಿದ್ದಾರೆ!

ನಂದಿಗ್ರಾಮದ ಬ್ಲಾಕ್ 1ರ ಐದು ಗ್ರಾಮಗಳ ದೊಡ್ಡ ಪ್ರದೇಶವನ್ನು ಪ್ರತ್ಯೇಕಗೊಳಿಸಿ ಪೋಲೀಸರು ಮತ್ತು ಸರಕಾರದ ಇತರ ಸಂಸ್ಥೆಗಳವರು ಪ್ರವೇಶಿಸದಂತೆ ಬಿಯುಪಿಸಿ ಮತ್ತು ಬೆಂಬಲಿಗರು ತಡೆದರು? ಎಂದು ಮಾನವ ಹಕ್ಕು ಆಯೋಗದ ತನಿಖಾಗಾರರೂ ಒಪ್ಪಿಕೊಳ್ಳುತ್ತಾರೆ. ರಾಜ್ಯ ಸರಕಾರ ಕೈಗಾರಿಕಾ ಉದ್ದೇಶಗಳಿಗೆ ನಂದಿಗ್ರಾಮದಲ್ಲಿ ಯಾವುದೇ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದಿಲ್ಲ ಎಂದು ಮಿದ್ನಾಪುರ ಪೂರ್ವದ ಮ್ಯಾಜಿಸ್ಟ್ರೇಟರು ಅಧಿಸೂಚನೆ ಹೊರಡಿಸಿದ ಮೇಲೂ ಬಿಯುಪಿಸಿ ಚಳುವಳಿಯನ್ನು ಹಿಂತೆಗೆದುಕೊಳ್ಳಲಿಲ್ಲ, ಹಿಂಸಾಚಾರ ಮುಂದುವರೆಯಿತು ಎಂದೂ ಅವರು ಗಮನಿಸಿದ್ದಾರೆ. ಆದರೂ ವಿರೋಧ ಪಕ್ಷಗಳು ಈ ರೀತಿ ಜನಗಳನ್ನು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗುವಂತೆ ಪ್ರೋತ್ಸಾಹಿಸಬಾರದು ಎಂದಷ್ಟೇ ಅವರಿಗೆ ಬುದ್ಧಿವಾದ ಹೇಳುತ್ತಾರೆ! ಮಾಧ್ಯಮಗಳ ಪಾತ್ರವನ್ನೂ ಹೊಗಳುತ್ತಾ ನಂದಿಗ್ರಾಮದ ದೊಡ್ಡ ಪ್ರದೇಶದಲ್ಲಿ ನಿರ್ಬಂಧ ಹಾಕಿದ್ದು ಸಂವಿಧಾನ ಬಾಹಿರ ಎಂದು ಒತ್ತಿ ಹೇಳುವ ಕರ್ತವ್ಯ ಪಾಲಿಸುವಲ್ಲಿ ಅವು ವಿಫಲವಾಗಿದೆ ಎಂದೂ ಆಯೋಗದ ವರದಿ ಹೇಳುತ್ತದೆ! ಆದರೂ ಕೊನೆಗೆ ಆಸ್ತಿ-ಪಾಸ್ತಿಗಳ ಹಾನಿಗೆ ಎಡರಂಗ ಸರಕಾರವನ್ನು ಹೊಣೆ ಮಾಡುತ್ತದೆ!

○

...ಹಾಸ್ಟೆಲ್ ವಿದ್ಯಾರ್ಥಿಗಳ ಭವಿಷ್ಯ

ಪುಟ 8 ರಿಂದ

ಊಟದ ಭತ್ಯೆ ಮೆಟ್ರಿಕ್ ಪೂರ್ವದ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ.400, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ.450 ಕಳೆದ 10 ವರ್ಷಗಳಿಂದ ಹೆಚ್ಚಾಗಲಿಲ್ಲ. ಹಂತ-ಹಂತವಾಗಿ ದಲಿತ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಸಿಗುತ್ತಿದ್ದ ಸೌಲಭ್ಯಗಳನ್ನು ಮೊಟಕುಗೊಳಿಸಲಾಗುತ್ತಿದೆ. ಪರಿಶಿಷ್ಟ ಜಾತಿ-ಪಂಗಡದ ವಿದ್ಯಾರ್ಥಿಗಳಿಗೆಂದೇ ಪಠ್ಯ ಪುಸ್ತಕಗಳಿಗಾಗಿ ಮೀಸಲಿರಿಸಿದ್ದ ಹಣ ಗುಳಂ. ವೈದ್ಯಕೀಯ ತಾಂತ್ರಿಕ- ಪಾಲಿಟೆಕ್ನಿಕ್, ಐಟಿಐ, ಮುಂತಾದ ವೃತ್ತಿಪರ ಕೋರ್ಸುಗಳಿಗೆ ಸೇರಬಯಸುವ ವಿದ್ಯಾರ್ಥಿಗಳಿಗೆ ಜೆ.ಹೆಚ್.ಪಟೇಲ್ ಸರ್ಕಾರವಿದ್ದಾಗ, ಸೋಮಶೇಖರ್ ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಶುಲ್ಕ ರಿಯಾಯಿತಿ ನೀಡಲಾಗಿತ್ತು. ನಾವೇ ದಲಿತರ ಪರ ಎಂದು ಹೇಳುತ್ತಾ ದಲಿತರನ್ನು ದರಿದ್ರರನ್ನಾಗಿ ಮಾಡಿರುವ ಕಾಂಗ್ರೆಸ್ ಪಕ್ಷದ ಎಸ್.ಎಂ.ಕೃಷ್ಣ [illegible] ಸೌಲಭ್ಯಗಳನ್ನು ಮೊಟಕುಗೊಳಿಸಿದರು. ಅಷ್ಟೇ ಅಲ್ಲ ದಲಿತ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸವನ್ನು ತಡೆದರು. ಹಾಸ್ಟೆಲ್‌ಗಳಿಗೆ ನೀಡುತ್ತಿದ್ದ ಸೌಲಭ್ಯಗಳನ್ನು ತಡೆದರು. ಇದನ್ನು ಸಾಕ್ಷಾತ್ ದಲಿತರ ನಾಯಕ ಜಿ.ಪರಮೇಶ್ವರ್‌ರವರಿಂದಲೇ ಜಾರಿಗೊಳಿಸಿದರು. ಸುಟ್ಟ ದೇಹಕ್ಕೆ ಸೀಮೆಎಣ್ಣೆ ಸುರಿದು ಸುಡುವ ವ್ಯವಸ್ಥೆ

ದೀಪದೆದುರು ಬೆಳಕಿನ ಕಿರಣಗಳನ್ನು ತಾಕಲು ಹೋಗಿ ಸುಟ್ಟು ಹೋಗುವ ಚಿಟ್ಟೆಗಳಂತೆ ದಲಿತರನ್ನು ಸುಡುತ್ತಿರುವ ಹಿಂಸಿಸುತ್ತಿರುವ ಪಾಳೇಗಾರಿ ವ್ಯವಸ್ಥೆಯ ಪ್ರತೀಕ ಜೆಡಿ(ಎಸ್) ಬಿ.ಜೆ.ಪಿ. ಸರ್ಕಾರದ ದಲಿತ ವಿರೋಧಿ ಧೋರಣೆ ಬಗ್ಗೆ ಪ್ರತ್ಯೇಕ ಹೇಳಬೇಕಿಲ್ಲ. ಜಾತ್ಯಾತೀತ ಪರಂಪರೆ ಉಳ್ಳ ಕರುನಾಡಿಗೆ ಕಪ್ಪು ಮಸಿ ಬಳಿದ ಕುಖ್ಯಾತಿಯ ದೇವೇಗೌಡರ ಕುಮ್ಮಕ್ಕಿನ ಜೆಡಿ(ಎಸ್)-ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಅಧಿಕಾರಕ್ಕೇರಿದ ದಿನದಿಂದಲೇ ದಲಿತರ-ದಲಿತ ವಿದ್ಯಾರ್ಥಿಗಳ ಮರಣ ಶಾಸನವನ್ನು ಬರೆಯುರಾಂಭಿಸಿತು. ಸುಮಾರು 30 ಕೋಟಿ ಹಣವನ್ನು ಘೋಷಿಸಿದ್ದ ಬಜೆಟ್‌ನಿಂದಲೇ ದಲಿತ ವಿದ್ಯಾರ್ಥಿಗಳಿಗೆ ಏನೂ ಸಿಗದಂತೆ ತಡೆ ಹಿಡಿಯಲಾಯಿತು. ಆಹಾರ ನಾಗರೀಕ ಇಲಾಖೆಯಿಂದ ದೊರೆಯುತ್ತಿದ್ದ ರಿಯಾಯಿತಿ ದರದ ಆಹಾರ ಪದಾರ್ಥಗಳನ್ನು ಹಾಸ್ಟೆಲ್ ವಿದ್ಯಾರ್ಥಿಗಳಿಗೆ ದೊರಕದಂತೆ ನೋಡಿಕೊಳ್ಳಲಾಯಿತು. ದಲಿತ ವಿದ್ಯಾರ್ಥಿಗಳನ್ನು ಸರ್ಕಾರದ ಹಣದಿಂದಲೇ ಸಂಘ ಪರಿವಾರದ ಶಿಕ್ಷಣ ಸಂಸ್ಥೆಗಳಿಗೆ ದಾಖಲು ಮಾಡಿಕೊಳ್ಳಲು ಆದೇಶಿಸಲಾಯಿತು. ಹೊಸ ವಿದ್ಯಾರ್ಥಿ ವೇತನವಾಗಲೀ, ಹಾಸ್ಟೆಲ್‌ಗಳ ಹೆಚ್ಚಳವಾಗಲೀ ಹೆಚ್ಚಿಗೆ ಆಗ ನೋಡಿಕೊಳ್ಳಲಾಯಿತು. ಇಂತಹ ದಲಿತ ವಿದ್ಯಾರ್ಥಿ ವಿರೋಧಿ ನೀತಿಗಳ ವಿರುದ್ಧ ಬಂಡೆದ್ದು ಹೋರಾಡುವ ಬದಲು ಈಗ ನವ ಕಾಂಗ್ರೆಸ್ ಆಗಿರುವ ಬಿ.ಎಸ್.ಪಿ.ಮೋಹದ ಬಲೆಗೆ ಮೆಟ್ರಿಕ್ ನಂತರದ ಹಾಸ್ಟೆಲ್ ವಿದ್ಯಾರ್ಥಿಗಳು ಬಲಿಯಾಗ ತೊಡಗಿದ್ದಾರೆ. ಕೆಲವೊಂದು ದಲಿತ ಸಂಘಟನೆಗಳು ದಲಿತ-ಹಾಸ್ಟೆಲ್ ವಿದ್ಯಾರ್ಥಿಗಳ ಸಮಸ್ಯೆಗಳ ವಿರುದ್ಧ ಹೋರಾಡುವ ಬದಲು ತಮ್ಮ ಸ್ವಾರ್ಥಕ್ಕಾಗಿ ಬಳಸುತ್ತಿದ್ದಾರೆ. ಪ್ರತಿಭಟಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುವಂತಹ ವಾತಾವರಣವನ್ನು ವ್ಯಾಪಕವಾಗಿ ವಿಸ್ತರಿಸುತ್ತಿದ್ದಾರೆ.

ವಿಶ್ವಬ್ಯಾಂಕ್, ವಿಶ್ವ ವಾಣಿಜ್ಯ ಸಂಘಟನೆ, ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ನಿರ್ದೇಶನಗಳಿಗೆ ತಲೆಬಾಗಿ ನಡೆಯುವ ಸರ್ಕಾರಗಳು ಶಿಕ್ಷಣ ವ್ಯಾಪಾರೀಕರಣ-ಖಾಸಗೀಕರಣ ನೀತಿಗಳನ್ನು ಅನುಸರಿಸುತ್ತಿರುವುದರಿಂದ ಇಡೀ ಬಡ ದುಡಿಯುವ ಜನತೆಯ ಜೀವನವೇ ಬರ್ಬರಗೊಂಡು ಆತ್ಮಹತ್ಯೆಯ ಹಾದಿ ಹಿಡಿದಿರುವ ಸಂದರ್ಭದಲ್ಲಿ ಶೋಷಣೆಗೆ ಒಳಗಾಗಿರುವ ದುಡಿಯುವ ಜನತೆ ಒಂದಾಗಿ ಹೋರಾಡುವ ಹಾದಿ ಹುಡುಕದೆ ಎಡಗ್ಯೆ-ಬಲಗ್ಯೆ ಎಂದು ವಿಭಜನೆಗೊಂಡು ನವ ಕಾಂಗ್ರೆಸ್ ಸ್ವರೂಪದ ಬಿ.ಎಸ್.ಪಿ. ಧೋರಣೆಯ ಪ್ರಭಾವಕ್ಕೆ ಬಲಿಯಾಗಿ ಕಾಲೇಜ್ ಹಾಸ್ಟೆಲ್‌ಗಳನ್ನು ಜಾತಿವಾದಿ ತಾಂಡಗಳಾಗಿ ಪರಿವರ್ತಿಸಲಾಗುತ್ತಿದೆ.

"ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯ ಹೇಳಿದ್ದು ಹಾಲು ಅನ್ನ" ಎಂಬಂತೆ ಆಳುವ ಸರ್ಕಾರಗಳು, ಪಟ್ಟಭದ್ರರು ಇಂತಹ ಪರಿಸ್ಥಿತಿಯನ್ನೇ ಬಯಸಿದ್ದು. ಜೊತೆಗೆ ಒಳಮೀಸಲಾತಿ ಎಂಬ ಜಗಳಕ್ಕೆ ಹಚ್ಚಿ ಕಿತ್ತಾಡುವುದನ್ನು ನೋಡುತ್ತಾ ಉಪ್ಪರಿಗೆಯ ಮೇಲೆ ಕೂತಿದ್ದಾರೆ ನೇತಾರರು! ಇಂತಹ ಪರಿಸ್ಥಿತಿಯಲ್ಲಿ ದಲಿತ-ಹಿಂದುಳಿದವರು ಒಂದುಗೂಡಿ ಸಮಸ್ಯೆಗಳ ವಿರುದ್ಧ ಧ್ವನಿ ಮೊಳಗಿಸುವುದೆಂದು?

○



ಅಮೆರಿಕಾದ ಹಣಕಾಸಿನ ಬಿಕ್ಕಟ್ಟು ಮತ್ತು ಭಾರತಕ್ಕೆ ಇದರ ಪಾಠಗಳು

ಅಮೇರಿಕಾದ ಹಣಕಾಸಿನ ಬಿಕ್ಕಟ್ಟು ಈಗ ಜಗಜ್ಜಾಹೀರು. ಸಾಮ್ರಾಜ್ಯಶಾಹಿ ಅತಿ ಆಸೆ ಬುರುಕುತನದಿಂದ ಹುಟ್ಟು ಹಾಕಿರುವ ಈ ಬಿಕ್ಕಟ್ಟಿನ ಪರಿಣಾಮಗಳು ನಮ್ಮ ದೇಶವನ್ನು ತಟ್ಟದೇ ಇರದು. ಉದಾರೀಕರಣದ ಆರ್ಥಿಕದಿಂದ ನಾವು ತೆರೆದ ಬಾಗಿಲುಗಳು ಈ ಬಿಕ್ಕಟ್ಟಿನ ಎಳೆಗಳನ್ನು ಭಾರತದೊಳಕ್ಕೆ ಹರಿಬಿಟ್ಟಬಿಡುತ್ತವೆ.

ಹಣಕಾಸು ತಜ್ಞ ಜಾರ್ಜ್ ಸೊರೊಸ್‌ನ್ ಪ್ರಕಾರ 'ಒಟ್ಟು ಪತ್ತನ್ನು (ಸಾಲ) ಹಿಗ್ಗಿಸಿದ ಪ್ರತಿ ಸಾರಿಯೂ ಹಣಕಾಸು ಬಿಕ್ಕಟ್ಟು ಉಂಟಾಗಿದೆ. ಅಧಿಕಾರಿಗಳು ವ್ಯವಸ್ಥೆಯೊಳಗೆ ಆರ್ಥಿಕಕ್ಕೆ ಬೆಳೆಯುವ ಇತರ ಪ್ರಚೋದನಾತ್ಮಕ ಕ್ರಮಗಳ ಮೂಲಕ ಬಿಕ್ಕಟ್ಟಿನ ಪರಿಣಾಮಗಳನ್ನು ಹತೋಟಿಯಲ್ಲಿಡಲು ಪ್ರಯತ್ನಿಸುತ್ತಾ ಬಂದಿದ್ದಾರೆ. ಹಿಂದೆಲ್ಲ ಇದು ಎಷ್ಟು ಪರಿಣಾಮಕಾರಿಯಾಗಿ ಹಿತ್ತೆಂದರೆ ಅಮೇರಿಕಾದ ಹಿಂದಿನ ಅಧ್ಯಕ್ಷ ರೊನಾಲ್ಡ್ ರೀಗನ್ ಇದನ್ನು ಮಾರುಕಟ್ಟೆ ಜಾದೂ ಎಂದೇ ಕರೆದರು. ನಾನು ಇದನ್ನು ಮಾರುಕಟ್ಟೆಯ ಮೂಲಭೂತವಾದ ಎಂದು ಕರೆದೆ. ಮಾರುಕಟ್ಟೆ ಮೂಲಭೂತವಾದಿಗಳು ಮಾರುಕಟ್ಟೆ ತನ್ನ ಸಮತೋಲನವನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತದೆ ಎಂದು ನಂಬುತ್ತಾರೆ. ಆದ್ದರಿಂದ ಮಾರುಕಟ್ಟೆಯ ಪಾತ್ರಧಾರಿಗಳು ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು ಬಿಡಬೇಕು ಎನ್ನುತ್ತಾರೆ. ಆದರೆ ಇದು ಖಂಡಿತ ತಪ್ಪು ಗ್ರಹಿಕೆ. ಯಾಕೆಂದರೆ ಅಧಿಕಾರಿಗಳ ಮಧ್ಯಪ್ರವೇಶದಿಂದಾಗಿ ಹಣಕಾಸು ಮಾರುಕಟ್ಟೆಯ ಕುಸಿತ ತಡೆಯಲ್ಪಡುತ್ತಿತ್ತೇ ಹೊರತು ಮಾರುಕಟ್ಟೆಯ ಸ್ವಂತ ಗುಣದಿಂದಲ್ಲ!!

ಮಾರುಕಟ್ಟೆ ಮೂಲಭೂತವಾದ ಅಮೇರಿಕಾದ ಮಂತ್ರವಾಯಿತಷ್ಟೇ ಅಲ್ಲ, ಅದು ಅಭಿವೃದ್ಧಿಶೀಲ ದೇಶಗಳ ಉಳಿತಾಯವನ್ನು ಹೀರಿಕೊಳ್ಳುವ ತಂತ್ರವಾಗಿಯೂ ಪರಿಣಮಿಸಿತು. ಜಾಗತೀಕರಣ ಮುಂದುರಿದದ್ದೇ ಹೀಗೆ. ಈ ಜಾಗತೀಕರಣದಡಿ ಅಮೇರಿಕಾ ತಾನು ಉತ್ಪಾದಿಸಿದ್ದಕ್ಕಿಂತ ಹೆಚ್ಚಿಗೆ 'ಸ್ವಾಹಾ' ಮಾಡುತ್ತಿತ್ತು. ವಿಚಿತ್ರವೆಂದರೆ ಈ ಮಾರುಕಟ್ಟೆ ಮೂಲಭೂತವಾದಿಗಳೇ ಅಮೇರಿಕಾ ಸರ್ಕಾರದ ಮೂಲಕ ವಿವಿಧ ದೇಶಗಳು ಸಾಲ ಮಾಡುವ ಚಟ ಬೆಳೆಸಿಕೊಳ್ಳುವಂತೆ ಮಾಡಿದರೂ ಜಾಗತೀಕರಣದ ಒಂದು ಬಹು ಮುಖ್ಯ ಆಯಾಮವೆಂದರೆ ಜಗತ್ತಿನಾದ್ಯಂತ ದೇಶಗಳು ಮತ್ತು ಜನರು ಅವಶ್ಯಕತೆಗಳ ಬದಲು ಐಷಾರಾಮಕ್ಕಾಗಿ ಸಾಲ ಮಾಡುವ ಪ್ರವೃತ್ತಿ ಬೆಳೆಸಿಕೊಂಡಿರುವುದು.

ಬಿಕ್ಕಟ್ಟಿನ ಮೂಲ: ಅಮೇರಿಕಾದ ಸಬ್ ಪ್ರೈಮ್ ಸಾಲದ ಬಿಕ್ಕಟ್ಟೇ ಇಂದಿನ ಬಿಕ್ಕಟ್ಟಿನ ಮೂಲ. ಅಮೇರಿಕಾದಲ್ಲಿ ಹಲವು ಹಣಕಾಸು ಕಂಪನಿಗಳು ಅರ್ಹತೆ ಇಲ್ಲದಿರುವವರಿಗೂ ದೊಡ್ಡ ಪ್ರಮಾಣದಲ್ಲಿ ಸಾಲ ನೀಡುತ್ತಲೇ ಹೋದವು. ಈ ಸಾಲಗಳಲ್ಲಿ ಅಗ್ರ ಅಡಮಾನ ಸಾಲ ಮುಖ್ಯವಾದದು. ಇದರಿಂದಾಗಿ ಮನೆಗಳ ಬೆಲೆಗಳು ಏರಿದವು. ಬೆಲೆ ಏರಿದಂತೆಲ್ಲ ಕಂಪನಿಗಳು ಹೆಚ್ಚೆಚ್ಚು ಸಾಲ ನೀಡುತ್ತಾ ಹೋದವು. ಸಾಲ ನೀಡುವಾಗಿನ ಬಹುಮುಖ್ಯ ಕಾಳಜಿ ಏನೆಂದರೆ ಸಾಲ ಪಡೆದಾತನಿಗೆ ಸಾಲ ಮರುಪಾವತಿಸುವ ಸಾಮರ್ಥ್ಯವಿದೆಯೇ ಎಂದು ನೋಡುವುದು. ಈ ಮುಖ್ಯ ಎಚ್ಚರಿಕೆಯನ್ನೇ ಲಾಭ ಪಿಪಾಸು ಕಂಪನಿಗಳು ನಿರ್ಲಕ್ಷಿಸಿದವು. ಈ ಸಾಲಗಳ ಮೇಲೆ ಉಬ್ಬರ ತೋರಿದ ಕಂಪನಿಗಳು ಸಾಲ ಮರು ಪಾವತಿಯಾಗದ ಕಾರಣ ಬಿಕ್ಕಟ್ಟು ಎದುರಿಸುವಂತಾಯಿತು. ಇದು ಇಡೀ ಅಮೇರಿಕಾದ ಆರ್ಥಿಕದ ಬಿಕ್ಕಟಾಗಿ ಈಗ ಜಾಗತಿಕ ಬಿಕ್ಕಟ್ಟಾಗಿ ಪರಿಣಮಿಸುತ್ತಿದೆ.

ಈ ಬಿಕ್ಕಟ್ಟಿನಿಂದಾಗಿ ಹಣಕಾಸು ಹಿಂಜರಿತವುಂಟಾಗುವ ಎಲ್ಲ ಲಕ್ಷಣಗಳೂ ಈಗಾಗಲೇ ಕಾಣಸುತ್ತಿವೆ. ಅಮೇರಿಕಾದ ಫೆಡರಲ್ ರಿಸರ್ವ್ (ಅಮೇರಿಕಾದ ರಿಸರ್ವ್ ಬ್ಯಾಂಕ್) ನ ಬರ್ನ್‌ಂಕೆ ಮಹಾಶಯ 145 ಶತಕೋಟಿ ಡಾಲರುಗಳ ಪರಿಹಾರ ಕಾರ್ಯಕ್ರಮವನ್ನು ಘೋಷಿಸಿದ್ದಾನೆ. ಈ ಹಣಕಾಸನ್ನು ಅಮೇರಿಕಾದ ವರಮಾನ ತೆರಿಗೆ ಪಾವತಿದಾರರಿಗೆ ವಿನಾಯಿತಿ ನೀಡಲು ಉಪಯೋಗಿಸಲಾಗುತ್ತದೆ. ಇದರ ಅರ್ಥವೇನೆಂದರೆ ಹೆಚ್ಚೆಚ್ಚು ತೆರಿಗೆ ಪಾವತಿಸುವವರಿಗೆ ಹೆಚ್ಚೆಚ್ಚು ಪರಿಹಾರ ದೊರೆಯುತ್ತದೆ. ಅನುಭವ ಏನು ಹೇಳುತ್ತದೆಂದರೆ ಸಮಾಜದ ಕೆಳಸ್ತರದ ಜನರಿಗೆ ಖರ್ಚು ಮಾಡಲು ಹೆಚ್ಚಿನ ಹಣ ದೊರೆತರೆ ಅದರಿಂದ ಆರ್ಥಿಕಕ್ಕೆ ಪ್ರಚೋದನೆ ದೊರೆಯುತ್ತದೆ ಎಂದು, ಆದರೆ ಅಮೇರಿಕಾದ ಫೆಡರೇಷನ್ ರಿಸರ್ವ್‌ನ ಕ್ರಮ ಆರ್ಥಿಕಕ್ಕೆ ಬೇಕಾದ ಪ್ರಚೋದನೆ ನೀಡಲಾರದು.

ಅಮೇರಿಕಾದಲ್ಲಿ 14 ಕಾರ್ಪೊರೇಷನ್‌ಗಳು (ಹಣಕಾಸು ಕಂಪನಿಗಳು) ಹಣಕಾಸು ಲೆಕ್ಕದಲ್ಲಿ ಅಪರಾ ತಪರಾ ಮಾಡಿರುವ ಸಾಧ್ಯತೆಯನ್ನೂ ಫೆಡರಲ್ ಬ್ಯೂರೋ ಆಫ್ ಇನ್ವೆಷ್ಟಿಗೇಷನ್ ತನಿಖೆ ಮಾಡುತ್ತಿದೆ ಎಂದೂ ವರದಿಗಳು ಹೇಳಿವೆ.

ಅಮೇರಿಕಾದ ಅಧಿಕಾರಿಗಳು ಆರ್ಥಿಕಕ್ಕೆ ಪ್ರಚೋದನೆ ನೀಡುವ ಇತರ ಹಲವು ಕ್ರಮಗಳ್ನು ಕೈಗೊಳ್ಳ ಹೊರಟರೂ ಡಾಲರುಗಳನ್ನು ಶೇಖರಿಸಲು ತಯಾರಿಲ್ಲ. ಅಮೇರಿಕಾದ ಬ್ಯಾಂಕುಗಳಲ್ಲಿರುವ ತಮ್ಮ ಹಣವನ್ನು ಲ್ಯಾಟಿನ್ ಅಮೇರಿಕಾದ ದೇಶಗಳು ಹಿಂತೆಗೆಯಲು ಅನುವಾಗುತ್ತದೆ. ಚೀನಾ ಮತ್ತು ಮಧ್ಯ ಪೂರ್ವ ದೇಶಗಳು ತಮ್ಮದೇ ರಿಸರ್ವ್‌ಗಳನ್ನು ಪ್ರಾರಂಭಿಸಲು ಅನುವಾಗುತ್ತದೆ. ಇಡೀ ಜಗತ್ತಿನ ದೇಶಗಳು ಅಮೇರಿಕಾದ ಹಣಕಾಸು ಪದ್ಧತಿಯ ನ್ಯೂನತೆಗಳನ್ನು ಅರ್ಥಮಾಡಿಕೊಳ್ಳ ತೊಡಗಿವೆ.

ಜೋಸೆಫ್ ಸ್ಟಿಗ್ಲಿಟ್ಜ್ ನಂತರ ನೋಬೆಲ್ ಪ್ರಶಸ್ತಿ ವಿಜೇತ ಅರ್ಥ ತಜ್ಞ ಅಮೇರಿಕಾದ ಇರಾಕಿನ ಮೇಲೆ ಆಕ್ರಮಣ ಮಾಡಿದ್ದರಿಂದ ತೈಲದ ಬೆಲೆ ವಿಪರೀತ ಏರಿ ಇಂದು ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಗಿದೆ ಎಂದು ಹೇಳುತ್ತಿದ್ದಾರೆ. ಜಗತ್ತಿನಾದ್ಯಂತ ದುಡಿಯುವ ಜನರಿಗೆ ಕಡಿಮೆ ನಿಜವೇತನ ದೊರೆಯುತ್ತಿರುವುದು ವಾಸ್ತವವಾಗಿದೆ. ಬೆಳವಣಿಗೆ ಇಲ್ಲದ ಆರ್ಥಿಕದ ಉಬ್ಬರ ಉಂಟಾಗುತ್ತದೆ ಎಂದೂ ಸ್ಟಿಗ್ಲಿಟ್ಜ್ ಮಹಾಶಯ ಎಚ್ಚರಿಕೆ ಹೇಳಿದ್ದಾನೆ.

ಈ ಎಲ್ಲ ಬೆಳವಣಿಗೆಗಳ ನಡೆವೆಯೂ ನಮ್ಮ ಕೇಂದ್ರ ಹಣಕಾಸು ಮಂತ್ರಿ ಚಿದಂಬರಂ ಅಮೇರಿಕಾದ ಆರ್ಥಿಕ ಕೂಡಲೇ ಚೇತರಿಸಿಕೊಳ್ಳುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಐಎಂಎಫ್‌ನ ಸಿಮೆನ್ ಜಾನ್ಸನ್ ಎಂಬ ಸಂಶೋಧನಾ ತಜ್ಞನ ಪ್ರಕಾರ ಈ ಬಿಕ್ಕಟ್ಟು ಬೇಗ ಬಗೆಹರಿಯುತ್ತದೆಂದು ಹೇಳುವುದು ಸಾಧ್ಯವಿಲ್ಲ. ಈತನ ಪ್ರಕಾರ ಭಾರತ ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜಾಗತಿಕ ವ್ಯವಹಾರಕ್ಕೆ ತೆರೆದುಕೊಂಡಿಲ್ಲದಿರುವುದರಿಂದ ಭಾರತದ ಮೇಲಿನ ಪರಿಣಾಮಗಳು ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಗದೇ ಇರಬಹುದು.

ಪಿ.ಚಿದಂಬರಂ ಮತ್ತು ಅವರ ಕೇಂದ್ರ ಸರ್ಕಾರ ಭಾರತವನ್ನು ಎಷ್ಟು ದೊಡ್ಡ ಪ್ರಮಾಣದಲ್ಲಿ ಜಾಗತೀಕರಣಕ್ಕೆ ತೆರೆಯಬೇಕೆಂದುಕೊಂಡಿದ್ದರೋ ಅಷ್ಟು ದೊಡ್ಡ ಪ್ರಮಾಣದಲ್ಲಿ ತೆರೆಯಲು ಸಾಧ್ಯವಾಗಲಿಲ್ಲ. ಎಡಪಕ್ಷಗಳು ಮತ್ತು ದುಡಿವ ಜನ ಈ ಕ್ರಮಗಳನ್ನು ವಿರೋಧಿಸಿದ್ದರಿಂಧ ದೊಡ್ಡ ಪ್ರಮಾಣದ ತೆರೆಯುವಿಕೆ ಸಾಧ್ಯವಾಗಲಿಲ್ಲ. ಭಾರತಕ್ಕೆ ಅಲ್ಪಸ್ವಲ್ಪ ಈ ಬಿಕ್ಕಟ್ಟಿನಿಂದ ರಕ್ಷಣೆ ದೊರೆತರೆ ಅದು ಈ ಕಡಿಮೆ ತೆರೆಯುವಿಕೆಯಿಂದ ಮಾತ್ರ. ಇದನ್ನು ಕೇಂದ್ರ ಹಣಕಾಸು ಮಂತ್ರಿ ಅರ್ಥಮಾಡಿಕೊಳ್ಳಬೇಕು ಅಲ್ಲವೇ?

○

ಉದ್ಯೋಗ ಕಳೆದುಕೊಳ್ಳುತ್ತಿರುವ ಐಟಿ ಉದ್ಯೋಗಿಗಳು

ಅಮೆರಿಕದಲ್ಲಾಗಿರುವ ಆರ್ಥಿಕ ಹಿಂಜರಿತ ಭಾರತದ ಆರ್ಥಿಕತೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವ ಚಿದಂಬರಂ, ವಾಣಿಜ್ಯ ಸಚಿವ ಕಮಲ್‌ನಾಥ್ ಸೇರಿದಂತೆ ಎಲ್ಲರೂ ಬೊಗಳೆ ಬಿಡುತ್ತಿದ್ದಾರೆ. ಆದರೆ ವಾಸ್ತವ ಪರಿಸ್ಥಿತಿಯತ್ತ ನೋಟ ಹರಿಸಿದರೆ ಅದರ ಭೀಕರತೆ ಕಣ್ಣಿಗೆ ರಾಚುತ್ತದೆ.

ಅಮೆರಿಕ ನೀಡುವ ಹೊರಗುತ್ತಿಗೆ ಕೆಲಸಗಳನ್ನೇ ನಂಬಿಕೊಂಡಿರುವ ಭಾರತದ ಐಟಿ ಕಂಪನಿಗಳ ಜೀವ ಅಂಗೈಗೆ ಬಂದಿದೆ. ಭಾರತದ ಐಟಿ ಕಂಪನಿಗಳು ಗಳಿಸುವ ಆದಾಯದಲ್ಲಿ ಶೇಕಡ 50ರಷ್ಟು ಅಮೆರಿಕದಿಂದಲೇ ಪಡೆಯುತ್ತಿವೆ. ಆರ್ಥಿಕ ಹಿಂಜರಿತದಿಂದಾಗಿ ಅಲ್ಲಿನ ಕಂಪನಿಗಳು ವೆಚ್ಚ ಕಡಿಮೆಗೊಳಿಸಲು ದಿನೇ ದಿನೇ ಹೊರಗುತ್ತಿಗೆ ಕೆಲಸಗಳಿಗೆ ಕತ್ತರಿ ಹಾಕುತ್ತಿವೆ. ಇದರ ಪರಿಣಾಮ ನೇರವಾಗಿ ಭಾರತದ ಐಟಿ ಕಂಪನಿಗಳ ಮೇಲೆ ಬಿದ್ದಿದೆ. ಆಗುತ್ತಿರುವ ನಷ್ಟವನ್ನು ಸರಿದೂಗಿಸಲು ಭಾರತದ ಐಟಿ ಕಂಪನಿಗಳು ಸಿಬ್ಬಂದಿ ವಿರುದ್ಧ ಬಂದೂಕು ಗುರಿ ಮಾಡಿವೆ. ಹಂತಹಂತವಾಗಿ ಉದ್ಯೋಗಿಗಳನ್ನು ಬೀದಿಗೆ ಹಾಕುತ್ತಿವೆ.

ಭಾರತದ ಸಿದ್ಧ ಉಡುಪು, ಚರ್ಮೋದ್ಯಮ ಸೇರಿದಂತೆ ಹಲವು ರೀತಿಯ ರಫ್ತು ಆಧರಿತ ಉದ್ಯಮಗಳು ಪಾಶ್ಚಾತ್ಯ ಮಾರುಕಟ್ಟೆಯನ್ನು ಅವಲಂಬಿಸಿವೆ. ಕಳೆದ ಒಂದು ವರ್ಷದಿಂದ ರೂಪಾಯಿ ಮೌಲ್ಯದಲ್ಲಿ ಶೇಕಡ 12ರಷ್ಟು ಹೆಚ್ಚಳವಾಗಿರುವುದರಿಂದ ಈ ಉದ್ಯಮಗಳು ಸಂಕಷ್ಟಕ್ಕೆ ಸಿಲುಕಿವೆ. ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಈವೊತ್ತೋ.. ನಾಳೆಯೋ.. ಎಂದು ಗುಟುಕು ನೀರು ಕುಡಿಯುತ್ತಿದ್ದಾರೆ.

ರೂಪಾಯಿ ಮೌಲ್ಯ ಹೆಚ್ಚಳ ಹಣಕಾಸು ನೀತಿಗಳಲ್ಲಿ ತಾಂತ್ರಿಕ ಹೊಂದಾಣಿಕೆ ಮಾತ್ರ. ಆಯಾ ದೇಶಗಳ ವಿದೇಶಿ ವಿನಿಮಯವನ್ನು ಹೊಂದಾಣಿಕೆ ಮಾಡಲು ಅದಕ್ಕೆ ಅನುಗುಣವಾಗುವಂತೆ ಕರೆನ್ಸಿ ಮೌಲ್ಯ ನಿಗದಿಪಡಿಸಲಾಗುತ್ತದೆ. ದೇಶವೊಂದರ ವಿದೇಶಿ ವಿನಿಮಯ ಹೆಚ್ಚಾದಾಗ ಆ ದೇಶದ ಕರೆನ್ಸಿ ಮೌಲ್ಯ ಸಹ ಹೆಚ್ಚಾಗುತ್ತದೆ. ಪ್ರಪಂಚದಲ್ಲಿನ ಎಲ್ಲ ದೇಶಗಳ ಕರೆನ್ಸಿಯನ್ನು ಅಮೆರಿಕದ ಡಾಲರ್‌ನೊಂದಿಗೆ ಹೊಂದಾಣಿಕೆ ಮಾಡಲಾಗುತ್ತದೆ.

ಭಾರತಕ್ಕೆ ವಿದೇಶಿ ಬಂಡವಾಳ ಹರಿಯುವಿಕೆ ಹೆಚ್ಚಾಗಿರುವುದರಿಂದ ವಿದೇಶಿ ವಿನಿಮಯ ಹೆಚ್ಚಾಗಿ ರೂಪಾಯಿ ಮೌಲ್ಯ ಹೆಚ್ಚಾಗುತ್ತಿದ್ದು, ಡಾಲರ್ ಮೌಲ್ಯದಲ್ಲಿ ಕುಸಿತ ಕಾಣುತ್ತಿದೆ. ಭಾರತದ ಎಲ್ಲ ವಹಿವಾಟು ಒಪ್ಪಂದಗಳು ಡಾಲರ್ ರೂಪದಲ್ಲಿವೆ. ಹಾಗಾಗಿ ನಾವು ಮಾಡುವ ರಫ್ತಿಗೆ ಡಾಲರ್‌ಗಳನ್ನು ಪಡೆಯುತ್ತಿರುವುದರಿಂದ ಡಾಲರ್ ಮೌಲ್ಯದಲ್ಲಿ ಉಂಟಾದ ಕುಸಿತ ನೇರವಾಗಿ ಆದಾಯದ ಮೇಲೆ ಪರಿಣಾಮ ಬೀರುತ್ತದೆ.

ಒಂದೆಡೆ ಅಮೆರಿಕದಲ್ಲಿ ಉಂಟಾಗಿರುವ ಆರ್ಥಿಕ ಹಿಂಜರಿತದಿಂದಾಗಿ ಹೊರಗುತ್ತಿಗೆ ಕೆಲಸಗಳಿಗ ಕತ್ತರಿ ಬೀಳುತ್ತಿದ್ದರೆ, ಡಾಲರ್ ಮೌಲ್ಯ ಕುಸಿತದಿಂದಾಗಿ ರಫ್ತು ಕಂಪನಿಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಹಾಗಾಗಿ ಎರಡೂ ವಲಯಗಳಲ್ಲಿನ ಉದ್ಯೋಗಿಗಳು ಆತಂಕದ ಪರಿಸ್ಥಿತಿ ಎದುರಿಸುತ್ತಿದ್ದಾರೆ.

ಭಾರತದ ಬೃಹತ್ ಐಟಿ ಸೇವಾ ರಫ್ತು ಕಂಪನಿ ಟಾಟಾ ಕನ್ಸಲ್‌ಟೆನ್ಸಿ (ಟಿಸಿಎಸ್) ಸೋಮವಾರ 500 ಸಿಬ್ಬಂದಿಯನ್ನು ವೈಯಕ್ತಿಕ ಸಾಧನೆ ನಿರೀಕ್ಷಿತ ಮಟ್ಟದಲ್ಲಿ ಇಲ್ಲ ಎಂಬ ನೆಪವೊಡ್ಡಿ ಹೊರದಬ್ಬಿದೆ. ದೇಶದ ಹಲವಾರು ಕಂಪನಿಗಳು ಟಿಸಿಎಸ್ ಹಾದಿಯನ್ನೇ ಅನುಸರಿಸಲಿವೆ. ಐಟಿ ವೃತ್ತಿಪರರು ಪ್ರತಿದಿನ ಬೀದಿಗೆ ಬೀಳುತ್ತಿದ್ದಾರೆ. ಕೋಲ್ಕತ್ತದಲ್ಲಿನ ಐಬಿಎಂ ಕಂಪನಿ ಸಹ ಬುಧವಾರ ತನ್ನ ಸಿಬ್ಬಂದಿಗೆ ಸೂಚನೆ ಹೊರಡಿಸಿದ್ದು ಬೇರೆ ಉದ್ಯೋಗ ನೋಡಿಕೊಳ್ಳಲು ಹೇಳಿದೆ. ಇಲ್ಲಿ ಯಾವುದೇ ರೀತಿಯ ಕಾರ್ಮಿಕ ಕಾನೂನಾಗಲಿ ಶಾಸನವಾಗಲಿ ಇಲ್ಲ. ಇದ್ದರೂ ಕೇವಲ ನೆಪ ಮಾತ್ರ.

ಕಂಪನಿಗಳು ಸಿಬ್ಬಂದಿಯನ್ನು ಕಿತ್ತು ಹಾಕಲು ಹೊಸ ರೀತಿಯ ತಂತ್ರಗಳನ್ನು ಅನುಸರಿಸುತ್ತಿವೆ. ಎರಡು ಮೂರು ವರ್ಷ ಸೇವೆ ಸಲ್ಲಿಸಿರುವ ಉದ್ಯೋಗಿಗಳು ಹೆಚ್ಚಿನ ವೇತನ ಪಡೆಯುತ್ತಿರುತ್ತಾರೆ. ಅವರನ್ನು ತೆಗೆದುಹಾಕಲು ಅನ್ಯ ಮಾರ್ಗವಿಲ್ಲದೆ ಸಿಬ್ಬಂದಿ ಉತ್ತೇಜನಾ ಪರೀಕ್ಷೆಗಳೆಂದು ಹೊಸ ಪದ್ಧತಿಯನ್ನು ಅನುಸರಿಸುತ್ತಿವೆ. ಈ ಪರೀಕ್ಷೆಗಳಲ್ಲಿ ನಿರೀಕ್ಷಿತ ಮಟ್ಟ ತಲುಪಿಲ್ಲ ಎಂದು ನೆಪ ಹೇಳಿ ಅವರನ್ನು ಕಿತ್ತು ಹಾಕಿ, ಉದ್ಯಮಕ್ಕೆ ಆಗತಾನೆ ಪ್ರವೇಶ ಪಡೆಯುವ ಹೊಸ ಉದ್ಯೋಗಿಗಳನ್ನು ನೇಮಿಸಿಕೊಳ್ಳುತ್ತಿವೆ. ಒಂದು ವರ್ಷದ ನಂತರ ಸಾಧನೆಯ ನೆಪವೊಡ್ಡಿ ಇವರನ್ನು ಸಹ ಸುಲಭವಾಗಿ ಕಿತ್ತು ಹಾಕುತ್ತಿವೆ.

ಪರೀಕ್ಷೆಗಳು ಎಂಬುದು ಕೇವಲ ನೆಪ ಮಾತ್ರ. ಮೂಲತಃ ಎಷ್ಟು ಸಿಬ್ಬಂದಿಯನ್ನು ತೆಗೆದುಹಾಕಬೇಕೆಂದು ಆಡಳಿತ ಮಂಡಳಿ ಮೊದಲೇ ನಿರ್ಧರಿಸುತ್ತಿರುತ್ತದೆ. ಒಂದು ವರ್ಷದಲ್ಲಿ ನೀಡಿದ ತರಬೇತಿಗೂ ಪರೀಕ್ಷೆಯಲ್ಲಿ ಕೇಳುವ ಪ್ರಶ್ನೆಗಳಿಗೂ ಏನೇನೂ ಸಂಬಂಧ ಇರುವುದಿಲ್ಲ ಎಂದು ಸಾವಿರಾರು ಉದ್ಯೋಗಿಗಳು ತಮ್ಮ ಅಳಲನ್ನು ವ್ಯಕ್ತಪಡಿಸುತ್ತಾರೆ.

ಜಗತ್ತಿನ ಬೃಹತ್ ಐಟಿ ಸೇವಾ ಕಂಪನಿಗಳಾದ ಇನ್ಫೋಸಿಸ್, ವಿಪ್ರೊ, ಸತ್ಯಂ ಕಂಪ್ಯೂಟರ್ಸ್, ಮಹೀಂದ್ರ ಅಂಡ್ ಮಹೀಂದ್ರ ಟೆಕ್, ಎಚ್‌ಟಿಎಂಟಿ, ಕಾಗ್ನಿಜೆಂಟ್, ಒರ್ಯಾಕಲ್, ಎಚ್‌ಪಿ ಸೇರಿದಂತೆ ಹಲವಾರು ಕಂಪನಿಗಳು ಸಿಬ್ಬಂದಿಯನ್ನು ಕಿತ್ತು ಹಾಕುವ ಪ್ರಕ್ರಿಯೆಯಲ್ಲಿ ತೊಡಗಿವೆ. -

ಅಪ್ಪು

ಜಗದಗಲ

ಶರತ್‌ಚಂದ್ರ

ಅಪ್ರತಿಮ ಅರಬ್ ನಾಯಕ ಜಾರ್ಜ್ ಹಬಾಶ್ ಇನ್ನಿಲ್ಲ

ಪ್ಯಾಲೆಸ್ಟೈನ್ ವಿಮೋಚನಾ ಹೋರಾಟದಲ್ಲಿ ಯಾಸೆರ್ ಅರಾಫತ್‌ರಷ್ಟೇ ಪ್ರಮುಖ ಪಾತ್ರ ವಹಿಸಿದ ಜಾರ್ಜ ಹಬಾಶ್ ಇನ್ನಿಲ್ಲ; ತಮ್ಮ ಇಳಿ ವಯಸ್ಸಿನಲ್ಲಿ ಜೋರ್ಡಾನ್ ನಲ್ಲಿ ನಿಧನ ಹೊಂದಿದ ಹಬಾಶ್, ಎಡ ಮತ್ತು ರಾಷ್ಟ್ರೀಯ ಅರಬ್ ಚಳುವಳಿಯಲ್ಲೂ ಪ್ರಮುಖ ಪಾತ್ರ ವಹಿಸಿದವರು. ಅದಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟರೂ ತಾಯ್ನಾಡು ಸ್ವತಂತ್ರವಾಗಿದ್ದು ನೋಡಲು ಸಾಧ್ಯವಾಗಲಿಲ್ಲ. ಮಾತ್ರವಲ್ಲ ತಾಯ್ನಾಡಿನಲ್ಲಿ ಸಾಯುವ ಅವಕಾಶವೂ ಅವರಿಗೆ ಸಿಗಲಿಲ್ಲ. ಅವರು ಸ್ಥಾಪಿಸಿದ ಪಿ.ಎಲ್.ಎಫ್.ಪಿ. (ಜನಪ್ರಿಯ ಪ್ಯಾಲೆಸ್ಟೈನ್ ವಿಮೋಚನಾ ರಂಗ) ಎರಡನೇ ದೊಡ್ಡ ಪ್ಯಾಲೆಸ್ಟೈನ್ ವಿಮೋಚನಾ ಗುಂಪು ಆಗಿತ್ತು. ಹಬಾಶ್ ಕ್ರಿಶ್ಚಿಯನ್ ಆಗಿದ್ದದ್ದು ಮತ್ತು ಸಂಕೋಚ ಸ್ವಭಾವದವರು ಆಗಿದ್ದರಿಂದ ಅವರು ಪ್ಯಾಲೆಸ್ಟೈನ್ ರಾಷ್ಟ್ರೀಯ ಚಳುವಳಿಯ ನಾಯಕರಾಗಲಿಲ್ಲ ಎಂದು ಹೇಳಲಾಗುತ್ತದೆ. ಹಬಾಶ್ ಕೂಡಾ ಅರಾಫತ್ ರಷ್ಟೇ ಜನಪ್ರಿಯತೆಯನ್ನು ಪ್ಯಾಲೆಸ್ಟೈನ್ನರಲ್ಲಿ ಪಡೆದಿದ್ದರು. ಮುತ್ಸದಿತನ, ರಾಜಕೀಯ ನಾಯಕತ್ವ, ಮತ್ತು ರಾಜಿ ಇಲ್ಲದ ಸೈದ್ಧಾಂತಿಕ ಬದ್ಧತೆಯಲ್ಲಿ ಅವರಿಗಿಂತಲೂ ಮುಂದಿದ್ದರು.

ಪ್ಯಾಲೆಸ್ಟೈನ್‌ನಲ್ಲಿ ಕ್ರಿಶ್ಚಿಯನ್ ಮಧ್ಯಮ ವರ್ಗದ ಕುಟುಂಬದಲ್ಲಿ ಹಬಾಶ್ ಹುಟ್ಟಿದರು. ಎಲ್ಲಾ ಪ್ಯಾಲೆಸ್ಟೈನ್ನರಂತೆ ಅವರ ಕುಟುಂಬವನ್ನು ಇಸ್ರೇಲಿ ಝಿಯೋನಿಸ್ಟರು ಮನೆ ಬಿಟ್ಟು ಓಡಿಸಿದರು. ಆಗ ಅವರು ಬೀರೂತ್ (ಲೆಬನಾನ್ ರಾಜಧಾನಿ) ನ ಅಮೆರಿಕನ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಆಗಿದ್ದರು. ಆಗ ಪ್ರಬಲವಾಗಿದ್ದ ಅರಬ್ ರಾಷ್ಟ್ರೀಯ ಭಾವನೆಗಳಿಂದ ಪ್ರಭಾವಿತ ರಾಗಿದ್ದರು. ಪ್ಯಾಲೆಸ್ಟೈನ್ ಜನತೆಯ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯದ ಗೋರಿಯ ಮೇಲೆ ಕಟ್ಟಿದ ಇಸ್ರೇಲ್ ವಿರುದ್ಧ ಸೇಡು ತೆಗೆದುಕೊಳ್ಳುವುದು ಆಗಿನ ಯುವ ಪ್ಯಾಲೆಸ್ಟೈನ್ ಗುಂಪುಗಳ ಉದ್ದೇಶವಾಗಿತ್ತು. ಹಬಾಶ್ ಆಗ ವ್ಯಾಪಕವಾಗಿದ್ದ ಹಲವು ಉಗ್ರವಾದಿ ಚಟುವಟಿಕೆಗಳಲ್ಲಿ ಭಾಗವಹಿಸಿದರು. ಕ್ರಮೇಣ ಇಂತಹ ವೈಯಕ್ತಿಕ ಉಗ್ರವಾದಿ ಚಟುವಟಿಕೆಗಳಿಂದ, ಚಳುವಳಿ ಮುಂದೊಯ್ಯಲು ಪ್ರಯೋಜನ ಸೀಮಿತ. ಸಾಮೂಹಿಕ ಚಳುವಳಿ ಮತ್ತು ಕಾರ್ಯಾಚರಣೆ ಮೂಲಕ ಜನರ ಪ್ರಜ್ಞೆ ಎತ್ತರಿಸುವುದು ಅಗತ್ಯ. ಪ್ಯಾಲೆಸ್ಟೈನ್ ಒಳಗೆ ಸಶಸ್ತ್ರ ಹೋರಾಟ ಅನಿವಾರ್ಯ. ಅರಬ್ ದೇಶಗಳ ಆಳರಸರೂ ಸ್ವತಂತ್ರ ನೀತಿ ಅನುಸರಿಸವಂತೆ ಮಾಡುವುದು ಅಗತ್ಯ ಎಂದು ಕಂಡುಕೊಂಡರು.




ವಿದ್ಯಾಭ್ಯಾಸ ಮುಗಿದ ಮೇಲೆ ತಮ್ಮ ಸಹಪಾಠಿಗಳ ಜತೆ ಜೋರ್ಡಾನ್‌ನಲ್ಲಿ ವಾಸವಾಗಿದ್ದ ಬಡ ಪ್ಯಾಲೆಸ್ಟೈನ್‌ರಿಗೆ ಉಚಿತ ವೈದ್ಯಕೀಯ ಸೇವೆ ಸಲ್ಲಿಸಿದರು. ಅರಬ್ ರಾಷ್ಟ್ರೀಯ ವಾದಿ ಚಳುವಳಿ ಎಂಬ ಸಂಘಟನೆಯನ್ನು ಸಹ ಅವರು ಸ್ಥಾಪಿಸಿದರು. 1967 ರ ಯುದ್ಧದ ನಂತರ ಪಿ.ಎಲ್.ಎಫ್.ಪಿ. (ಜನಪ್ರಿಯ ಪ್ಯಾಲೆಸ್ಟೈನ್ ವಿಮೋಚನಾ ರಂಗ) ಸ್ಥಾಪಿಸಿದರು. ಅದು ಬಲು ಬೇಗನೇ ಎರಡನೇ ಅತಿ ದೊಡ್ಡ ವಿಮೋಚನಾ ಹೋರಾಟದ ಗುಂಪಾಗಿ ಹೊಮ್ಮಿತು. ಝಿಯೋನಿಸಂ ವಿರುದ್ಧ ಸಶಸ್ತ್ರ ಹೋರಾಟ, ಮಾರ್ಕ್ಸವಾದ-ಲೆನಿನ್‌ವಾದದ ಸೈದ್ಧಾಂತಿಕ ಮತ್ತು ಹೋರಾಟದಲ್ಲಿ ತರಬೇತಿ ಪಡೆದ ಗೆರಿಲ್ಲಾ ಪಡೆ ಪಿ.ಎಲ್.ಎಫ್.ಪಿ.ಯ ವಿಶಿಷ್ಟತೆಯಾಗಿತ್ತು. ಇತರ ಅರಬ್ ದೇಶಗಳಿಂದ ಬಂದ ಹೋರಾಟಗಾರರೂ ಪ್ಯಾಲೆಸ್ಟೈನ್ ವಿಮೋಚನಾ ಹೋರಾಟದಲ್ಲಿ ತೊಡಗಿದ್ದರು. ಪಿ.ಎಲ್.ಎಫ್.ಪಿ. 70 ರ ದಶಕದಲ್ಲಿ ಪ್ಯಾಲೆಸ್ಟೈನ್ ಸಮಸ್ಯೆಗೆ ಅಂತರ್ರಾಷ್ಟ್ರೀಯ ಗಮನ ಸೆಳೆಯಲು ನಡೆಸಿದ ವಿಮಾನ ಅಪಹರಣಗಳಿಗೆ ಪ್ರಸಿದ್ಧವಾಗಿದೆ. ಈ ಹೋರಾಟದ ವಿಧಾನ ಸೀಮಿತ ಅವಧಿಗೆ, ಸೀಮಿತ ಉದ್ದೇಶಗಳಿಗೆ ಆಗಿತ್ತು. ಆದರೆ ಕೆಲವು ಸದಸ್ಯರು ಅದನ್ನೇ ಸಾರ್ವಕಾಲಿಕ ರಣನೀತಿ ಎಂದು ತಪ್ಪಾಗಿ ತಿಳಿದುಕೊಂಡಿದ್ದು, ಚಳುವಳಿಗೆ ಹಾನಿ ಮಾಡಿತು. ಅವರನ್ನು ಆ ಮೇಲೆ ಪಿ.ಎಲ್.ಎಫ್.ಪಿ.ನಿಂದ ಹೊರಗೆ ಕಳಿಸಲಾಯಿತು.

ಪ್ಯಾಲೆಸ್ಟೈನ್ ರಾಷ್ಟ್ರೀಯ ಹೋರಾಟದ ಐಕ್ಯರಂಗವಾದ ಪಿ.ಎಲ್.ಓ.ದ ರಚನೆ ಮತ್ತು ಐಕ್ಯ ಕಾರ್ಯಾಚರಣೆಯಲ್ಲಿ ಸಹ ಪಿ.ಎಲ್.ಎಫ್.ಪಿ., ಅರಾಫತ್‌ರ ಅಲ್-ಫತೆಹ್ ಜತೆ ದೊಡ್ಡ ಪಾತ್ರ ವಹಿಸಿತು. ಪಿ.ಎಲ್.ಓ. 1974 ರ ನಂತರ ಇಸ್ರೇಲ್-ಅಮೆರಿಕಗಳ ಜತೆ ರಾಜಿಗೆ ಮುಂದಾದಾಗ, ಪಿ.ಎಲ್.ಎಫ್.ಪಿ., ಅದನ್ನು ವಿರೋಧಿಸಿತು. 80-90ರ ದಶಕದಲ್ಲಿ ಇಸ್ಲಾಮಿಕ್ ಮೂಲಭೂತವಾದ ಬೇರೂರುವ ಮೊದಲು ಪಿ.ಎಲ್.ಎಫ್.ಪಿ., ಮತ್ತು ಅಂತಹ ಇತರ ಎಡ ಸಂಘಟನೆಗಳು ಅರಬ್ ದೇಶಗಳಲ್ಲಿ ಬಲವಾದ ಎಡ ಸೆಕ್ಯುಲರ್ ರಾಜಕೀಯವನ್ನು ಸ್ಥಾಪಿಸಿದ್ದವು. ಹಬಾಶ್‌ರ ಪಾತ್ರ ಅದರಲ್ಲಿ ಮಹತ್ತರವಾದದ್ದು. ಮೂಲಭೂತವಾದ ಮತ್ತು ಅಮೆರಿಕದ ಕೈಗೊಂಬೆ ಆಳರಸರ ನಡುವೆ ಜರ್ಝರಿತವಾದ ಅರಬರನ್ನು ಜಾರ್ಜ ಹಬಾಶ್‌ರಂತಹ ನಾಯಕರ ಕೊರತೆ ಇನ್ನಷ್ಟು ಕಾಡಲಿದೆ.

ಆಸ್ಟ್ರೇಲಿಯನ್ ಆದಿವಾಸಿಗಳಿಂದ ಪ್ರಧಾನಿ ಕ್ಷಮಾಯಾಚನೆ

ಆಸ್ಟ್ರೇಲಿಯದ ಪ್ರಧಾನಿ ಕೆವಿನ್ ರುಡ್ ಪಾರ್ಲಿಮೆಂಟಿನಲ್ಲಿ ಆ ದೇಶದ ಆದಿವಾಸಿಗಳಿಂದ ಕ್ಷಮಾಯಾಚನೆ ಮಾಡಿ ಚರಿತ್ರೆ ನಿರ್ಮಿಸಿದರು. ಕೆವಿನ್ ಹೊಸದಾಗಿ ಚುನಾಯಿತವಾದ ಪಾರ್ಲಿಮೆಂಟಿನ ಮೊದಲ ಅಧಿವೇಶನದಲ್ಲಿ ದೇಶ ಮತ್ತು ಸರ್ಕಾರದ ಪರವಾಗಿ ಈ ಕ್ಷಮಾಯಾಚನೆ ಮಾಡಿದರು. ಆ ಮೂಲಕ ತಮ್ಮ ಒಂದು ಚುನಾವಣಾ ಭರವಸೆ ಈಡೇರಿಸಿದರು. ಈ ಬಗ್ಗೆ 11 ವರ್ಷಗಳ ದೀರ್ಘ ವಿವಾದಕ್ಕೆ ತೆರೆ ಎಳೆದರು. ಎಲ್ಲರನ್ನೂ ಒಳಗೊಳ್ಳುವ ದೇಶ ಕಟ್ಟುವತ್ತ ಉತ್ತಮ ಮೇಲ್ಪಂಕ್ತಿ ಹಾಕಿದರು. ದೇಶದ ಎಲ್ಲಾ ಸಮಸ್ಯೆಗಳಿಗೆ ಅಲ್ಪಸಂಖ್ಯಾತರೇ ಕಾರಣ ಎಂದು ಗೂಬೆ ಕೂರಿಸುವ, ಒಡೆದು ಆಳುವ ಧೋರಣೆ ಎಲ್ಲಾ ಆಳರಸರಲ್ಲಿ ಸಾಮಾನ್ಯವಾಗಿದೆ. ಇಂತಹ ಸನ್ನಿವೇಶದಲ್ಲಿ ಇದು ಸಾಂಕೇತಿಕವಾದರೂ, ಆಶಾವಾದಿ ಸಂಕೇತ.

ಎಲ್ಲೆಡೆಯಂತೆ ಆಸ್ಟ್ರೇಲಿಯದಲ್ಲೂ ಯುರೋಪಿಯನ್ ಬಿಳಿಯರು 17 ನೇ ಶತಮಾನದಲ್ಲಿ ಈ ನೆಲದಲ್ಲಿ ಕಾಲಿಟ್ಟಾಗ ದೊಡ್ಡ ಸಂಖ್ಯೆಯಲ್ಲಿ ಆದಿವಾಸಿಗಳು ನೆಲೆಸಿದ್ದರು. ಬಿಳಿಯರು ಶಸ್ತ್ರಾಸ್ತ್ರಗಳಲ್ಲಿ, ಉತ್ಪಾದನಾ-ಆರ್ಥಿಕ ಬಲ ಮತ್ತು ತಂತ್ರಜ್ಞಾನದಲ್ಲಿ ಇದ್ದ ತಮ್ಮ ಮೇಲುಗೈ ಬಳಸಿದರು. ಆದಿವಾಸಿಗಳ ಮೇಲೆ ಮತ್ತು ಆ ಪ್ರದೇಶದ ಸಂಪನ್ಮೂಲಗಳ ಮೇಲೆ ತಮ್ಮ ಒಡೆತನ ಸ್ಥಾಪಿಸಿದರು. ಇದರ ಭಾಗವಾಗಿ ಅವರು ಮಾಡದ ಕುಕೃತ್ಯಗಳಿಲ್ಲ. ಅಪರಾಧಗಳಿಲ್ಲ. ದೊಡ್ಡ ಸಂಖ್ಯೆಯಲ್ಲಿ ಆದಿವಾಸಿಗಳನ್ನು ಗುಲಾಮರನ್ನಾಗಿ ಮಾಡಲಾಯಿತು. ಪಶುಗಳಂತೆ ದುಡಿಸಿಕೊಳ್ಳಲಾಯಿತು. ಅದಕ್ಕೆ ಪ್ರತಿರೋಧ ಒಡ್ಡಿದವರ ನರಮೇಧ ನಡೆಸಲಾಯಿತು. ಟಸ್ಮಾನಿಯಾ ಎಂಬ ಪ್ರದೇಶದಲ್ಲಿ ಇಡೀ ಆದಿವಾಸಿ ಪೀಳಿಗೆಯನ್ನು ನಾಶ ಮಾಡಲಾಯಿತು.



ಕಳೆದ ಶತಮಾನದಲ್ಲಿ (ಸುಮಾರು 1910 ರಿಂದ 1970 ರವರೆಗೆ) ಆದಿವಾಸಿಗಳನ್ನು ರಾಷ್ಟ್ರೀಯ ಮುಖ್ಯಧಾರೆಗೆ ಸೇರಿಸುವ ಹೆಸರಲ್ಲಿ ಲಕ್ಷಾಂತರ ಮಕ್ಕಳನ್ನು ಅವರ ಕುಟುಂಬಗಳಿಂದ ಬಲಾತ್ಕಾರವಾಗಿ ದೂರ ಒಯ್ದು ಬಿಳಿಯರ ಕುಟುಂಬಗಳಲ್ಲಿ ಬಿಡಲಾಯಿತು. ಅವರ ಕುಟುಂಬ, ಪ್ರದೇಶ, ಜೀವನ ವಿಧಾನದಿಂದ ಬಲಾತ್ಕಾರವಾಗಿ ಪ್ರತ್ಯೇಕಿಸಲ್ಪಟ್ಟ ಈ ಆದಿವಾಸಿಗಳಲ್ಲಿ ಹೆಚ್ಚಿನವರು, ಈ ಬದಲಾವಣೆಯಿಂದ ಆದ ಆಳವಾದ ಶಾಶ್ವತವಾದ ಮಾನಸಿಕ ಆಘಾತದಿಂದ ಇಂದಿಗೂ ಬಳಲುತ್ತಿದ್ದಾರೆ. ಅವರ ಜೀವನ ಮಟ್ಟ ಸಹ ದೊಡ್ಡ ರೀತಿಯಲ್ಲಿ ಸುಧಾರಿಸಲಿಲ್ಲ. ಅವರನ್ನು ಹೆಚ್ಚು ಕಡಿಮೆ ಗುಲಾಮರಂತೆ ನಡೆಸಿಕೊಳ್ಳುವುದು, ಅವರ ವಿರುದ್ಧ ತಾರತಮ್ಯದ ಧೋರಣೆ ಮುಂದುವರೆಯಿತು. ಈ ಚಾರಿತ್ರಿಕ ಅಪರಾಧದ ಬಗ್ಗೆ ಆಸ್ಟ್ರೇಲಿಯದಲ್ಲಿ ತೀವ್ರ ವಿವಾದ ಎದ್ದಿತ್ತು. ಆ ಬಗ್ಗೆ ಸರ್ಕಾರ ಒಂದು ತನಿಖಾ ಆಯೋಗ ನೇಮಿಸಲ್ಪಟ್ಟು 1997 ರಲ್ಲಿ ಅದು ವರದಿ ಸಲ್ಲಿಸಿತು.

ಮೂವರಲ್ಲಿ ಒಬ್ಬ ಆದಿವಾಸಿ ಮಕ್ಕಳ ಮೇಲೆ ಈ ಅಪರಾಧ ಎಸಗಲಾಯಿತು. ಇಂದಿಗೂ ಎಲ್ಲಾ ಬೆಳವಣಿಗೆ ಸೂಚಕಗಳಲ್ಲಿ ಬಿಳಿಯರಿಗೂ, ಆದಿವಾಸಿಗಳಿಗೂ ಅಜಗಜಾಂತರವಿದೆ. ಒಟ್ಟಾರೆ ಜೀವನ ಮಟ್ಟ ಸೂಚಿಸುವ ಸರಾಸರಿ ಆಯುಷ್ಯದಲ್ಲಿ ಆದಿವಾಸಿಗಳು ಸರಾಸರಿ ಆಸ್ಟ್ರೇಲಿಯನ್ನರಿಗಿಂತ 17 ವರ್ಷಗಳಷ್ಟು ಕೆಳಗಿದ್ದಾರೆ. ಈ ಕಂದರ ಮುಚ್ಚಲು ಕ್ರಮ ಕೈಗೊಳ್ಳಬೇಕು ಮತ್ತು ಚಾರಿತ್ರಿಕ ಅಪರಾಧಗಳಿಗೆ ಕ್ಷಮಾಯಾಚನೆ ಮಾಡಬೇಕೆಂದು ಆಯೋಗ ಶಿಫಾರಸು ಮಾಡಿತು. ಅದರ ಜಾರಿ ಬಗ್ಗೆ ಆಗಿನಿಂದ ವಿವಾದ ನಡೆದಿದೆ. ಹಿಂದಿನ ಪೀಳಿಗೆಗಳ ಅಪರಾಧಗಳಿಗೆ ಈಗಿನ ಪೀಳಿಗೆಗಳು ಜವಾಬ್ದಾರರಲ್ಲ. ಅದಕ್ಕೆ ಕ್ಷಮಾಯಾಚನೆಯಲ್ಲಿ ಅರ್ಥ ಇಲ್ಲ ಎಂಬುದು ಒಂದು ಅಭಿಪ್ರಾಯ. ಆಯೋಗ ವರದಿ ನ್ಯಾಯಯುತ. ಅದನ್ನು ಜಾರಿ ಮಾಡಬೇಕು. ಎಂಬುದು ಇನ್ನೊಂದು ಅಭಿಪ್ರಾಯ. ನಾಲ್ಕು ಅವಧಿಗಳ ಕಾಲ ಆಳಿದ ಹಿಂದಿನ ಹೊವಾರ್ಡ ಸರ್ಕಾರ ಕ್ಷಮಾಯಾಚನೆಗೆ ವಿರೋಧವಾಗಿತ್ತು. ಇದು ಚುನಾವಣಾ ವಿಷಯವೂ ಆಗಿತ್ತು. ಈ ಹಿನ್ನೆಲೆಯಲ್ಲಿ ಕೆವಿನ್ ಸರ್ಕಾರದ ಈ ಕ್ರಮಕ್ಕೆ ಹರ್ಷ, ಕಂಬನಿಗಳ ಸ್ವಾಗತ ಸಿಕ್ಕಿದೆ.

ಕಂಬಾಲಪಲ್ಲಿ ಮಾತ್ರವಲ್ಲ ...

ಪುಟ 5 ರಿಂದ

ಕೊರತೆ ಕಾರಣ ನೀಡಿ ಆರೋಪಿಗಳನ್ನು ಖುಲಾಸೆಗೊಳಿಸಲಾಗಿದೆ.

ಈ ಮೂರು ಪ್ರಕರಣಗಳಲ್ಲಿ ದಲಿತರಿಗೆ ನ್ಯಾಯ ಸಿಗಬೇಕೆಂದು, ಹಾಗೂ ದಲಿತ ಸಂಘರ್ಷ ಸಮಿತಿ 'ರಾಜ್‌ಭವನ್ ಚಲೋ' ನಡೆಸಿದೆ.

ನಾಗಲಪಲ್ಲಿ ಹಾಗೂ ಕಂಬಾಲಪಲ್ಲಿ ಪ್ರಕರಣಗಳನ್ನು ಹೊರ ರಾಜ್ಯದಲ್ಲಿ ಮರು ವಿಚಾರಣೆಗೊಳಿಸಬೇಕು, ಕೊಲೆಗಡುಕರಿಗೆ ಉಗ್ರ ಶಿಕ್ಷೆಯಾಗಬೇಕೆಂದೂ ಹೆಬ್ಬಾಣಿ ಪ್ರಕರಣದ ಆರೋಪಿಗಳನ್ನು ಕೂಡಲೇ ಬಂಧಿಸಿ ಸೆಕ್ಷನ್ 307ನ್ನು ಹಾಕಬೇಕು ಹಾಗೂ ಮರು ಶವಪರೀಕ್ಷೆ ನಡೆಸಬೇಕೆಂದು ಒತ್ತಾಯಿಸಲಾಗಿದೆ. ಇದೇ ವೇಳೆ ದಲಿತರ ಮೇಲಿನ ದೌರ್ಜನ್ಯಗಳು ರಾಜ್ಯದಲ್ಲಿ ವಿಶೇಷವಾಗಿ ಕೋಲಾರ ಜಿಲ್ಲೆಯಲ್ಲಿ ಹೆಚ್ಚುತ್ತಿದ್ದು ಇದನ್ನು ತಡೆಗಟ್ಟಲು ಸರ್ಕಾರ ಮುಂದಾಗ ಬೇಕೆಂದು ಆಗ್ರಹಿಸಲಾಗಿದೆ.


ಪ್ರತಿಭಟನೆ/ರ್‍ಯಾಲಿಗಳಿಂದ ಟ್ರಾಫಿಕ್ ಜಾಮ್ ಆಗಿ ಭಾರಿ ತೊಂದರೆಯಾಗುತ್ತಿದೆ ಎಂದ್ಹೇಳಿ ಸ್ವಯಂ ವಿಚಾರಣೆ ನಡೆಸುವ ನ್ಯಾಯಾಲಯಗಳು ದೇಶದಲ್ಲಿ ವಾರ್ಷಿಕ 25 ಸಾವಿರ ದಲಿತ ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿದ್ದರೂ ಈ ಬಗ್ಗೆ ದಿವ್ಯ ನಿರ್ಲಕ್ಷ್ಯ ವಹಿಸಿರುವುದು ನ್ಯಾಯಾಂಗ ವ್ಯವಸ್ಥೆ ಬಗ್ಗೆ ಭ್ರಮನಿರಸನಗೊಳ್ಳುವಂತೆ ಮಾಡಿದೆ. ಇದು ದಲಿತ ನಡುವೆ ಬೆಳೆಯುತ್ತಿರುವ ವಿಮೋಚನೆಯ ಪ್ರಜ್ಞೆಯನ್ನು ದಮನ ಮಾಡುವ ಪ್ರಯತ್ನವಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಪ್ರಗತಿಪರ ಶಕ್ತಿಗಳು ಜಾತಿ ದಮನದ ವಿರುದ್ಧ ಐಕ್ಯ ಸಮರ ಸಾರುವ ತುರ್ತು ಅಗತ್ಯವಿದೆ.

ಲಿಂಗರಾಜು



ಸಾಗರದ ತಳದಲ್ಲಿನ ಕೇಬಲ್ ಕಡಿತ ಐಟಿ ಕಂಪನಿಗಳ ತಳಮಳ



ಐಟಿ ಕಂಪನಿಗಳ ಮಾಹಿತಿ ರಹದಾರಿಯಲ್ಲಿ ದೊಡ್ಡ ಹೊಂಡ:

ಸಾಗರದ ತಳದಲ್ಲಿ ಹುಗಿದಿಟ್ಟಿರುವ ಕೇಬಲ್‌ಗಳು ಕತ್ತರಿಸಿ ಹೋಗಿದ್ದರಿಂದ ಐಟಿ ಕಂಪನಿಗಳು ಮತ್ತು ಹೊರಗುತ್ತಿಗೆ ಕಂಪನಿಗಳಿಗೆ ಕಳೆದ ವಾರ ಆತಂಕ ಸೃಷ್ಟಿಯಾಗಿತ್ತು. ಏಕೆಂದರೆ ಇಂಥಹ ಕೇಬಲ್‌ಗಳ ಮೂಲಕವೇ ದೇಶ ದೇಶಗಳ ನಡುವೆ ದೂರವಾಣಿ ಮತ್ತು ಇಂಟರ್‌ನೆಟ್ ಟ್ರಾಫಿಕ್ ಚಲಿಸುವುದು. ಭಾರತೀಯ ಕಾಲ್ ಸೆಂಟರ್ ಕಂಪನಿಗಳ ಪೈಕಿ ಶೇ. 20ರಿಂದ 30ರಷ್ಟು ಕಂಪನಿಗಳ ದೂರವಾಣಿ ಪ್ರಕ್ರಿಯೆಗಳು ತೊಂದರೆಗೆ ಸಿಲುಕಿದವು. ಆದರೂ ಮತ್ತೊಂದು ಪರ್ಯಾಯ ಕೇಬಲ್ ಸಂಪರ್ಕ ಹೊಂದಿದ್ದರಿಂದ ಈಜಿಪ್ಟ್ ಸಾಗರತಳದ ಕೇಬಲ್ ಕಡಿತದಿಂದ ಪ್ರತಿಷ್ಠಿತ ಭಾರತೀಯ ಕಂಪನಿಗಳ ಪ್ರಕ್ರಿಯೆಗಳಿಗೆ ಯಾವುದೇ ದುಷ್ಪರಿಣಾಮ ಉಂಟಾಗಲಿಲ್ಲ.

ದೂರವಾಣಿ, ಮಾಹಿತಿ ಸಂವಹನಗಳು, ಧ್ವನಿ ಸಂಜ್ಞೆಗಳು, ಇಂಟರ್‌ನೆಟ್ ಮತ್ತು ಖಾಸಗಿ ಮಾಹಿತಿ ಟ್ರಾಫಿಕ್‌ನ್ನು ಒಂದೆಡೆಯಿಂದ ಮತ್ತೊಂದೆಡೆಗೆ ವರ್ಗಾಯಿಸುವುದಕ್ಕೆ ಮಾಹಿತಿ ಸಂವಹನ ಟ್ರಾಫಿಕ್ ಎನ್ನುತ್ತಾರೆ. ಇದನ್ನು ಡಿಜಿಟಲ್ ಸಿಗ್ನಲ್‌ಗಳ ಮೂಲಕ ವರ್ಗಾಯಿಸುವುದಕ್ಕೆ ಆಪ್ಟಿಕಲ್ ಫೈಬರ್ ತಂತ್ರಜ್ಞಾನವನ್ನು ಬಳಸುತ್ತಾರೆ. ಸಾಮಾನ್ಯವಾಗಿ ಆಪ್ಟಿಕಲ್ ಫೈಬರ್‌ನ್ನು ಕೇಬಲ್‌ನೊಳಗೆ ಸೇರಿಸಲಾಗುತ್ತದೆ. ಈ ಕೇಬಲ್‌ಗಳು ಸುಮಾರು ಎರಡೂವರೆ ಇಂಚು ವ್ಯಾಸವನ್ನು ಹೊಂದಿದ್ದು ಪ್ರತಿ ಮೀಟರ್‌ಗೆ 10ಕೆಜಿ ತೂಕವೊಂದಿರುತ್ತವೆ. ಇಂಥಹ ಕೇಬಲ್‌ಗಳು ಅಂಟಾರ್ಕ್ಟಿಕಾವನ್ನು ಹೊರತು ಪಡಿಸಿದರೆ, ಎಲ್ಲ



ಖಂಡಗಳಿಗೂ ಒಂದಕ್ಕೊಂದು ಸಂಪರ್ಕ ಕಲ್ಪಿಸಿವೆ.


ಕೇಬಲ್ ಕಡಿತಕ್ಕೆ ಕಾರಣಗಳೇನು?

ಇಂಥಹ ಕೇಬಲ್‌ಗಳು ಸಾಮಾನ್ಯವಾಗಿ ಕತ್ತರಿಸಿಹೋಗುವುದಕ್ಕೆ ಹಲವಾರು ಕಾರಣಗಳಿವೆ: ಮೀನು ಹಿಡಿಯುವ ಮೋಟಾರು ದೋಣಿ, ಹಡಗುಗಳು ನಿಲ್ಲುವ ವೇಳೆ ಸಂಭವಿಸುವ ಏರುಪೇರು, ಭೂಕಂಪನ, ಚಂಡಮಾರುತ, ಇತ್ಯಾದಿಗಳಿಂದಾಗಿ ಸಾಗರದಲ್ಲುಂಟಾಗುವ ದಿಢೀರ್ ಬದಲಾವಣೆ, ಶಾರ್ಕ್ ಮೀನುಗಳ ಕಡಿತ, ಇತ್ಯಾದಿ.

ಈ ಸಲ ಈಜಿಪ್ಟಿನ ಕಡಲ ತಡಿಯಲ್ಲಿದ್ದ ಅಲೆಗ್ಸಾಂಡ್ರಿಯಾ ಹಡಗು ನಿಲ್ದಾಣದಲ್ಲಿ ಅತೀವ ಚಂಡಮಾರುತ ಉಂಟಾದ್ದರಿಂದ, ಹಡಗುಗಳನ್ನು ಬೇರೆಡೆಗೆ ತಿರುಗಿಸಲಾಯಿತು. ಆ ಸಂದರ್ಭದಲ್ಲಿ ಸಾಗರತಟದಲ್ಲಿ ಹುಗಿದಿದ್ದ ಕೇಬಲ್‌ನ್ನು ಹಡಗುಗಳ ಓಡಾಟ ಕತ್ತರಿಸಿ ಹಾಕಿದೆಯೆಂಬುದು ಒಂದು ಬಲವಾದ ಕಾರಣ.

ತೊಂದರೆಗೆ ಸಿಲುಕಿದ ದೂರವಾಣಿ ಕೇಬಲ್‌ಗಳು:

ಮೊದಲಿಗೆ ಎರಡು ಅಂತರಾಷ್ಟ್ರೀಯ ಕೇಬಲ್‌ಗಳು ಕಡಿತಗೊಂಡ ವರದಿಯಾಯಿತು. ಫ್ಲಾಗ್ ಟೆಲಿಕಾಂ ಕಂಪನಿಯ 'ಫಾಲ್ಕನ್' ಎಂಬ ಯೂರೋಪ್-ಏಷ್ಯಾ ನಡುವಿನ ಒಂದು ಕೇಬಲ್ ಮತ್ತು 12 ಟೆಲಿಕಾಂ ಸಂವಹನ ಕಂಪನಿಗಳು ಮಾಲೀಕತ್ವ ಹೊಂದಿರುವ ಸಿಮಿವಿ-4 ಕಂಪನಿಯ ಮತ್ತೊಂದು ಕೇಬಲ್. ಇದರಲ್ಲಿ ಟಾಟಾರವರ ವಿಎಸ್‌ಎನ್‌ಎಲ್ ಮತ್ತು ಭಾರತಿ ಏರ್ ಟೆಲ್ ಕಂಪನಿಯದು ಪಾಲಿದೆ. ಫ್ಲಾಗ್ ಕೇಬಲ್‌ನಲ್ಲಿ ರಿಲಯನ್ಸ್ ಕಂಪನಿಯು ಮಾಲೀಕತ್ವ ಹೊಂದಿದೆ. ಇದರಿಂದಾಗಿ ಶ್ರೀಲಂಕಾ, ಇಂಗ್ಲೆಂಡ್,



ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಮಧ್ಯ ಪ್ರಾಚ್ಯ ದೇಶಗಳ ಟೆಲಿಕಾಂ ಸಂವಹನ ವ್ಯವಸ್ಥೆ ಕೆಲಮಟ್ಟಿಗೆ ಅಸ್ತವ್ಯಸ್ತಗೊಂಡಿತು. ಅಲ್ಲದೆ ಮಾರನೆಯ ದಿನವೇ ಇದರೊಂದಿಗೆ ಇನ್ನೂ 6 ಕೇಬಲ್ ಗಳು ಮಧ್ಯಪ್ರಾಚ್ಯ ದೇಶಗಳಲ್ಲೇ ಕಡಿತಗೊಂಡು ಆ ರಾಷ್ಟ್ರಗಳಿಗೆ ತಲೆನೋವು ತಂದವು. ಕೇಬಲ್ ರಿಪೇರಿ ಮಾಡಲು ಸದಾ ಜಾಗೃತವಾಗಿ ನಿಂತಿರುವ ಹಡಗುಗಳು ದುರಸ್ತಿ ಕಾರ್ಯದಲ್ಲಿ ನಿರತವಾಗಿವೆ.

'ಅಮೇರಿಕಾ' ಭಯೋತ್ಪಾದನೆಯ ಗುಮ್ಮ?

ಕೇಬಲ್ ಕಡಿತದಿಂದಾಗಿ ಬಹುತೇಕ ಮಧ್ಯಪ್ರಾಚ್ಯ ರಾಷ್ಟ್ರಗಳ ದೂರವಾಣಿ ಮತ್ತು ಇಂಟರ್‌ನೆಟ್ ಟ್ರಾಫಿಕ್‌ನ್ನು ಹೆಚ್ಚಿನ ಸಂಕಷ್ಟಕ್ಕೆ ಸಿಲುಕಿಸಿರುವ ಹಿನ್ನೆಲೆಯಲ್ಲಿ ಇದರ ಹಿಂದೆ ಅಂತರಾಷ್ಟ್ರೀಯ ಮುಸ್ಲಿ-ವಿರೋಧಿ ಕಂಪನಿಗಳ ಕೈವಾಡ ಇರಬಹುದೇ ಎಂಬುದೊಂದು ಶಂಕೆ. ಏಕೆಂದರೆ, ಅಮೇರಿಕಾ ಮತ್ತು ಇಸ್ರೇಲ್‌ಗಳು ಯಾವುದಾದರೂ ಪಟ್ಟಿನಿಂದ ಮಧ್ಯಪ್ರಾಚ್ಯ ರಾಷ್ಟ್ರಗಳನ್ನು 'ಖೆಡ್ಡಾ'ಕ್ಕೆ ಬೀಳಿಸಲು ಹವಣಿಸುತ್ತಿರುವುದು ರಹಸ್ಯವೇನಲ್ಲ.

○

ಗೆಲುವಿನತ್ತ ತ್ರಿಪುರ ಎಡರಂಗ...

ಪುಟ 11ರಿಂದ

ಕೊಲೆ, ಸುಲಿಗೆ, ಅತ್ಯಾಚಾರ, ಅಪಹರಣ ಮೊದಲಾದ ಕುಕೃತ್ಯಗಳನ್ನು ಎನ್‌ಎಲ್‌ಎಫ್‌ಟಿ (ಬಿಎಂ) ಮತ್ತು ಎಟಿಟಿಎಫ್ ಹೆಸರಲ್ಲಿ ಮುಂದುವರೆಸಲಾಯಿತು. ಇದರ ಪರಿಣಾಮವಾಗಿ ಆದಿವಾಸಿ ಪ್ರದೇಶಗಳಲ್ಲಿ ಸುಮಾರು 200 ಶಾಲೆಗಳು ಮುಚ್ಚಬೇಕಾದ ಸ್ಥಿತಿ ಬಂದೊದಗಿತು. ಈ ಪ್ರತ್ಯೇಕವಾದಿಗಳನ್ನು ಬಳಸಿಕೊಂಡು ಕಾಂಗ್ರೆಸ್ 2000ರಲ್ಲಿ ವಿವಿಧ ಚುನಾವಣೆಗಳಲ್ಲಿ ಮತ್ತು ಸ್ವಾಯತ್ತ ಜಿಲ್ಲಾ ಮಂಡಳಿ ಚುನಾವಣೆಗಳಲ್ಲಿ ಗನ್ ಪಾಯಿಂಟ್‌ಗಳಿಂದ ಅಧಿಕಾರ ಹಿಡಿಯಿತು. ಈ ಎಲ್ಲಾ ಮಂಡಳಿಗಳಲ್ಲಿ ಅಭಿವೃದ್ಧಿಗೆ ಮೀಸಲಾಗಿದ್ದ ಹಣವನ್ನು ಲೂಟಿ ಮಾಡಲಾಯಿತು. 2003ರ ಅಸೆಂಬ್ಲಿ ಚುನಾವಣೆಗಳಲ್ಲಿ ಇದೇ ನೀಲಿ ನಕ್ಷೆಯನ್ನು ಆ ದುಷ್ಟ ಕೂಟ ಹೆಣೆದಿತ್ತು. ತ್ರಿಪುರಾ ಜನತೆ ನಿರ್ಭಯವಾಗಿ ಮುನ್ನುಗ್ಗಿ ಮತ ಚಲಾಯಿಸಿ 5ನೇ ಬಾರಿಗೆ ಎಡರಂಗ ಸರ್ಕಾರ ರಚಿಸಲು ಕಾರಣವಾದರು.

3 ಮತ್ತು 4ನೇ ಎಡರಂಗ ಸರ್ಕಾರಗಳು ರಾಜ್ಯದಲ್ಲಿ ಅಭಿವೃದ್ಧಿ ಪಥದ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವವನ್ನು ಮರು ಸ್ಥಾಪಿಸಿದ್ದವು. ತ್ರಿಪುರಾದಲ್ಲಿ ಮಿತಿ ಮೀರಿದ ಹಿಂಸಾಚಾರ ಹಾವಳಿ, ತಡೆಗಟ್ಟಲು ಹಾಗೂ ಈ ಎರಡೂ ಅವಧಿಯ ಸರ್ಕಾರಗಳು ಸಾಕಷ್ಟು ಪ್ರಮುಖ ಪಾತ್ರ ವಹಿಸಿತು. ಇನ್ನೂ 5ನೇಅವಧಿಗೆ ಅಧಿಕಾರಕ್ಕೆ ಬಂದ ಎಡರಂಗ ಸರ್ಕಾರವಂತೂ ರಾಜ್ಯದಲ್ಲಿ ಪ್ರತ್ಯೇಕತೆಯನ್ನು ಭಾವನೆಯನ್ನು ಅಳಸಿ ಹಾಕುವಲ್ಲಿ, ರಾಜ್ಯದಲ್ಲಿ ಪರಿಣಾಮಕಾರಿ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸುವಲ್ಲಿ ಜನರ ತಲಾ ಆದಾಯವನ್ನು ಹೆಚ್ಚಿಸುವಲ್ಲಿ ಆಹಾರ ಉತ್ಪಾದನೆ, ಯುವಜನರಿಗೆ ಶಿಕ್ಷಣ, ಉದ್ಯೋಗಗಳನ್ನು ಸೃಷ್ಟಿಸುವಲ್ಲಿ, ಮಹಿಳೆಯರ ಸಾಮಾಜಿಕ-ಆರ್ಥಿಕ ಅಭಿವೃದ್ಧಿ ಸಾಧನೆ ಅವರ ರಕ್ಷಣೆಗೆ ಹಲವು ಕ್ರಮಗಳನ್ನು ಎಸ್‌ಸಿ/ಎಸ್‌ಟಿ, ಓಬಿಸಿ ಜನರ ಅಭಿವೃದ್ಧಿಗೆ ಹತ್ತಾರು ಕ್ರಮಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲಾಗಿದೆ. ಮಾತ್ರವಲ್ಲ ದಾರಿ ತಪ್ಪಿಸಿ ಪ್ರತ್ಯೇಕವಾದಿ ಗುಂಪುಗಳಲ್ಲಿ ಸಕ್ರಿಯವಾಗಿದ್ದ ಹಲವಾರು ಯುವಕರನ್ನು ಮುಖ್ಯವಾಹಿನಿಗೆ ತರಲು ಸಾಧ್ಯವಾಗಿದೆ.

ಅಲ್ಲದೆ, ವಿಶೇಷವಾಗಿ ಆದಿವಾಸಿ ಜನರ ಕಲ್ಯಾಣಕ್ಕಾಗಿ ಪ್ರತ್ಯೇಕ ಸ್ವಾಯತ್ತ ಮಂಡಳಿಗಳನ್ನು ರಚಿಸಿ, ಜನರಿಗೆ ಎಲ್ಲಾ ಸರ್ಕಾರಿ ಸವಲತ್ತುಗಳು ತಲುಪುವಂತಹ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿತು. ಇದರ ಪರಿಣಾಮವಾಗಿ ಈ ಅವಧಿಯಲ್ಲಿ ಅದುವರೆಗೂ ಎಡರಂಗದ ವಿರುದ್ಧ ಇದ್ದ ಸುಮಾರು 56 ಸಾವಿರ ಆದಿವಾಸಿ ಕುಟುಂಬಗಳು ತಮ್ಮ ಬದ್ಧತೆಯನ್ನು ಎಡರಂಗದ ಪರವಾಗಿ ಬದಲಾಯಿಸಲು ಸಾಧ್ಯವಾಯಿತು. ಇದರ ಪರಿಣಾಮವಾಗಿ ಎಡರಂಗ ಮತ್ತಷ್ಟು ಬಲಗೊಂಡ ಪರಿಸ್ಥಿತಿ ನಿರ್ಮಾಣವಾಗಿದೆ.

ಎಡರಂಗ ತ್ರಿಪುರಾವನ್ನು ಮತ್ತಷ್ಟು ಅಭಿವೃದ್ಧಿಯತ್ತ ಕೊಂಡೊಯ್ಯಲು ಇನ್ನೂ ಹತ್ತು ಹಲವು ಯೋಜನೆಗಳನ್ನು ರೂಪಿಸಿ ಹಿಂದಿದ್ದ ಸಂಯುಕ್ತರಂಗ ಸರ್ಕಾರದ ಅವಧಿಯಲ್ಲಿ ಅನುಮೋದನೆ ಪಡೆದಿದೆ. ಆದರೆ ಈಗಿನ ಕೇಂದ್ರ ಯುಪಿಎ ಸರ್ಕಾರ ಎಡರಂಗದ ವಿರುದ್ಧ ನಿರಂತರ ತಾರತಮ್ಯ ಅನುಸರಿಸುತ್ತಾ ಈ ರಾಜ್ಯದ ರಸ್ತೆ, ರೈಲ್ವೆ, ವಾಯು, ಅಭಿವೃದ್ಧಿಗೆ, ವಿದ್ಯುತ್, ಉತ್ಪಾದನೆಗೆ ಅಗತ್ಯವಾದ ಹಣವನ್ನು ನೀಡುವಲ್ಲಿ ತಾರತಮ್ಯ ಮುಂದುವರೆಸಿದೆ. ಹಾಗಾಗಿ ಹಲವು ಯೋಜನೆಗಳನ್ನು ರಾಜ್ಯ ಸರ್ಕಾರ ನಿಗದಿಪಡಿಸಿದ ಸಮಯದೊಳಗಾಗಿ ಮುಗಿಸಲು ಸಾಧ್ಯವಾಗುತ್ತಿಲ್ಲ. ಅದಾಗ್ಯೂ ಇಡೀ ಈಶಾನ್ಯ ಭಾರತದಲ್ಲಿಯೇ ಗ್ರಾಮೀಣ ಅಭಿವೃದ್ಧಿ ಮತ್ತು ನಗರಾಭಿವೃದ್ಧಿ ಇತ್ಯಾದಿಗಳಲ್ಲಿ ತ್ರಿಪುರಾ ಸದಾ ಮುಂದಿದೆ. ಇದು ತನ್ನ ಸೀಮಿತ ವ್ಯಾಪ್ತಿಯೊಳಗೆ ಎಡರಂಗ ಮಾಡುತ್ತಿರುವ ಸಾಧನೆ.

ಮತ್ತೆ ಜನತೆಯೆಡೆಗೆ

ಇದೀಗ ಮತ್ತೆ ತ್ರಿಪುರಾದ ಎಡರಂಗ ಸರ್ಕಾರ 6ನೇ ಅವಧಿಗಾಗಿ ಎಡರಂಗಕ್ಕೆ ಅಭೂತಪೂರ್ವ ಬೆಂಬಲ ನೀಡಬೇಕೆಂಬ ಮನವಿಯೊಂದಿಗೆ ಜನತೆಯ ಮುಂದೆ ನಿಂತಿದೆ.

ತ್ರಿಪುರಾ ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಶಾಂತಿ ಮತ್ತು ಸೌಹಾರ್ದತೆಗಾಗಿ' ಎಡರಂಗಕ್ಕೆ ಬೆಂಬಲಿಸಿ ಎನ್ನುವುದು ಎಡರಂಗದ ಈ ಬಾರಿಯ ಚುನಾವಣಾ ಪ್ರಣಾಳಿಕೆಯಾಗಿದೆ, ಇದಕ್ಕಾಗಿ ಕಳೆದ ಹಲವು ತಿಂಗಳಿಂದ ಇಡೀ ತ್ರಿಪುರಾದಲ್ಲಿ ಎಡರಂಗಗಳ ಬೆಂಬಲಿಸಿ ಮಹಿಳೆಯರು, ವಿದ್ಯಾರ್ಥಿ ಯುವಜನರು, ಆದಿವಾಸಿಗಳು, ಬೃಹತ್ ಪ್ರಮಾಣದ ರ್‍ಯಾಲಿಗಳನ್ನು ಸಂಘಟಿಸಿದ್ದಾರೆ. ಈ ರ್‍ಯಾಲಿಯಲ್ಲಿ ಭಾಗವಹಿಸಿದ ಜನ ಸಮುದಾಯವನ್ನು ಗಮನಿಸಿದಾಗ, ಈ ಬಾರಿ ಮತ್ತು ಎಡರಂಗ ತನ್ನ ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಿ ಬಹುಮತಗಳಿಸುವುದು ಸ್ಪಷ್ಟಗೊಂಡಿದೆ.

ಆದರೆ ಕಾಂಗ್ರೆಸ್ ಮತ್ತೆ ಈ ಚುನಾವಣೆಯಲ್ಲಿ ಹೇಗಾದರೂ ಮಾಡಿ ಸಿಪಿಐ(ಎಂ) ಅಧಿಕಾರಕ್ಕೆ ಬರದಂತೆ ತಡೆಯಲು ಪ್ರತ್ಯೇಕವಾದಿಗಳ ಜೊತೆ ಗುಪ್ತವಾಗಿ ಕೈ ಜೋಡಿಸಿದೆ. ಉಗ್ರಗಾಮಿ ಸಂಘಟನೆಗಳ ರಾಜಕೀಯ ಮುಖವಾಡ ಹೊತ್ತಿರುವ ಐಎನ್‌ಪಿಟಿ ಜೊತೆ ಅದು ಚುನಾವಣೆ ಹೊಂದಾಣಿಕೆ ಮಾಡಿಕೊಂಡು ಎಡರಂಗದ ವಿರುದ್ಧ ಗುಪ್ತವಾಗಿ ಮುಖಂಡರ ಪ್ರತ್ಯೇಕವಾದಿ ಮುಖಂತರ ಜೊತೆ ಹಲವು ಸುತ್ತಿನ ಮಾತುಕತೆಗಳನ್ನು ನಡೆಸಿದೆ.

ಆಸ್ಸಾಂ, ಮೇಘಾಲಯ, ಮಿಜೊರಾಂ ಗಳಲ್ಲಿ ಇಂತಹ ಗುಪ್ತ ಮಾತುಕತೆಗಳು ನಡೆದಿವೆ ಎಂಬ ಸಂಗತಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿದ್ದಂತೆ ಅವರು ತಮ್ಮ ಕಾರ್ಯಸ್ಥಾನವನ್ನು, ದಕ್ಷಿಣ ಭಾರತದ ಪ್ರಮುಖ ನಗರಗಳಿಗೆ ಸ್ಥಳಾಂತರಿಸಿವೆ. ಈ ಎಲ್ಲಾ ಸಂಗತಿಗಳೂ ಕಾಂಗ್ರೆಸ್ ಪಕ್ಷದ ಕೇಂದ್ರ ನಾಯಕತ್ವಕ್ಕೂ ಗೊತ್ತಿರುವಂತದ್ದೇ. ಆದರೆ ಕೇಂದ್ರದ ಯುಪಿಎ ಸರ್ಕಾರಕ್ಕೂ ಎಡಪಕ್ಷಗಳ ಬೆಂಬಲ ನೆಚ್ಚಿಕೊಂಡಿರುವ ಸೋನಿಯಾಗಾಂಧಿ ಹಾಗೂ ಪ್ರಧಾನಿ ಮನಮೋಹನ್‌ಸಿಂಗ್ ತ್ರಿಪುರಾದಲ್ಲಿ ತಮ್ಮದೇ ಪಕ್ಷ ನಡೆಸುತ್ತಿರುವ ಈ ದೇಶವಿರೋಧಿ ಐಕ್ಯತೆ ಬಗ್ಗೆ ಕಂಡೂ ಕಾಣದಂತಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷ ತ್ರಿಪುರಾದಲ್ಲಿ, ಪಾಕಿಸ್ತಾನದ ಐಎಸ್‌ಐ ಹಾಗೂ ಅಮೇರಿಕದ ಸಿಐಎಗಳಿಂದ ನೇರವಾಗಿ ಬಾರಿ ಪ್ರಮಾಣದ ಹಣ ಪಡೆಯುವ ದೇಶವಿರೋಧಿ ಪ್ರತ್ಯೇಕವಾದಿಗಳೊಂದಿಗೆ ಕೈಜೋಡಿಸಿದೆ ಎಂಬುದಂತೂ ಈಗ ಜಗಜ್ಜಾಹೀರು.

ಆದರೆ ಕಾಂಗ್ರೆಸ್ ಮತ್ತದರ ದುಷ್ಟಕೂಟ ಎಷ್ಟೆಲ್ಲಾ ತಂತ್ರ ಪ್ರತಿ ತಂತ್ರ ರೂಪಿಸಿದರೂ ತ್ರಿಪುರಾ ರಾಜ್ಯವನ್ನು ಶಾಂತಿಯ ನಾಡಾಗಿಸುವಲ್ಲಿ ಸಾವಿರಾರು ಬಲಿದಾನ ಮಾಡಿರುವ ಅಲ್ಲಿಯ ಎಡರಂಗವನ್ನು ಅದರಲ್ಲೂ ವಿಶೇಷವಾಗಿ, ಸಿಪಿಐ(ಎಂ)ನ್ನು ಪ್ರಜ್ಞಾವಂತರಾದ ತ್ರಿಪುರಾದ ಮತದಾರರು ಬೆಂಬಲಿಸುತ್ತಾರೆ ಎಂಬ ವಿಶ್ವಾಸ ಎಡರಂಗಕ್ಕಿದೆ.

- ಗೌತಮ್ ದಾಸ್

ಕೋಲಾ ಬಾಟಲಿಯ ನೀರು ತೀರ್ಥವೇ?

ದ್ವಾರಕನಾಥ್ ರೊಂದಿಗೆ ಅನೌಪಚಾರಿಕ ಮಾತು

ಕರ್ನಾಟಕದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿರುವ ಶ್ರೀ ಸಿ.ಎಸ್. ದ್ವಾರಕನಾಥ್‌ರವರು ಪ್ರಗತಿಪರ ಚಿಂತನೆಗೆ ಹಾಗೂ ಶೋಷಿತ ವರ್ಗಗಳ ಅಭಿವೃದ್ಧಿಗೆ ಸದಾ ಬದ್ಧವಾಗಿ ಬರೆದವರು, ಬದುಕಿದವರು. ಕೋಮು ಸೌಹಾರ್ದತೆ- ಸಾಮರಸ್ಯಕ್ಕೆ ಶ್ರಮಿಸಿದವರು. ಕೋಮು ದ್ವೇಷದ ವಿಷಜ್ವಾಲೆ ಹಬ್ಬದಂತೆ ತಡೆಯಲೆತ್ನಿಸಿದವರು. ಬರಹಗಾರನಾಗಿ, ಪತ್ರಕರ್ತನಾಗಿ, ಖ್ಯಾತ ವಕೀಲರಾಗಿಯೂ ವಿಶಿಷ್ಟ ಛಾಪು ಮೂಡಿಸಿದ ವ್ಯಕ್ತಿತ್ವ ಅವರದು. ಹಿಂದೆ ಪೇಜಾವರ ವಿಶ್ವತೀರ್ಥ ಮಠಾಧೀಶರು ತಮ್ಮ ಶಿಷ್ಯ ಉಪನ್ಯಾಸಕ ವೆಂಕಟೇಶ್‌ಗೆ ಕಿರುಕುಳ ನೀಡಿ ದಾಳಿ ನಡೆಸಿದರು ಎಂಬ ಪ್ರಕರಣದಲ್ಲಿ ಪೇಜಾವರರಿಂದ ಆದ ಕಿರುಕುಳದ ಬಗ್ಗೆ ವೆಂಕಟೇಶ್ ಹೂಡಿದ ಮೊಕದ್ದಮೆಯನ್ನು ಸ್ವತಃ ದ್ವಾರಕನಾಥ್ ನಡೆಸಿದವರು. ಅವರ ಮೇಲೆ ಎಷ್ಟೇ ಒತ್ತಡ ಬಂದರೂ ಬಗ್ಗದೇ, ಆಯೋಗದ ಅಧ್ಯಕ್ಷರಾಗುವವರೆಗೂ ಸತತ ಹೋರಾಟ ನಡೆಸಿದ್ದು ಇತ್ತೀಚಿನ ವಿದ್ಯಮಾನ. ಇವೆಲ್ಲಾ ಕೊಡಗಿನಲ್ಲಿ ಆರ್.ಎಸ್.ಎಸ್. - ಬಿಜೆಪಿ ಪರಿವಾರ ನಡೆಸಿದ ದೌರ್ಜನ್ಯಕ್ಕೆ ಹಿನ್ನೆಲೆಯೂ ಆಗಿರಬಹುದೇ?
ಆ ಘಟನೆಯ ಬಗ್ಗೆ ನಾವು ಗಮನಿಸಿದ ಹಾಗೂ ಅನೌಪಚಾರಿಕ ಮಾತುಕತೆಯ ಸಾರಾಂಶ ಇಲ್ಲಿದೆ.

-ಎಸ್.ವೈ.ಜಿ.

ಸಾರ್, ನೀವು ಕೊಡಗಿಗೆ ಹೋಗಿದ್ದಾಗ ತೀರ್ಥ ಕುಡಿಯಲಿಲ್ಲ ಎಂದು ಕೆಲವರು ಗಲಾಟೆ ಮಾಡಿದರೆಂದು ವರದಿಯಾಗಿದೆ. ನೀವು ಕೊಡಗಿಗೆ ಭೇಟಿ ನೀಡಿದ ಉದ್ದೇಶ ಏನಿತ್ತು ಎಂದರೆ..
ನಮ್ಮ ಆಯೋಗವೀಗ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಹಿಂದುಳಿದ ವರ್ಗಗಳ ಸ್ಥಿತಿ-ಗತಿಯನ್ನು ಅಧ್ಯಯನ ಮಾಡುತ್ತಿದೆ. ಹಾಗಾಗಿ ಅಂತಹ ಅಧ್ಯಯನಕ್ಕಾಗಿ ಅಲ್ಲಿಗೆ ಹೋಗಿದ್ದವು ಎಂದೆವು. ಮಡಿಕೇರಿಯಲ್ಲಿ ಜಿಲ್ಲಾಧಿಕಾರಿಗಳಲ್ಲದೇ ವಿವಿಧ ಅಧಿಕಾರಿಗಳು ಹಾಗೂ ಟಿ.ಪಿ.ರಮೇಶ್, ಬಿ.ನಾಚಪ್ಪ, ಜಿಲ್ಲಾ ಪಂಚಾಯತ್ ಅಧ್ಯಕ್ಷ ದೀರ್ಘಕೇಶಿ ಉಪಾಧ್ಯಕ್ಷರು ಮನವಿ ಕೊಟ್ಟರು. ಕೊಡವರು, ಇತರ ಜನಾಂಗದ ಸ್ಥಿತಿಯ ಪರಿಚಯವೂ ಆಯಿತು. ನಂತರ ತಲಕಾವೇರಿ ರಸ್ತೆಯ ಕಣಿವೆಯೊಂದರಲ್ಲಿ 'ಕಾಪಾಳರು' ಎನ್ನುವ ಜನಾಂಗವನ್ನು ಭೇಟಿ ಮಾಡಲು ಹೊರಟೆ. ಅಲ್ಲೊಂದು ದಟ್ಟ ಕಾಡಿನ ನಡುವೆ ಆ ಜನಾಂಗದವರನ್ನು ಕಂಡೆವು. ಹಿಂದೆ ರಾಜ ಚಿಕವೀರರಾಜೇಂದ್ರ ಕಾಲದಲ್ಲಿ ಅಡಗು ತಾಣವೊಂದರನ್ನು ಅಲ್ಲಿ ನಿರ್ಮಿಸಲಾಗಿತ್ತು. ಅದನ್ನು ಕಾಪಾಡಲು ಇವರನ್ನು ನೇಮಿಸಲಾಗಿತ್ತು. ಅವರು ದೀಪಹಿಡಿದು ತಿರುಗುತ್ತಿದ್ದರು. ಆ ನಂತರದಲ್ಲಿಯೂ ಅಲ್ಲೇ ಇದ್ದುಬಿಟ್ಟಿದ್ದಾರೆ. ಅತ್ಯಂತ ಘೋರ ಬಡತನವನ್ನು ಅನುಭವಿಸುತ್ತಿದ್ದಾರೆ. ಅವರಿಗೆ ನಮ್ಮ ಸರ್ಕಾರದ ಯೋಜನೆಗಳು ಬಹಳಷ್ಟು ಗೊತ್ತೇ ಇಲ್ಲ. ಅವರಿಗೆ ಸಿಕ್ಕೇ ಇಲ್ಲ. ಹೀಗಾಗಿ ಅಲ್ಲಿನ ಭೇಟಿ ನನಗೆ ತುಂಬಾ ಮಹತ್ವದ್ದಾಯಿತು. ಆ ಬಳಿಕ ಅವರ ಮಕ್ಕಳಿಗೆ ಶಿಕ್ಷಣ-ಹಾಸ್ಟೆಲ್ ವ್ಯವಸ್ಥೆ, ಜನರಿಗೆ ಮನೆ ನಿರ್ಮಿಸಿಕೊಡುವಂತಹ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಲು ಅಧಿಕಾರಿಗಳಿಗೆ ಸೂಚಿಸಲು ಸಾಧ್ಯವಾಯಿತು.

ಆ ಬಳಿಕ ತಲಕಾವೇರಿಗೆ ಕರೆದೊಯ್ದರು. ಅಲ್ಲಿ ನನ್ನೊಬ್ಬ ಗೆಳೆಯ ಅಧಿಕಾರಿಯಿದ್ದರು. ಅವರು ಕುವೆಂಪು, ಬೇಂದ್ರೆ, ಮತ್ತಿತರ ಕನ್ನಡ ಸಾಹಿತ್ಯ ಕೃತಿಗಳನ್ನು ಓದಿದವರು. ಅಲ್ಲಿ ಇಳಿದ ಮೇಲೆ ನಾವು ನಿಸರ್ಗವನ್ನು ನೋಡುತ್ತಾ ನಿಂತೆವು. ಕಣಿವೆ ಇಳಿದು - ಹತ್ತಿ ಆಯಾಸವಾಗಿತ್ತು. ನಂತರ ಹಿಂತಿರುಗಿದೆವು.



ಜ.ಶಕ್ತಿ : ಅಂದರೆ ಆ ಘಟನೆ ನಡೆದಿದ್ದೆಲ್ಲಿ?

ಸಿ.ಎಸ್.: ನಾನು ಮರುದಿನ ಸ್ನಾನ ಮಾಡಿ ಬಾತ್‌ರೂಂನಿಂದ ಹೊರಗೆ ಬಂದಾಗಲೇ ಗದ್ದಲ ನಡೆಯುತ್ತಿತ್ತು. ಘೋಷಣೆ ಹಾಕಲಾಗುತ್ತಿತ್ತು. ಆಗ ಏಕಾಏಕಿ ಸುಮಾರು 100 ರಷ್ಟಿದ್ದ ಜನ ಅಲ್ಲಿ ಕಾವಲಿದ್ದ ಪೊಲೀಸ್ ಪೇದೆಗಳನ್ನು ತಳ್ಳಿ ಗಲಾಟೆ ಮಾಡುತ್ತಲೇ ಒಳಗೆ ನುಗ್ಗಿ ನನ್ನನ್ನು ಸುತ್ತುವರಿದರು. ಕೂಡಲೇ ನನಗೇನೂ ತೋಚಲಿಲ್ಲ. ಅಲ್ಲಿದ್ದವರಲ್ಲಿ ಅರ್ಧದಷ್ಟಾದರೂ ಜನ 'ಕುಡಿದಿದ್ದರು'. ಅತ್ಯಂತ ಅಸಹ್ಯಕರ, ಕೀಳು ಭಾಷೆಯಿಂದ ನನ್ನನ್ನು ಬೈಯುತ್ತಿದ್ದರು. 'ನೀನ್ಯಾಕೆ ದೇವಸ್ಥಾನಕ್ಕೆ ಹೋಗಲಿಲ್ಲ. ತೀರ್ಥ ಯಾಕೆ ಕುಡಿಯಲಿಲ್ಲ' ಎಂದೆಲ್ಲಾ ದಬಾಯಿಸಿದರು. ತೀರ್ಥ ಕುಡಿ ಎಂದು ಒತ್ತಾಯಿಸಿದರು. ಅಲ್ಲಿ ದೇವಸ್ಥಾನ ಇರೋದೇ ನನಗೆ ಗೊತ್ತಿರಲಿಲ್ಲ ಕಣ್ರೀ ಎಂದೆ. ಒಬ್ಬಾತ ನೀರು ಸುರಿದು ತೀರ್ಥ ಕುಡಿ ಎಂದ. ಇನ್ನೊಬ್ಬ ಹಣೆಗೆ ಬಲವಂತವಾಗಿ ಕುಂಕುಮ ಹಚ್ಚಿದ. ನಾನು ಜಲಸಂಸ್ಕೃತಿಯಿಂದ ಬಂದವನು. ಕಾವೇರಿ ಹನಿ ನೀರು ನನಗೆ ಪವಿತ್ರ ಎಂದೆ. ಮಾತೃ ಸಂಸ್ಕೃತಿ ನನ್ನದು. ನೆಲ, ಜಲದ ಬಗ್ಗೆ ಗೌರವವಿರುವವನು ನಾನು ಎಂದೆ. ಅವರು ದೌರ್ಜನ್ಯವಾಗಿ ಅದನ್ನೆಲ್ಲಾ ಮಾಡಿದರು. ಆ ತೀರ್ಥ ಎಂಬ ನೀರು ಇದ್ದದ್ದು 'ಕೋಕಾಕೋಲಾ' ಬಾಟಲಿಯಲ್ಲಿ. ಅಲ್ಲಯ್ಯಾ ಬಾಟ್ಲಿಯಲ್ಲಿರೋದು ಅದ್ಹೇಗೆ ತೀರ್ಥ ಆಗುತ್ತದೆ. ಕನಿಷ್ಟ ಅದು ಪಂಚಪಾತ್ರೆ, ಉದ್ದರಣೆಯಲ್ಲಾದರೂ ಇರಬೇಕು. ಅದಕ್ಕೆ ಶಂಖದಿಂದ ಬಂದರೇನೇ ತೀರ್ಥ ಅನ್ನೋದು ಎಂದು ಹೇಳಿದೆ. ಅದು ಅವರಿಗೆ ಬೇಕಿರಲಿಲ್ಲ. ಆ 'ನೀರು' ನೆಲದ ಮೇಲೆ ಸೋರಿತು. ಅದನ್ನೇ ಅವರು ತುಳಿದಾಡಿದರು. ಇದೆನ್ರಯ್ಯಾ ತೀರ್ಥ ಅಂತೀರೀ, ತುಳಿತ ಇದೀರಿ ಎಂದರೂ ಕೇಳಲಿಲ್ಲ. 'ನೀನು ತನ್ವೀರ್ ಶೇಟ್ ಗಿಂತಲೂ ಅಧಮ, ಅದ್ವಾನ. ಅವನಾದರೂ ಕನಿಷ್ಟ ತೀರ್ಥ ಕುಡಿದ. ನೀನು ಇನ್ನೂ ಅದ್ವಾನ' ಎಂದೆಲ್ಲಾ ಏಕವಚನದಲ್ಲಿ ಮಾತನಾಡಿದರು.

ಜ.ಶ.: ಅವರ ನಿಜವಾದ ಕಾಳಜಿ ಏನಿತ್ತು?

ಸಿ.ಎಸ್.: ಅವರಿಗೆ ದೇವರು, ಧರ್ಮ, ಸಂಸ್ಕೃತಿ ಎಂಬುದು ಕೇವಲ ನೆಪವಾಗಿ ಬಳಸಿದರು. ಕೊಡಗಿನ ಜನ ಅವರ ಅತಿಥಿಗಳನ್ನು ಅತ್ಯಂತ ಆದರದಿಂದ ಬರ ಮಾಡಿಕೊಂಡು, ಸತ್ಕರಿಸುತ್ತಾರೆ. ಅಲ್ಲಿಯ ಜನಾಂಗದ ಸಂಸ್ಕೃತಿ, ಆಚರಣೆ, ಭಾಷೆ ನಿಜಕ್ಕೂ ಹೆಮ್ಮೆ ಪಡುವಂತಿದೆ. ಆದರೆ ಈ ಗುಂಪಿನೊಟ್ಟಿಗೆ ಮುಂಚೂಣಿಯಲ್ಲಿದ್ದ ಮಾಜಿ ಶಾಸಕ ಬೋಪಯ್ಯ, ಸೋಮೇಶ್ ಎನ್ನುವ ಪತ್ರಕರ್ತರು, ಅವರ ಹಿಂಬಾಲಕರು ವರ್ತಿಸಿದ್ದು ನೋಡಿದರೆ ಅವರು 'ಕೊಡಗಿಗೆ, ಕೊಡಗಿನ ಜನರಿಗೆ ಅವಮಾನ'. ಅವರು ತೀರ್ಥ ತುಳಿದದ್ದು, ಆಡಿದ ಮಾತುಗಳು ಖಂಡಿತ ಒಂದು ಧರ್ಮ ಸಂಸ್ಕೃತಿಯನ್ನು ರಕ್ಷಿಸುವಂತಿರಲಿಲ್ಲ. ಅಮೆರಿಕಾದ ಬಹುರಾಷ್ಟ್ರೀಯ ಕಂಪನಿಯ ಬಾಟಲಿಯಲ್ಲಿ ನೀರು ತಂದು ತೀರ್ಥ ಎಂದು ಸುರಿದಿದ್ದು ನನಗೆ ಸಂಕೇತವಾಗಿಕಂಡಿತು.

ಜ.ಶ: ಇಷ್ಟಾಗುವಾಗ ನೀವು ಪ್ರತಿರೋಧಿಸಲಿಲ್ಲವೇ? ನಿಮ್ಮ ಪ್ರತಿಕ್ರಿಯೆ ಏನಿತ್ತು?

ಜನರ ಬದುಕು ಮುಖ್ಯವಾಗಬೇಕು

ಸಿ.ಎಸ್.: ನನಗೆ ಈ ಹಠಾತ್ ಧಾಳಿಯಿಂದ ಏನೂ ತೋಚಲಿಲ್ಲ. ಅವರು ಎತ್ತಿದ ಪ್ರಶ್ನೆಗಳಿಗೂ ಕುಳಿತು ಒಂದೊಂದಾಗಿ ಮಾತನಾಡೋಣ ಎಂದೆ. ಅವರಿಗೆ ಸೌಜನ್ಯವಿರಲಿಲ್ಲ. ಅವರು ನನ್ನ ಮೇಲೆ ದೈಹಿಕವಾಗಿ ಹಲ್ಲೆ ಮಾಡಲು ಏರಿ ಬರುತ್ತಿದ್ದರು, ಅದಕ್ಕೂ ಹೇಸುತ್ತಿರಲಿಲ್ಲ ಎನಿಸಿತು.

ಒಬ್ಬ ಮಾಜಿ ಶಾಸಕ, ಇನ್ನೊಬ್ಬರು ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಎಂಬುದು ಕೊಡಗಿನಲ್ಲಿ ಈ ಶಕ್ತಿಗಳ ಅಟ್ಟಹಾಸ ತೋರಿಸುತ್ತಿದೆ ಎಂದು ಮಾತನಾಡುತ್ತಿರುವಾಗ ಪತ್ರಿಕೆಗೆ ಅನಿಸಿತು. ಅವರಿಗೆ ಧಾರ್ಮಿಕ ಆಚರಣೆ ಬಗ್ಗೆ ಕಾಳಜಿ ಇರಲಿಲ್ಲ. ಹೌದು ತೀರ್ಥ ಕುಡಿಯಲು, ದೇವಸ್ಥಾನಕ್ಕೆ ಹೋಗೋದು ಬಿಡೋದು ಅವರವರಿಗೆ ಬಿಟ್ಟ ವಿಚಾರ. ಅದು ಅವರ ಹಕ್ಕು. ನಮ್ಮ ಸಂಸ್ಕೃತಿಯಲ್ಲಿ ಆಸ್ತಿಕತೆ-ನಾಸ್ತಿಕತೆ ಎರಡೂ ಭಾರತೀಯ ತತ್ವಶಾಸ್ತ್ರದ ಮುಖ್ಯ



ಭಾಗಗಳಾಗಿವೆ. ನಾನು ಹೇಗಿರಬೇಕು, ಏನೇನು ಮಾಡಬೇಕು ಎಂದು ಹೇಳಲು ಇವರ್‍ಯಾರು? ಅದೂ ಅಲ್ಲಿ ದೇವಸ್ಥಾನ, ತೀರ್ಥ ಗೊತ್ತಿಲ್ಲದೇ ಇರುವಾಗಲೂ ಇವರ ದಬಾವಣೆ ಏನು. ಪ್ರಶ್ನಿಸಿದರೆ ತಪ್ಪೇನಿದೆ. ಹೀಗೆ ಯೋಚನೆಗಳು ಬಂದವು.

ಜ.ಶ.: (ಮಾತು ಮುಂದುವರಿಸಿ) ಅವರ ಉದ್ದೇಶಗಳೇನಿರಬಹುದು?

ಸಿ.ಎಸ್.: ಅವರು ಹಿಂದುಳಿದ ವರ್ಗಗಳ ಏಳಿಗೆಯನ್ನು ಸಹಿಸುವವರಲ್ಲ ಎಂದೆನಿಸಿತು. ಅವರು ಪ್ರತಿರೋಧಿಸುವ ರಾಜಕೀಯ ಹಾಗೂ ತಾತ್ವಿಕ ಸಿದ್ಧಾಂತ, ಸಂಘಟನೆಗಳು ಈ ವರ್ಗಗಳ ವಿರುದ್ಧವಾಗಿವೆ. ಮೇಲಾಗಿ ನಾನು ಕೋಮು ಸೌಹಾರ್ದತೆ, ಸಾಮರಸ್ಯ, ಶೋಷಿತ ಜನಾಂಗಗಳ ಅಭಿವೃದ್ಧಿಗೆ ಬದ್ಧ.... ಅದನ್ನೇ ನಿರಂತರವಾಗಿ ನನ್ನ ಬರವಣಿಗೆ ಹಾಗೂ ಬದುಕಿನಲ್ಲಿ ಪ್ರತಿಪಾದಿಸುತ್ತಾ ಬಂದವನು. ಒಪ್ಪದವರು ಅವರ ವಿಚಾರ ಅವರಿಗೆ. ಒಂದು ವೇಳೆ ಯಾರೇ ಆದರೂ ವ್ಯಕ್ತಿಯ ಮೇಲೆ ಧಾಳಿ ಮಾಡಬಹುದೇ ಹೊರತು ವಿಚಾರಗಳ ಮೇಲಲ್ಲ ಎಂಬುದು ನೆನಪಿಡಬೇಕು.

ಹಿಂದಿನ ಚುನಾವಣೆಗೆ ಸ್ವಲ್ಪ ಹಿಂದೆ ಬಿಜೆಪಿ ಅಲ್ಲಿ ಜನರಿಂದ ದೂರವಾಗಿ, ಒಳಜಗಳದಿಂದ ಬರಿಯುತ್ತಿರುವಾಗ, ಜನ ಕಾಫಿ, ಭತ್ತ, ಮೆಣಸಿಗೆ ಬೆಲೆ ಸಿಗದೇ ಹೋರಾಟದ ಹಾದಿಯಲ್ಲಿ ಇರುವಾಗ ಪಾಲೂರು ಘಟನೆ ಸೃಷ್ಟಿಸಿ ಕೋಮುಗಲಭೆ ಎಬ್ಬಿಸಿ, ಚುನಾವಣಾ ಲಾಭ ಪಡೆದದ್ದು ನಮಗೆ ನೆನಪಾಯಿತು. ಈ ಬಗ್ಗೆ ಪತ್ರಿಕೆಯೂ ಬರೆದಿದೆ. ಈಗಲೂ ಅಂತಹ ಹುನ್ನಾರವಿರಬಹುದೇ? ಎಂಬ ಪ್ರಶ್ನೆ ಉದ್ಭವಿಸಿತು.

ಮೌನದ ನಂತರದಲ್ಲಿ ಸಿ.ಎಸ್.: ಜನರ ಬದುಕು ಮುಖ್ಯವಾಗಬೇಕು. ಅಲ್ಲಿ ದೌರ್ಜನ್ಯ ನಡೆಸಿದ ಅವರಿಗೆ ಇದು ಇರಲಿಲ್ಲ. ತೋರಿಕೆಗೆ ತೀರ್ಥ ಹಿಡಿದಿದ್ದರು ಎಂದರು.

ಹೌದು! ಈ ಪ್ರಕರಣದ ಬಗ್ಗೆ ಜಿಲ್ಲಾ ಆಡಳಿತ ಹೇಗೆ ಕ್ರಮ ವಹಿಸಿದೆ? ನಮ್ಮ ಕುತೂಹಲ ಮತ್ತು ಪ್ರಶ್ನೆ

ಅಲ್ಲಿನ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ, ಜಿಲ್ಲಾಧಿಕಾರಿಗಳು ದ್ವಾರಕನಾಥರೇ ದೂರು ನೀಡಬೇಕಿತ್ತು ಎಂದಿದ್ದಾರೆ. ಇದು ಸರಿಯಲ್ಲ. ಅವರು ಸರ್ಕಾರದ ಪ್ರತಿನಿಧಿ. ಆಯೋಗದ ಅಧ್ಯಕ್ಷರಿಗೆ ಕಾನೂನಾತ್ಮಕ ಸ್ಥಾನವಿದೆ. ಮೇಲಾಗಿ ಅವರ ಸುಪರ್ದಿನಲ್ಲೇ ಇದ್ದಾರೆ. ಇಬ್ಬರು ಪೇದೆಗಳು ಸದಾ ಜೊತೆಗಿದ್ದಾರೆ. ಅವರ ಸಮ್ಮುಖದಲ್ಲೇ ಇದೆಲ್ಲಾ ನಡೆದಿರುವಾಗ 'ಸ್ವಮೋಟೋ' ಆಗಿ ತಾವೇ ನೇರವಾಗಿ ಕೇಸ್ ದಾಖಲಿಸಿ ಮುಂದಿನ ಕಾನೂನು ಕ್ರಮ ವಹಿಸಬೇಕಿತ್ತು. ಅದು ಬಿಟ್ಟು ಸಿ.ಎಸ್. ತೀರ್ಥ ಕುಡಿದು ಬಿಟ್ಟರೆಂದೂ, ಅಲ್ಲಿಗೆ ಪ್ರಕರಣ ಮುಗಿಯಿತೆಂದು ಮಾತನಾಡೋದು ಸರಿಯಲ್ಲ.

ಜ.ಶ.: ಮತ್ತೆ ಮಾತಿಗೆಳಿಯುತ್ತಾ ಯಾರಿಗಾದರೂ ದೂರು ನೀಡಿದಿರೆ?

ಸಿ.ಎಸ್.: ನಾನು ರಾಜ್ಯಪಾಲರಿಗೆ ವಿವರವಾಗಿ ಪತ್ರ ಬರೆದಿರುವೆ. ಅವರು ಮುಂದಿನ ಕ್ರಮ ವಹಿಸಬೇಕು. ಮಾತು ನಿಲ್ಲಿಸಿದರು.

ಇಲ್ಲಿ ಬಂದು ಗಮನಿಸಬೇಕಾದ ಸಂಗತಿ ಎಂದರೆ ಇಂತಹ ಅಭಿವ್ಯಕ್ತಿ, ವ್ಯಕ್ತಿಗತ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಧಾಳಿ ಮಾಡುವ ಕ್ರಮಗಳು ಅಪಾಯದ ಸೂಚನೆ. ಅನಂತಮೂರ್ತಿ, ಗಿರೀಶ್ ಕಾಸರವಳ್ಳಿ ಕಾರ್ನಾಡ್ ಅಲ್ಲದೇ ಹಲವಾರು ಹೋರಾಟಗಾರರ ಮೇಲೆ ಮೇಲೆಯೇ ಇಂತಹ ಅಪಪ್ರಚಾರ, ಧಾಳಿ ನಡೆಸುತ್ತಾರೆ ಎಂದರೆ ಮುಂಧೆ ಹೇಗೆ ಎಂಬ ಪ್ರಶ್ನೆ ಬರುತ್ತದೆ. ಈ ಖಾವಿ ಪಡೆ ರಾಜ್ಯದಲ್ಲಿ ಅಧಿಕಾರ ಹಿಡಿದುಬಿಟ್ಟರೆ?

'ಇಷ್ಟು ಮಾತ್ರ ನಿಜ. ನಾನು ಮೌಲ್ಯಗಳಿಗಾಗಿ ಹೋರಾಡುವವನು. ಮುಂದೆಯೂ ಹೋರಾಡುತ್ತೇನೆ.

ಅವರ ಮಾತಿನಲ್ಲಿ ದೃಢತೆ ಇತ್ತು, ಎದುರಿಸುವ ಛಲವಿತ್ತು. ನ್ಯಾಯದ ನಿರೀಕ್ಷೆಯೂ....

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH